
ನೆಲದ ಸಂಸ್ಕೃತಿ

# ಆದಿಮ

ಲಿವಿಂಗ್ ಟ್ರೈಬ್ಸ್

ತಪ್ಪು ಚಿಕ್ಕದು ಮಾಡು ತೆಪ್ಪ ದೊಡ್ಡದು .ಮಾಡು

RN
KARKAN 22229/10/1/2012-
ಸಂಪುಟ :
ಸಂಚಿಕೆ :
ಪುಟಗಳು :
ಜೂನ್–ಜುಲೈ 20
ಬೆಲೆ : 10 ರ



## ಮೈಕೆಲ್ ಫೊಕೋ ಮಾನವ ಜೀವನಾನುಭವದ ಇತಿಹಾಸಕಾರ


◆

## ಗಂಗೆಗೌರಿ, ಕೆಂಪಿ ಬುಡ್ಡಿಯರನ್ನು ಕೂಗಿ...

◆

## ಮಾರ್ಕ್ವಾ ಮೀನುಗಳ ಮುಂದುವರೆದ ರೌಡಿಸಂ

◆



ದಕ್ಷಿಣ ಭಾರತದ
ಮೊದಲ ದಲಿತ ಹೋರಾಟಗಾರ

## ಅಯೋತಿದಾಸ್

# 'ಸಿರದ ಗಾಳ', 'ಉರಿಯ ಉಯ್ಯಲೆ', ಮೂದಲೆಯ ಉಲಿ'–


## ಜನಪದ ಚಟುವಟಿಕೆಗಳತ್ತ ಒಂದು ನೋಟ

⌘ ವಡ್ಡಗೆರೆ ನಾಗರಾಜಯ್ಯ

ಮಾರಿಗೆ ಪ್ರಾಣಬಲಿ ಕೊಡುತ್ತಿದ್ದ ಆಚರಣೆಯನ್ನು ಕುರಿತು ಜನ್ನನ 'ಯಶೋಧರ ಚರಿತೆ'ಯ ಪದ್ಯಗಳಲ್ಲಿ ಉಲ್ಲೇಖಗೊಂಡಿದೆ.

ಆ ದೇವಿಯ ಜಾತ್ರೆಗೆ ಮೊಳೆ।
ವೋದೆಳವೆರೆ ಸಿರದ ಗಾಳಮುರಿಯುಯ್ಯಲೆ ಕೈ॥
ವೋದಸುಕೆ ಕೋಕಿಲಧ್ವನಿ।
ಮೂದಲೆಯುಲಿಯಾಗೆ ಬಂದನಂದು ವಸಂತಂ॥

ವಸಂತಮಾಸದಲ್ಲಿ ಬರುವ ಮಾರಿಜಾತ್ರೆಯ ಸಂದರ್ಭದಲ್ಲಿ ಚಂಡಮಾರಿ ದೇವತೆಗೆ ಅದೇ ದೇವಮಂದಿರದ ಆವರಣದಲ್ಲಿ ಬಲಿಪಶುವನ್ನು ಅರ್ಪಿಸುವ ಕ್ರೂರ ಆಚರಣೆಯನ್ನು ಜನ್ನ ಕವಿ ವಿವರಿಸುತ್ತಾನೆ. ಬಾಲಚಂದ್ರನು ಸಿರದ ಗಾಳ (ಸಿಡಿ ಆಚರಣೆಯಲ್ಲಿ ಬಳಸುವ ಕಬ್ಬಿಣದ ಕೊಕ್ಕೆ)ದಂತೆ, ಚಿಗುರಿದ ಅಶೋಕ ವೃಕ್ಷವು ಉರಿಯ ಉಯ್ಯಾಲೆಯಂತೆ, ಕೋಕಿಲಧ್ವನಿಯು ಮೂದಲೆಯ ಉಲಿಯಂತೆ ತೋರುತ್ತಿರಲು ವಸಂತಮಾಸ ಆಗಮಿಸುತ್ತದೆ. ವಸಂತಮಾಸದ ಪ್ರಕೃತಿ ವ್ಯಾಪಾರದೊಂದಿಗೆ ಮಾರಿ ಜಾತ್ರೆಯ ಆಚರಣಾ ವಿಧಿಗಳಾದ 'ಸಿರದ ಗಾಳ', 'ಉರಿಯ ಉಯ್ಯಲೆ', ಮೂದಲೆಯ ಉಲಿ' ಮುಂತಾದ ಜನಪದ ಚಟುವಟಿಕೆಗನ್ನು ಜನ್ನ ನಮೀಕರಿಸುತ್ತಾನೆ. ಮಾರಿ ಜಾತ್ರೆಯಲ್ಲಿ ಸಿರದಗಾಳ, ಉರಿಯ ಉಯ್ಯಲೆ ಆಚರಣೆಗಳಷ್ಟೇ ಅಲ್ಲದೆ 'ಮೂದಲೆಯ ಉಲಿ' ಅಂದರೆ ಬಯ್ಗುಳಗಳ ಆಚರಣೆಯೂ ಚಾಲ್ತಿಯಲ್ಲಿದ್ದ ಅಂಶವನ್ನು ಈ ಪದ್ಯ ಸೂಚಿಸುತ್ತದೆ. ಇದು ಒಂದರ್ಥದಲ್ಲಿ ಮಾರಿ ಜಾತ್ರೆಯಲ್ಲಿ ಆಸಾದಿಗಳು ದೇವತೆಯನ್ನೂ, ದೇವರ ಭಕ್ತರನ್ನೂ, ಮೇಲ್ಜಾತಿಗಳವರನ್ನೂ ಬಯ್ಯುವ ಆಚರಣೆಯನ್ನು ಸೂಚಿಸುತ್ತದೆ.



ನಮ್ಮ ಗ್ರಾಮೀಣ ಭಾಗದ ಜನ 'ಸಿರ' ಅಂದರೆ ತಲೆಯ ಹಿಂಬದಿಯಲ್ಲಿರುವ ಕುತ್ತಿಗೆ ಭಾಗವನ್ನು 'ಸಿರಪಟ್ಟೆ' ಎನ್ನುತ್ತಾರೆ. ಮಾರಿಜಾತ್ರೆಯಲ್ಲಿ ಆಚರಿಸಲಾಗುವ 'ಸಿಡಿ' ಆಟಕ್ಕೆ ತೊಡುಗುವ ವ್ಯಕ್ತಿಯ ಕುತ್ತಿಯ ಹಿಂಬದಿಯಲ್ಲಿರುವ ಸ್ನಾಯುಗಳ ಮೇಲೆ ಮುಷ್ಟಿಯಿಂದ ಗುದ್ದಿ ನರಗಳನ್ನು ಸಡಿಲಿಸಲಾಗುತ್ತದೆ. ಸಡಿಲಿಸಿದ ಮುಖ್ಯ ನರದ ಹುರಿಗಳಿಗೆ ಕಬ್ಬಿಣದ ಗಾಳವನ್ನು ಸಿಕ್ಕಿಸಿ, ಅವನನ್ನು ಸಿಡಿಗಂಬವನ್ನೇರಿಸಿ ಆಕಾಶದಲ್ಲಿ ತೂಗಾಡಿಸಲಾಗುತ್ತದೆ. ಸಿಡಿ ಆಟ ಆಡುವ ವ್ಯಕ್ತಿಯ ಕತ್ತಿನ ಸಿರದ ನರದ ಹುರಿಗಳಿಗೆ ಸಿಕ್ಕಿಸುವ ಕೊಕ್ಕೆಯನ್ನು 'ಸಿರಗಾಳ'ವೆಂದೂ, ಸಿಡಿ ಆಟದ ಕಂಬವನ್ನು 'ಸಿಡಿಗಂಬ'ವೆಂದೂ ಕರೆಯುತ್ತಾರೆ. ದ್ರಾವಿಡ ಭಾಷಿಕ ಜನವರ್ಗದಲ್ಲಿ ಎಕ್ಕತ್ತು (ತಲೆಯ ಹಿಂಬದಿಯ ಕತ್ತು), ಎಕ್ಸಿರ (ತಲೆಯ ಹಿಂಬದಿಯ ಕತ್ತಿನ ಭಾಗ), ಎಕ್ಕೆಚ್ಚು (ಅಹಂಕಾರ) ಇಂತಹ ಶಬ್ದಗಳಿವೆ. ಜನ್ನ ಕವಿ ಹೇಳುವ 'ಸಿರದ ಗಾಳ'ವು ಸಿಡಿ ಆಟದಲ್ಲಿ ವ್ಯಕ್ತಿಯ ತಲೆಯ ಹಿಂಬದಿಯ ಕುತ್ತಿಗೆಯ ಸ್ನಾಯುಗಳಲ್ಲಿರುವ ನರಗಳಿಗೆ ಸಿಕ್ಕಿಸುವ ಕಬ್ಬಿಣದ ಕೊಕ್ಕೆಯೇ ಆಗಿದೆ.

ಬೆನ್ನಸ್ನಾಯುಗಳ ಮುಖ್ಯನರಗಳನ್ನು ವ್ಯಕ್ತಿಯ ಸಿರಭಾಗದಲ್ಲಿ ಹುಡುಕಿ ಕಬ್ಬಿಣದ 'ಸಿರಗಾಳ' ಸಿಕ್ಕಿಸಿ, ಅವನನ್ನು ಸಿಡಿಗಂಬದ ಮೇಲೆ ತೂಗಾಡಿಸುತ್ತಿದ್ದ 'ಸಿಡಿ' ಆಚರಣೆಯನ್ನು ಜನ್ನ ಕವಿ ಈ ಪದ್ಯದಲ್ಲಿ ಚಿತ್ರಿಸಿದ್ದಾನೆ. ಜನ್ನನಿಗೆ ಮಾರಿಜಾತ್ರೆಯ ಜನಪದ ಆಚರಣೆಗಳು ತುಂಬಾ ಚೆನ್ನಾಗಿ ಪರಿಚಯವಿದ್ದಂತೆ ಕಾಣಿಸುತ್ತದೆ. ಜನ್ನನ ಇದೇ ಕೃತಿಯಲ್ಲಿ ಬರುವ ಮತ್ತೊಂದು ಪದ್ಯದಲ್ಲಿ

ತಾಳುಗೆಯ ನುರ್ಚಿ ನೆತ್ತಿಯ
ಗಾಳಂ ಗಗನದೊವಿಲ್ವ ವಾರಿಯ ಬೀರರ್।
ಪಾಳಿಯೊಳೆಸೆದರ್ ಪಾಪದ
ಜೋಳದ ಬೆಳಸಿಂಗೆ ಬೆರ್ಚುಗಟ್ಟಿದ ತೆರೆದಿಂ॥

ಎಂದು ಹೇಳುತ್ತಾನೆ. 'ನೆತ್ತಿಯ ಗಾಳ'ವನ್ನು ನರದ ಹುರಿಗಳಿಗೆ ಸಿಕ್ಕಿಸಿಕೊಂಡು ಗಗನದಲ್ಲಿ ತೂಗಾಡುವ ವೀರರ ಚಿತ್ರವನ್ನು ಗಮನಿಸಿದಾಗ 'ಸಿರದಗಾಳ'ದಂತೆಯೇ 'ನೆತ್ತಿಯ ಗಾಳ' ಎಂಬ ಮತ್ತೊಂದು ರೀತಿಯ ಕಬ್ಬಿಣದ ಕೊಂಡಿ ಇರುವುದೋ, ಅಥವಾ ಸಿರದ ಗಾಳವನ್ನೇ ನೆತ್ತಿಯ ಗಾಳ ಎಂಬ ಮತ್ತೊಂದು ಹೆಸರಿನಿಂದಲೋ ಜನ್ನನ ಕಾಲದಲ್ಲಿ ಕರೆಯುತ್ತಿದ್ದಿರಬಹುದೆಂದು ತಿಳಿದುಬರುತ್ತದೆ. ನೆತ್ತಿಯ ಗಾಳ ಅಥವಾ ಸಿರಗಾಳವನ್ನು ಬಳಸಿ ಮಾರಿದೇವತೆಯ ಮುಂದೆ ಸಿಡಿ ಆಡುವಂತೆಯೇ 'ಉರಿಯ ಉಯ್ಯಲೆ' ಎಂಬ ಮತ್ತೊಂದು ಜನ ಪದ ಆಚರಣೆಯನ್ನು ಆಚರಿಸುತ್ತಿದ್ದ ಕಡೆಗೆ ಜನ್ನಕವಿ ಓದುಗರ ಗಮನ ಸೆಳೆಯುತ್ತಾನೆ. ನಮ್ಮ ಗ್ರಾಮೀಣ ಪ್ರದೇಶದ ನೆಲದೇವತೆಗಳ ಜಾತ್ರೆಗಳಲ್ಲಿ ಕೊಂಡ ಹಾಯುವ ಮತ್ತು ಕೆಂಡಕೊಂಡವಾಗುವ ಆಚರಣೆಗಳು ನಡೆಯುತ್ತಿದ್ದವು. ಕೊಂಡ ಹಾಯುವ ಆಚರಣೆಯಲ್ಲಿ ಭಕ್ತರು ಕೆಂಡವನ್ನು ತುಳಿಯುತ್ತಾ ಕೆಂಡದ ರಾಶಿಯಿಂದ ಪಾರಾಗುವುದು ಅಥವಾ ಕೆಂಡವನ್ನು ನಂದಿಸುವುದು ಒಂದು ಬಗೆಯಾದರೆ, ಅಗಿಗೊಂಡಕ್ಕೆ ಬಿದ್ದು ದೇಹವನ್ನು ದೇವರ ಹೆಸರಿನಲ್ಲಿ ಸಮರ್ಪಿಸಿಕೊಂಡು ಭಕ್ತರೇ 'ಕೆಂಡಕೊಂಡ'ವಾಗುವುದು ಇನ್ನೊಂದು ಬಗೆ. ಸತಿ ಪದ್ಧತಿ ಚಾಲ್ತಿಯಲ್ಲಿದ್ದ ಪ್ರಾಚೀನ ಕಾಲದಲ್ಲಿ ಗಂಡ ಸತ್ತು ವಿಧವೆಯಾದ ಹೆಣ್ಣುಮಗಳು ಚಿತೆಯೇರಿ ಸತ್ತ ಗಂಡನೊಂದಿಗೇ ಉರಿದು 'ಕೆಂಡಕೊಂಡ'ವಾಗುತ್ತಿದ್ದಳು. ದೇವರ ಹೆಸರಿನಲ್ಲಿ ಅಗ್ನಿಗೆ ದೇಹವನ್ನು ಸಮರ್ಪಿಸಿಕೊಳ್ಳುತ್ತಿದ್ದ ಸಂಪ್ರದಾಯ ಜನ್ನನ ಕಾಲದಲ್ಲಿ ರೂಢಿಯಲ್ಲಿತ್ತೆಂದು, 'ಯಶೋಧರ ಚರಿತೆ'ಯಲ್ಲಿ ಜನ್ನನು ಉಲ್ಲೇಖಿಸಿರುವ 'ಉರಿಯ ಉಯ್ಯಲೆ'

(23ನೇ ಪುಟಕ್ಕೆ...)

# ರಹೀಮನ ಮತ್ಸ್ಯ ಸಂವಹನಾ ಶಾಸ್ತ್ರವೂ, ಮತ್ತು ಮಾರ್ವಾ ಮೀನುಗಳ ಮುಂದುವರೆದ ರೌಡಿಸಂ


ಇತ್ತೀಚೆಗೆ ನನ್ನ ಎದೆ ಭೂಮಿಗೆ ಎಂಟ್ರಿ ಪಡೆದಿರುವ ಪಾತ್ರಗಳ ಜೊತೆಗೆ ಏಗುವುದು ಕಷ್ಟವಾಗಿದೆ. ಒಬ್ಬನ ಬಗ್ಗೆ ಬರೆಯುವಾಗ ಅದು ಹೇಗೋ ಇನ್ನೊಬ್ಬನಿಗೆ ತಿಳಿದು ಅವನೂ ಬಂದು 'ನಂದು ಎತ್ಕಳ್ಳಲೇ ಹಿಟ್ಲಾಕ್' ಎಂದು ಹಲ್ಕಾ ಮಾತಲ್ಲಿ ಜಗಳಕ್ಕೆ ಇಳಿಯುತ್ತಾನೆ.

ಶುಕ್ರವಾರ. ಶುಭದಿನ ಹೊಸ ಸಿನಿಮಾ ಕತೆ ಆರಂಭಿಸಬೇಕೆಂದು ಕೂತೆ. ರಹೀಮನ ನೆರಳು ಅಂಗಳದಲ್ಲಿ. ಈ ಪೀಡೆ ಇಷ್ಟು ಬೇಗ ವಕ್ಕರಿಸಿದ್ದಾದರೂ ಹೇಗೆ ಎಂದು ದರ್ಗಾದತ್ತ ನೋಡಿದೆ. ಬಂದಿದ್ದ ಫಸ್ಟ್ ಬಸ್ಸು ಹಿಂದಕ್ಕೆ ಹೋಗುತ್ತಿತ್ತು. 'ನಿನ್ನೆಯಂತೆ ಇವತ್ತೂ ಬಸ್ ಇರಲ್ಲ' ಅಂದಿದ್ದರು ಯಾರೋ. ರಹೀಮಾಗಮನದ ಜೊತೆಯಲ್ಲಿ ಬಸ್ಸನ್ನೂ ಕಣ್ಣಾರೆ ಕಂಡೆನಾದ್ದರಿಂದ ರಹೀಮನನ್ನೂ ನಂಬಬಹುದೆನಿಸಿ 'ಎಲ್ಲಿ ಗಾಳ?' ಎಂದೆ. ಇದು ನಾನು ಅವನಿಗೆ ನಿತ್ಯ 'ಗುಡ್ ಮಾರ್ನಿಂಗ್' ಹೇಳುವ ರೀತಿ. 'ನಾಳೆ ಬಾ' ಎಂಬಂತೆ. 'ಹೊಸಾದು ಬರ್ತದೆ' ಅಂದ. 'ಹಾಗಾದರೆ ಹಳೆಯದು ಒಂದು ಗಾಳ ಇರಬೇಕಲ್ಲ... ಏನಾಯಿತು...' ಎಂದು ಯೋಚಿಸತೊಡಗಿದೆ. ನಿನ್ನೆಯೋ ಮೊನ್ನೆಯೋ ನಡೆದ ರಿಹರ್ಸಲ್ ನೆನಪಾಯಿತು. ನಿತ್ಯ ನಾನು 'ಗಾಳ ಎಲ್ಲಿ?' ಎಂದು ಕೇಳುವುದು ಅವಮಾನಕರ ಎಂದು ಅವನು ಭಾವಿಸಿರಬಹುದು ಎನ್ನುವ ಗುಮಾನಿ ನನ್ನದು. ನಾನು ಎಲ್ಲೆಂದರಲ್ಲಿ ದಾರಿಯಲ್ಲಿ ಅವನನ್ನು ನಿಲ್ಲಿಸಿಕೊಂಡು 'ಗಾಳ ಎಲ್ಲಿ?' ಎನ್ನುವುದು 'ಸಾಲ ಎಲ್ಲಿ?' ಎನ್ನುವಂತಾಗಿ ಇತ್ತೀಚಿನ ಅವನ 'ಇಜ್ಜತ್'ನ ಮತ್ತು ಇಮೇಜಿಗೆ ಡ್ಯಾಮೇಜಾಗಿದೆ ಎನ್ನುವಂತೆ ಇದೆ ಅವನ ಇತ್ತೀಚಿನ ನಡವಳಿಕೆ.

ಈ ರಹೀಮನ 'ಮಾರ್ವಾ' ಮೀನಿನ ಕಾಂಡದಿಂದ ಬೇಸತ್ತ ನಾನು ಆದಷ್ಟೂ ಬೇಗ ಇದರಿಂದ ಮುಕ್ತಿ ಕಾಣಲು ನಿತ್ಯ ಆಡುವ ಜಗಳ... ಎರಡು ಧರ್ಮಗಳ ನಡುವಿನ ಯುದ್ಧದಂತೆ ಭೀಕರವಾಗುತ್ತಿರುವುದರಿಂದ ಬಿಡಿಸಿಕೊಳ್ಳಲು ನಾನು ಅವನಿಗೆ 'ಮೀನಿನಿಂದ ರೋಸ್ಟ್' ಮಾತ್ರ ಅಲ್ಲ ಸಾವಿರಾರು ಬಗೆ ತಿನಿಸು ತಯಾರಿಸುತ್ತಾರೆ ಎಂದು ಒಂದೆರಡು 'ಕೊರಿಯನ್ ಮೆನು'ಗಳನ್ನು ಕೊರೆದೆ. ಏನಾಯಿತೋ ಏನೋ ಮಿಂಚು ಹೊಡೆದವನಂತೆ ಓಡಿದ. ಹಚ್ಚಿದ ಸಿಗರೇಟ್ ಮುಗಿಸುವುದರೊಳಗೆ ಒಂದಿಬ್ಬರು ಕಾಮ್ರೇಡ್ಸ್ ಜೊತೆ ಕಾಣಿಸಿಕೊಂಡ. ಇವನದರ ಹೊರತು ಆ ಹೊಸ ಮೂತಿಗಳ ಪರಿಚಯ ನನಗಿರಲಿಲ್ಲ. ಆಂಗ್ಲ ಶಿಷ್ಟಾಚಾರ ಶೈಲಿಯಲ್ಲಿ ಅವರನ್ನು ಬರಮಾಡಿಕೊಳ್ಳಲು ನಾನು ಮುಂದೆ ಹೋದೆ. ಅವರು ಇವನೆಲ್ಲೋ ನಮ್ಮನ್ನೇ ಹಿಡಿಯಲು ಬರುತ್ತಿದ್ದಾನೆಂದು ಭಾವಿಸಿ ದೂರ ಹಾರಿ ಬಾವಿಯ ಬಳಿ ನೇರ ಹೋದರು. ಒಬ್ಬರು ಬಾವಿಗೆ ದುಡ ದುಡ ಇಳಿದರು. ಇನ್ನೊಬ್ಬರು ಒಂದೆರಡು ಮೆಟ್ಟಿಲ ಮೇಲೆ ಕೂತರು. ರಹೀಮ ಮಾತ್ರ ಎಂದಿನಂತೆ ತನ್ನದೇ 'ಗೆಲಿಲಿಯೋ ಭಂಗಿ ಹಿಡಿದು ಕೂತ. ಜೊತೆಗಿದ್ದ ಝುರಿ. ಚಮಕಿ ಚೆಲ್ಲಿಕೊಂಡ ಮುಖದ ಬಾಲಕಿ ಅದ್ಯಾರಿಗೋ ಅದೇನೆನ್ನೊ ಸನ್ನೆಗಳಲ್ಲಿ ಮುಟ್ಟಿಸುತ್ತಿದ್ದಳು. 'ಅದು ಅವರಿಗೆ ಅರ್ಥವಾಗದೆ ಇವಳ ಫಜೀತಿ ರೇಜಿಗೆಗೆ ತಿರುಗಿ 'ಮಚಲಿ' ಎನ್ನುವ ಶಬ್ಧ ರೂಪದಲ್ಲೂ 'ಮುಚ್ಕೊಂಡ್ ಎದ್ ಬಾರೇ' ಎನ್ನುವ ಗೆಶ್ಚರ್ ರೂಪದಲ್ಲೂ ಹೊರಬಿತ್ತು. ಆ ಶಬ್ಧಕ್ಕಿದ್ದ ಶಕ್ತಿ ಸುತ್ತ ಮುತ್ತ ಇದ್ದ ಯಾರ್ಯಾರನ್ನೋ ಎಳೆದು ತಂದು ಗುಡ್ಡೆ ಹಾಕಿತು. ತಲೆಗೊಂದು ಮಾತು ಉರ್ದುವಿನಲ್ಲಿ. ಈ ಬಾವಿಯಲ್ಲಿ ಮೀನು ಸಾಕುತ್ತಾರೆಂದೂ, ತಿನ್ನುವುದಕ್ಕೆ ವಿಶೇಷ ರುಚಿ ಎಂದೂ, ಅದನ್ನು ಸಾಕುವ, ಮಾರುವ ಸಾಹುಕಾರ ನಾನೆಂದೂ ಅದಕ್ಕಾಗಿ ಅನ್ಯಮತಸ್ತನಾದ 'ರಹೀಮು'ನೆಂಬ ಮತ್ಸ್ಯಶಾಸ್ತ್ರ ಪಂಡಿತನನ್ನೇ ಕನ್ಸಲ್ಟೆಂಟಾಗಿ ನೇಮಿಸಿಕೊಂಡಿರುವೆನೆಂದೂ, ವಿದೇಶಿ ರಫ್ತೊದ್ಯಮದವರೆಗೂ ಈ ಮತ್ಸ್ಯೋದ್ಯಮ ವಿಸ್ತರಿಸಿದೆ ಎಂಬಲ್ಲಿಗೂ ಅವರ ಚಿಂತನಾ ಲಹರಿ ಬೆಳೆಯುತ್ತಿತ್ತು. ಆ ಗುಂಪಿನಲ್ಲಿದ್ದ ತಲೆಯೊಂದು ಅಲ್ಲಾಡಿ... 'ಕೊಲಂಬಿಯಾ ಕೊಲಂಬಿಯಾ' ಎಂದಿತು. ಕಳೆದ ವರ್ಷ ಕೊಲಂಬಿಯಾ ದೇಶಕ್ಕೆ ಕಲಾತಂಡವನ್ನ ಕಳಿಸಿದ್ದರಿಂದ ಉದ್ಭವಿಸಿರುವ ಬಿಕ್ಕಟ್ಟು ನನ್ನ ಮಂಡಿಚಿಪ್ಪನ್ನೇ ಮುರಿದಿದೆ. ಆದರೂ 'ಕೊಲಂಬಿಯಾ'ದಿಂದ ಆದ ಲಾಭ ಏನೆಂದರೆ. 'ಕಲೆ ಕೈ ಕೊಟ್ಟಾಗ ಮೀನು ಮಾರಿ ಬದುಕಬಹುದೆಂಬ ಭಯಂಕರ ಆತ್ಮವಿಶ್ವಾಸ' ತಂತು. ಆಕೆಯ ಬಾಯಲ್ಲಿ ಬಂದ 'ಕೊಲಂಬಿಯಾ' ಪದವೇ ಸಾಕು ನಂಬಿ ನೇಣು ಹಾಕಿಕೊಳ್ಳುವುದಕ್ಕೆ.

ಯಾಕೋ ಜಮಾಯಿಸುತ್ತಿರುವ ಜನರಿಂದಾಗಿ ದೊಂಬಿಯಾದರೆ ಏನು ಗತಿ ಎಂದು ಚಿಂತಿಸುವಂತಾಯಿತು. ಈಗ ಲಿವಿಂಗ್ ಸ್ಕೂಲ್ ಬಾವಿ ಜಾದೂ ರಂಗವೇದಿಕೆಯಾಗಿ... ರಹೀಮ ಪಿ.ಸಿ. ಸರ್ಕಾರ್ ಆಗಿ ಆ 'ಮತ್ಸ್ಯಮಾಯಾ' ಪ್ರಸಂಗ ಕಳೆಗಟ್ಟುತ್ತಿತ್ತು. ಇಂತಹ ರಸಪ್ರಸಂಗದ ನಡುವೆಯೂ ಸೀತಮ್ಮ ಎಂಬ ಎಮ್ಮೆ ಬಾಯಿ ಬಡಿದುಕೊಳ್ಳುತ್ತಿದ್ದದ್ದು ನನ್ನ ಗಮನಕ್ಕಷ್ಟೇ ಬರುವಂತಾಗಿದ್ದು ನನ್ನ ಪೂರ್ವಾರ್ಜಿತ ಪುಣ್ಯವಾಗಿರದೆ ನಾನೇ ಕಂಡುಕೊಂಡ ಸಂವೇದನಾ ಸಿದ್ಧಿಯಾಗಿದೆ. ನಂಬುವುದಕ್ಕೆ ಸಿದ್ಧವಿಲ್ಲದವರಿಗೆ ಸೀತಮ್ಮ ಒಂದು ಎಮ್ಮೆಯ ಹೆಸರೆಂಬುದೂ ಜನರ ಗದ್ದಲ ಮೀರಿ ಆಕೆಯ ಆರ್ತನಾದ ನನ್ನ ಕಿವಿ ತಟ್ಟಿ ಎದೆ ಮುಟ್ಟಿ ಅತ್ತ ಓಡುವಂತೆ ಮಾಡಿತೆಂಬುದೇ ನನ್ನ ಸಂವೇದನಾ ಸಿದ್ಧಿಗೆ ಸಾಕ್ಷಿ. ಇಂತಹ ಸಿದ್ಧಿ ಕುಡಿತಿನಿಯ ಎಮ್ಮೆ ಬಸಪ್ಪಜ್ಜ.. ಅಥವಾ ಆ ಕಾಲದ 'ಎಮ್ಮೆ' ಕವಲಿನ ಸಂತ ಪರಂಪರೆಗಳ ಅನೇಕ ಗುರುತುಗಳಿಗೆ ಇತ್ತೆಂಬುದು ನನ್ನ ಚಿಂತನಾಶಾಲೆಯ ಹರಹು ಕುರುಹು.

"ನನ್ನ ಮುಸುಡಿಗಿಂತ್ಲೂ ಅದ್ಯಾವುದ್ಲಾ ಅದು ಅಷ್ಟೊಂದು ಚಂದಕಿರೋದು ಬಾಯಿಬಿಟ್ಟುಕೊಂಡು ನೋಡ್ತಾ ನಿಂತಿದ್ದೀಯಲ್ಲ ಮೂದೇವಿ" ಎನ್ನುವಂತಿತ್ತು ಅದರ ಮೆಡ್ಡರಿಕೆ." ಏನಮ್ಮಾ ಅರ್ಕ್‌ರೈವಲ್ ಆಫ್ ದುರ್ಗೇಶ ನಂದಿನಿ... ವ್ವಾಟ್ ಈಸ್ ಯುವರ್ ಪ್ರಾಬ್ಲಮ್?'... ಕನ್ನಡದ ಒಂದು ವಾಕ್ಯದಲ್ಲಿ ಎರಡು ಇಂಗ್ಲೀಷ್ ಪದವಿಲ್ಲದಿದ್ದರೆ ಎಮ್ಮೆಯೂ ನಂಬುವುದಿಲ್ಲವೆಂಬುದು ನನ್ನ ಅನುಭವ ಪಾಠವಾಗಿದ್ದರಿಂದ ಎಮ್ಮೆಯ ಜೊತೆ ಮಾತಾಡುವಾಗಲೂ ನಾನು ಇಂಗ್ಲೀಷ್



## ಬುಡ್ಡಿ ದೀಪ

ಕೋಟಿಗಾನಹಳ್ಳಿ ರಾಮಯ್ಯ

ಪದಗಳು ಕಡ್ಡಾಯವಾಗಿ ಇರುವಂತೆ ಎಚ್ಚರ ವಹಿಸುತ್ತೇನೆ. ಇಂತಹ ಆಚಾರ ಪಾಲನೆಯಿಂದಾಗಿ ಇದೀಗ ಎಮ್ಮೆಗಳು ನನ್ನ ಅನಾದಿ 'ಬ್ರದರ್ಸ್' ಮತ್ತು 'ಕಾಮ್ರೇಡ್ಸ್' ನನ್ನನ್ನು ಅರ್ಥಮಾಡಿಕೊಳ್ಳುವುದಕ್ಕಿಂತ ಪರಿಣಾಮಕಾರಿಯಾಗಿ ಅರ್ಥಮಾಡಿಕೊಳ್ಳುತ್ತಿವೆ ಎಂಬುದು ನನ್ನ ಅನುಭವವಾಗಿದೆ. ಅದು ಯಾಕೋ ಯಜಮಾನನಿಗಿಂತ ಯಜಮಾನಿಯ ಮೇಲೆ ಹೊರಿಸಲು ಆರೋಪ ಪಟ್ಟಿ ರೆಡಿಮಾಡಿಕೊಳ್ಳುತ್ತಿರುವುದನ್ನು ನೋಡಿ 'ಸವತಿ ಮಾತ್ಸರ್ಯ' ಹೆಣ್ಣಿರಲಿ ಎಮ್ಮೆಯನ್ನೂ ಬಿಟ್ಟಿರದ ಸೋಜಿಗಕ್ಕೆ ಬೆರಗಾಗಿ ರಹೀಮನನ್ನೂ, ಅವನ ಜಾದೂಗೆ ನೆರೆದ ಪ್ರೇಕ್ಷಕರನ್ನು ಮರೆತು ಸೀತಮ್ಮ ಎಂಬ ಎಮ್ಮೆಯ ಬಗ್ಗೆ ಯೋಚಿಸುವುದರಲ್ಲಿ ಕಳೆದು ಹೋಗಿದ್ದೆ.

ಎಷ್ಟೋ ಹೊತ್ತಿನ ಮೇಲೆ ಇದ್ದಕ್ಕಿದ್ದಂತೆ ನೆಲೆಸಿದ ಮೌನದಿಂದಾಗಿ ಎದ್ದು ಹೊರಬಂದೆ. ಬಾವಿ ಕಟ್ಟೆ ನಿರ್ಜನವಾಗಿತ್ತು. ಜಾದೂಗಾರನಾದಿಯಾಗಿ ಪ್ರೇಕ್ಷಕರೂ 'ಗಾಯಬ್' ಆಗಿದ್ದರು. ನಿರಂಜನ-ಜಯಲಲಿತಮ್ಮ ದಂಪತಿಗಳ ಜಂಟಿ ಮಾಲೀಕತ್ವದ ಸೀತಮ್ಮ ನಾಮಾಂಕಿತ ಎಮ್ಮೆಯ 'ಮನುಷ್ಯ ನಂಬಿಕೆ' ಅತ್ತ ನನ್ನನ್ನು ಕುಡಿತಿನಿ ಎಮ್ಮೆ ಬಸಪ್ಪಜ್ಜನವರೆಗೆ ಇತ್ತ ಅರಾಭಿ ಕೊತ್ತನೂರಿನ ಅಶ್ವಥ್ ನಾರಾಯಣಗೌಡ... ಅಲ್ಲಿಂದಾಚೆಗೆ ಪಾಪರಾಜನಹಳ್ಳಿಯ ವಟ್ಟಕಾಯಿ ಮುನೆಪ್ಪ,ಈಗ ಹೊತ್ತಿನ ಈ ನಿರಂಜನ್‌ವರೆಗೆ ಎತ್ತೆತ್ತಿ ಬಿಸಾಡುತ್ತಿದ್ದುದರಿಂದ ನಿದ್ದೆ ಮಾಡುವುದೇ ಮದ್ದೆಂದು ಮಲಗಿದರೆ... ರಹೀಮನ 'ಮಾರ್ವಾ' ಮೀನುಗಳ ಈಜಾಟದ ರೆಕ್ಕೆ ರಭಸ.! ಅದೂ ದುಸ್ವಪ್ನವಾಗಿ... ಈ




ಮೀನುಗಳೇಕೆ ಮಾರ್ಕೆಟ್ ರೌಡಿಗಳಂತೆ ವರ್ತಿಸುತ್ತಿವೆಯೋ ಕಾಣೆ ಅಥವಾ... ರೌಡಿಸಂ ನಮ್ಮ ಪ್ರತಿಕ್ಷಣದ ಮೆನೂ ಆಗಿರುವುದರಿಂದ ಈ ಮಾರ್ವಾಮೀನುಗಳ ಮೇಲೂ ಈ ಪ್ರಭಾವ ಬಿದ್ದಿರಬೇಕೆನಿಸಿತು. ಸಧ್ಯಕ್ಕೆ ನನ್ನ ಸಿಮ್ ಕಾರ್ಡ್ ಮೆಮರಿಯಲ್ಲಿ... ಯಾವ ಮತ್ಸ್ಯಶಾಸ್ತ್ರಜ್ಞರ ಸೆಲ್‌ಪೋನ್ ನಂಬರ್ ಇರಲಿಲ್ಲವಾಗಿ ರಹೀಮನನ್ನು ಕೇಳುವುದೇ ಉಚಿತವೆಂದು ಜಾಗರಣೆ ಮಾಡಿದ್ದೆ.

ಇದೀಗ ರಹೀಮ 'ಹೊಸ ಗಾಳ' ಬರ್‍ತದೆ?' ಎಂದಾಗ ಹಳೆಯ ಗಾಳ ಗೆಪ್ತಿಗೆ ಬಂದಿದ್ದು. 'ಏನೋ ಅದು ನಿನ್ನೆ ನಡೆದ ನಿನ್ನ ಜಾದೂ?' ಎಂದೆ. ಅವನು 'ಜಾದೂ ನಯೀ ಸಾಬ್ ಷಿಕಾರ್' ಎಂದ. ನನ್ನ ಸಿನಿಮಾ ಹುಚ್ಚಿನಿಂದಾಗಿ ಕೆಲವೊಮ್ಮೆ ಸಾಧಾರಣ, ಕ್ಷುಲಕ ಸಂಗತಿಗಳೂ ಮಹಾನ್ ಸಂಕೇತಗಳಾಗಿ, ಧ್ವನಿಗಳಾಗಿ ಸಿನಿಮಾ ಸ್ಕೋಪಿನಲ್ಲಿ ಕಾಣುವಂತೆ ಕಂಡುಬಿಡುತ್ತವೆ. ರಹೀಮನ 'ಶಿಕಾರ್!' ಪದ ಕ್ಲಾಸಿಕಲ್ ಸಿನಿಮಾದ ಹೆಸರಿನಂತೆ ತೋರಿದ್ದರಿಂದ 'ಟ್ರಯಲರ್ ನೋಡಿದ್ದೇನೆ. ಕ್ಲೈಮಾಕ್ಸ್ ಹೇಳಲೇ ಬೋಸುಡಿಕೆ' ಎಂದೆ. ಅವನು 'ರಹೀಮೋನಾಲೀಸಾ' ಮಂದಹಾಸ ಮಿಂಚಿಸಿ 'ಒನ್ ಔಟ್' ಎಂದ. ಅದು 'ರನ್ ಔಟ್' ನಂತೆ ಕೇಳಿಸಿ ಈ ರಹೀಮನಿಗೆ ಕ್ರಿಕೆಟ್ ಕ್ರೀಡಾ ಜ್ಞಾನವೂ ಇರುವುದನ್ನು ಕಂಡು ವಿಸ್ಮಯಕ್ಕೆ ಬದಲು ದಿಗಿಲಾಗತೊಡಗಿತು. ದಿನಬೆಳಗಾದರೆ 'ಕ್ರಿಕೆಟ್ ಟೂರ್ನಮೆಂಟ್ ನಡೆಯುವುದೇ ಭಾರತೀಯ ಹೆಮ್ಮೆಯಾಗಿರುವಾಗ ಇವನು ಬೆರಳುಗಳನ್ನು ಬಿಚ್ಚಿ... ಚಿನ್ನಸ್ವಾಮಿ ಸ್ಟೇಡಿಯಂ... ಎಂಟ್ರೆನ್ಸ್ ಟಿಕೇಟ್‌ಗೆ ದುಡ್ಡು ಕೇಳೀದರೆ ಏನು ಗತಿ ಎನ್ನುವ ಚಿಂತೆ ನನ್ನದು. ಅವನು ಐದೂ ಬೆರಳಗಳನ್ನು ಮುಂದೊಡ್ಡಿ ಮ್ಯಾತ್‌ಮೆಟಿಕ್ಸ್ ಬೊಧಿಸದೆ ಹೋಗಿದ್ದಲ್ಲಿ ಇದು ಕ್ರಿಕೆಟ್‌ಗೆ ಸಂಬಂಧಿಸಿರದೆ 'ಮತ್ಸ್ಯಗಣಿತ'ಕ್ಕೆ ಸಂಬಂಧಿಸಿದ್ದೆಂಬುದು ಮನವರಿಕೆಯಾಗುತ್ತಿರಲಿಲ್ಲ. ಆ ಪ್ರಕಾರ... ನಿನ್ನೆ ನಡೆದ ಜಾದೂ ಜಾದೂ ಆಗಿರದೆ ಮೀನು ಹಿಡಿಯುವ ರಿಹರ್ಸಲ್ ಆಗಿತ್ತೆಂದೂ, ರಿಹರ್ಸಲ್‌ನಲ್ಲಿ ಗಾಳಕ್ಕೆ ಒಂದೇ ಮೀನು ಸಿಕ್ಕಿದ್ದೆಂದು ಗೊಣಗಿದ. ಆ ಗಾಳದ ಸೈಜು ಉಳಿದ ಮೀನುಗಳಿಗೆ ಗೊತ್ತಾಗಿಬಿಟ್ಟಿರುವುದರಿಂದ ಈಗ ಹೊಸ ಸೈಜಿನ ಗಾಳ ತರಬೇಕಾದ ತನ್ನ ಸಂಕಟವನ್ನು ತೋಡಿಕೊಳ್ಳತೊಡಗಿದ. ಇದು ಹೊಸ ಗಾಳ ಕೊಂಡು ತರುವುದಕ್ಕೆ ಬೇಕಾದ ಹಣಕ್ಕೆ ಪೀಠಿಕೆಯೋ ಇಲ್ಲ... ಮಾರ್ವಾ ಮೀನ ಪ್ರಕರಣವನ್ನು ಪಬ್ಲಿಕ್ ಮೆಮರಿಯಿಂದ ಇರೇಜ್ ಮಾಡಲು ಪ್ರಭುತ್ವ ಹೂಡುವ ಸ್ಟ್ರಾಟಜಿಯಂತೆ... ಈ ರಹೀಮನದೂ ಇರಬಹುದೇ ಎಂಬ ದ್ವಂದ್ವದಲ್ಲಿದ್ದೆ. ಸಧ್ಯ ಹಣಕ್ಕಿಂತಲೂ ಅವನಿಗೆ ಬೇರೆ ಯಾವುದೋ 'ಮತ್ಸ್ಯತಾತ್ವಿಕತೆ'ಯ ಬೌದ್ಧಿಕ ಬಿಕ್ಕಟ್ಟಿದ್ದಂತಿತ್ತು. ಈ 'ಪಿಂಗ್‌ರಿಂಗ್' ಕ್ಷಮಿಸಿ ಈ 'ಫಿಂಗ್‌ರಿಂಗ್' ಎಂಬ ಅಶ್ಲೀಲಾರ್ಥ ಬರುವ ಪದ ಬಳಸಿದ್ದಕ್ಕಾಗಿ. ಕಳೆದ ಮೂರು ದಶಕಗಳಿಗೂ ಹೆಚ್ಚು ಈ ರಹೀಮನ ಜಾದೂನಂತೆ ಈ ನೆಲದ ಹಲವು ಜಾದೂಗಳನ್ನೂ ಜಾದೂಗಾರರನ್ನು ನೋಡುತ್ತ ಬಂದಿರುವ ನನಗೆ ಇಂತಹ ಅಶ್ಲೀಲ ಪದದ ಹೊರತಾಗಿ ಬೇರೊಂದು 'ಸಮಾನ ಪದ'ವೇ ತೋಚುತ್ತಿಲ್ಲ; ಕನ್ನಡ ನಿಘಂಟಿನಲ್ಲಿ. ಆದ್ದರಿಂದ 'ಪೊಲಿಟಿಕಲ್ ಆ್ಯಕ್ಟಿವಿಸಂ' ಎಂಬ ಫಿಂಗ್‌ರಿಂಗ್‌ನಿಂದಾಗಿ ಕರ್ನಾಟಕದಲ್ಲಿ ಬರಬೇಕಾಗಿದ್ದ ಬೆದೆ' ರಾಜಕಾರಣ ಸೃಷ್ಠಿಯಾಗದೆ ಹೋಗಿರುವ ಕಾರಣಗಳಲ್ಲಿ ಈ 'ಫಿಂಗ್‌ರಿಂಗ್'ಗೆ ಮಹತ್ವವಿದೆ. ದಲಿತರಿಂದ ಹಿಡಿದು ರೈತ, ಕನ್ನಡ, ಕೆಂಪು... ಸೇನೆಗಳ ವರೆಗಿನ 'ಫಿಂಗ್‌ರಿಂಗ್'ಗಳು... ತಪ್ಪು ನಡೆಗಳ ದ್ಯೋತಕವಾಗಿ ಬಿಡುಗಡೆಯ ಕನಸುಗಳನ್ನೇ ನುಚ್ಚುನೂರು ಮಾಡುತ್ತಿರುವುದರಿಂದ ನಾನು ಯಾರ 'ಫಿಂಗ್‌ರಿಂಗ್'ನ್ನೂ ಇಷ್ಟ ಪಡುವವನಲ್ಲ ರಹೀಮನಾದಿಯಾಗಿ. ಆದ್ದರಿಂದ ನಾನು 'ಲೇ ಕಕವಾ ಬೆರಳಾಟ ಬಿಟ್ಟು ಬಾಯಲ್ಲೇ ಬೊಗಳು... ನೋಡಿದವರಾದ್ರೂ ತಪ್ಪು ತಿಳ್ಕಳ್ಳದೆ ಇರ್‍ಲಿ' ಎಂದೆ. ಆಗ ಗೊತ್ತಾಯಿತು ಅವನ ಸಂವಹನ ಶಾಸ್ತ್ರ ಪಾಂಡಿತ್ಯ

ನಿನ್ನೆ ಗಾಳಕ್ಕೆ ಒಂದು ಮೀನು ಸಿಕ್ಕಿತೆಂದೂ ಉಳಿದ ಮೀನುಗಳು ಸಿಕ್ಕಲಿಲ್ಲವೆಂದೂ ಹೊಸ ಗಾಳ ತಂದು ಹಿಡಿಯಬೇಕಾದ ಸಂಕಟವನ್ನೇ ಲಂಬಿಸುವ ಕ್ಲೈಮಾಕ್ಸ್‌ನಂತೆ ಲಂಬಿಸುತ್ತಿದ್ದ. ನಾನು ಕುತ್ತಿಗೆ ಪಟ್ಟಿಗೆ ಕೈ ಹಾಕಲು ಹೋದೆ ಮಾರ್ಕೆಟ್ ರೌಡಿಯಂತೆ. ಆಗ ನಡೆದಿದ್ದೇನೆಂದು ಮೈದಾ ಹಿಟ್ಟಿನಂತೆ ಎಲ್ಲಾ ಭಾಷಾ ಪ್ರಯೋಗಗಳನ್ನು ಕಲಸಿ ಒಂದು ಮೀನು ಗಾಳ ಬಿತ್ತೆಂದೂ... ಅದನ್ನು ಇನ್ನೊಂದು ಮೀನು ನೋಡಿಬಿಟ್ಟಿತೆಂದೂ.. ಅದು ಹೋಗಿ ಉಳಿದ ನಾಲ್ಕು ಮೀನುಗಳಿಗೆ ಇನ್‌ಫಾರ್ಮೇಶನ್ ಕೊಟ್ಟಿತೆಂದೂ ಆದ್ದರಿಂದ ಎಷ್ಟು ಕಾದರೂ ಅವು ಮತ್ತೆ ಬಂದು ಗಾಳವನ್ನು ಕಚ್ಚಲಿಲ್ಲವೆಂಬ ಹಿಡನ್ ಇನ್‌ಫಾರ್ಮೇಶನ್ ಕೊಟ್ಟ. ಹಾಗೂ ಈಗ ಹೊಸ ಸೈಜಿನ ಗಾಳ ತರಬೇಕಿದೆಯೆಂದ.

ನನಗೆ ಮೀನುಗಳ ಮಧ್ಯೆ ಇಂತಹ ಸಂವಹನ ಇರುವುದು ಗೊತ್ತಿಲ್ಲ. ಆದರೆ ಜೇನುಗಳಿಗೆ ಇರುವುದು ಗೊತ್ತಿತ್ತು. ಅದರಲ್ಲೂ ಗಾಳಗಳ ಸೈಜನ್ನು ಗಾಳ ನುಂಗಿದ ಮೀನಿನ ಆಕಾರ ನೋಡಿಯೇ ನೋಟ್ ಮಾಡಿಕೊಂಡು ಇನ್ನೊಂದು ಮೀನಿಗೆ 'ಬ್ರಾ' ಸೈಜ್ ಹೇಳುವಂತೆ ಹೇಳಬಹುದಾದ ಸಾಧ್ಯತೆಯನ್ನು ಹೇಗೆ ನಂಬಬೇಕೋ ತೋಚದೆ ಹೇಗಾದರೂ ಮಾಡಿ ರಹೀಮನ ಪಾಂಡಿತ್ಯ ಮುಕ್ಕಾಗುವಂತೆ ಮಾಡಲು ನೋಡಿದೆ. ಆದರೆ ಮೀನುಗಳಲ್ಲೂ ಇಂತಹ ಸಂವಹನ ಇದ್ದೇ ಇರುವ ಸಾಧ್ಯತೆ ಇತ್ತೀಚೆಗೆ ಮನವರಿಕೆಯಾಗತೊಡಗಿದೆ. ಬ್ರಹ್ಮಾಂಡವನ್ನೂ ಕಾಣಬಹುದಾದ ನನ್ನ 'ಕುರು' ಸಹೋದರರಿಗೆ ಐ ಮೀನ್ ಬ್ರದರ್ಸ್‌ಗೆ ಕೇವಲ ನಾಲ್ಕಾಣೆ, ಎಂಟಾಣೆಗಳಷ್ಟೇ ಕಾಣುತ್ತಿರುವುದೂ ಈ ರಹೀಮನ ಸಂವಹನ ಸಿದ್ಧಿಯನ್ನು ನಂಬುವಂತೆ ಮಾಡಿತು. ಈಗ ರಹೀಮ ತರಬಹುದಾದ ಹೊಸ ಗಾಳಕ್ಕಾಗಿ ಎದುರು ನೋಡುತ್ತಿದ್ದೇನೆ. ಮಾರ್ವಾ ಮೀನುಗಳ ಮುಂದುವರೆದಿರುವ ರೌಡಿಸಂನ್ನೂ ಸಹಿಸಿಕೊಳ್ಳುತ್ತಾ...



# ದಕ್ಷಿಣ ಭಾರತದ ಮೊದಲ ದಲಿತ ಹೋರಾಟಗಾರ ಅಯೋತಿದಾಸ್

–ಡಾ. ಅಪ್ಪಗೆರೆ ಸೋಮಶೇಖರ್

ದಕ್ಷಿಣ ಭಾರತದ ದಲಿತ ಚಳವಳಿಗೆ ಪುರಾತನವಾದ ಚಾರಿತ್ರಿಕ ಹಿನ್ನೆಲೆ ಇದೆ. ಸಾಮಾಜಿಕ ಪರಿವರ್ತನ ಚಳವಳಿಯಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡ ಅನೇಕ ಮಹತ್ವದ ದಲಿತ ಹೋರಾಟಗಾರರಲ್ಲಿ; ಕೇರಳಾದ ಅಯ್ಯನ್ ಕಾಳಿ, ತಮಿಳುನಾಡಿನ ರಟ್ಟೆಮಲೈ ಶ್ರೀನಿವಾಸನ್, ಕರ್ನಾಟಕದ ದೇವರಾಯ ಇಂಗಳೆ, ಬಿ. ಶ್ಯಾಮಸುಂದರ್ ಮುಂತಾದವರು ಪ್ರಮುಖರು. 'ಪಂಡಿತ ಅಯೋತಿದಾಸ್' ತಮಿಳುನಾಡಿನ ದಲಿತ ಹೋರಾಟಗಾರರಲ್ಲಿ ಅತಿ ಮುಖ್ಯರಾಗಿದ್ದಾರೆ. ಸಾಮಾಜಿಕ ಹಾಗೂ ಧಾರ್ಮಿಕ ಹೋರಾಟವನ್ನು ಸಮಪ್ರಮಾಣದಲ್ಲಿ ಕಟ್ಟಿ ಬೆಳೆಸಿದ ಇವರು 'ತಮಿಳು ಬೌದ್ಧ ದಲಿತ ಹೋರಾಟಗಾರ' ಎಂದೇ ಹೆಸರಾದವರು. ತಮ್ಮ ಹೋರಾಟ, ವ್ಯಕ್ತಿತ್ವ, ಚಿಂತನೆಗಳ ಮೂಲಕ ಡಾ. ಬಾಬಾ ಸಾಹೇಬ್ ಅಂಬೇಡ್ಕರ್, ಪೆರಿಯಾರ್ ಅವರನ್ನೂ ಒಳಗೊಂಡಂತೆ ಅನೇಕ ಹೋರಾಟಗಾರರು ಹಾಗೂ ಸಮಾಜಿಕ ಚಳವಳಿಗಳನ್ನು ಪ್ರಭಾವಿಸಿದವರು. ಇವರು ರೂಪಿಸಿದ ಚಳವಳಿ ಹಾಗೂ ಚಿಂತನೆಗಳು ಎಲ್ಲ ಕಾಲಕ್ಕೂ ಪ್ರಸ್ತುತ ಎನಿಸುತ್ತವೆ. ಬಿ. ಸುಜ್ಞಾನಮೂರ್ತಿ ಅವರು "ತಮಿಳು ಬೌದ್ಧ ದಲಿತ ಹೋರಾಟಗಾರ ಅಯೋತಿದಾಸ್"(ಪಲ್ಲವ ಪ್ರಕಾಶನ, ಚನ್ನಪಟ್ಟಣ, 2012) ಎಂಬ ಕೃತಿಯ ಮೂಲಕ ಅಯೋತಿದಾಸ್ ಅವರ ಚಿಂತನೆ ಹಾಗೂ ಹೋರಾಟವನ್ನು ಕನ್ನಡಕ್ಕೆ ಪರಿಚಯಿಸಿದ್ದಾರೆ. ಮೊದಲು ಇಂಗ್ಲೀಷಿನಲ್ಲಿ 'ಜಿ. ಎಲೋಶಿಯಸ್, ಗೀತ, ಎಸ್. ವಿ. ರಾಜಾದುರೈ' ಅವರು ರಚಿಸಿದ ಈ ಕೃತಿಯನ್ನು 'ಕಾತ್ಯಾಯನಿ' ಎಂಬುವರು ತೆಲುಗಿಗೆ ಅನುವಾದಿಸಿದರು. ತೆಲುಗಿನ ಈ ಕೃತಿಯನ್ನೆ 'ಬಿ. ಸುಜ್ಞಾನಮೂರ್ತಿ' ಕನ್ನಡೀಕರಿಸಿದ್ದಾರೆ.

"ಹೊಲಗೇರಿಗಳು ಇರುವಷ್ಟು ಕಾಲ ಈ ದೇಶವನ್ನು ನಮ್ಮ ತಾಯ್ನೆಲವೆಂದು ಹೇಗೆ ಪ್ರೀತಿಸಬಲ್ಲೆವು" ಎಂದು ತೀಕ್ಷ್ಣವಾಗಿ ಬ್ರಾಹ್ಮಣಶಾಹಿ ಹಿಂದೂ ವ್ಯವಸ್ಥೆಯನ್ನು ಪ್ರಶ್ನಿಸಿದ ಅಯೋತಿದಾಸ್ ಅವರು 1845 ಮೇ 20 ರಂದು ಕೊಯಮತ್ತೂರು ಜಿಲ್ಲೆಯಲ್ಲಿ ಜನಿಸಿದರು. ಇವರ ತಂದೆ 'ಕಂದಸಾಮಿ' ಪರಯಾ ಎಂಬ ಅಸ್ಪೃಶ್ಯ ಜಾತಿಗೆ ಸೇರಿದವರು. ಅಯೋತಿದಾಸ್‌ರ ಮೊದಲ ಹೆಸರು "ಕಥವಾರಯನ್". ಇದು ಇವರ ತಂದೆ ತಾಯಿ ಇವರಿಗಿಟ್ಟ ಹೆಸರು. ಕಾಲಾನಂತರದಲ್ಲಿ ತಮ್ಮ ಗುರುಗಳ ಹೆಸರಾದ "ಅಯೋತಿದಾಸ್" ಎಂಬುದನ್ನೆ ತಮ್ಮ ಹೆಸರನ್ನಾಗಿ ಸ್ವೀಕರಿಸಿದರು. ಬಾಲ್ಯವನ್ನು ನೀಲಗಿರಿಯಲ್ಲಿ ಕಳೆದ ಇವರು, 1870ರಲ್ಲಿ ನೀಲಗಿರಿ ಬೆಟ್ಟಗಳಲ್ಲಿ ವಾಸಿಸುತ್ತಿದ್ದ ತೋಡ ಹಾಗೂ ಇತರೆ ಬುಡಕಟ್ಟು ಜನರನ್ನು ಸಂಘಟಿಸಿ ಅವರ ಅಭಿವೃದ್ಧಿಗಾಗಿ ಹೋರಾಟವನ್ನು ರೂಪಿಸಿದವರು. ಸಿದ್ಧವೈದ್ಯ ನಿಪುಣರಾದ ಇವರು ಮದ್ರಾಸಿನಲ್ಲಿ ನೆಲೆಸಿದ್ದರು. ಅಯೋತಿದಾಸ್ ಶೋಷಿತ ಸಮುದಾಯದ ಧಾರ್ಮಿಕ ಚಳವಳಿಯ ನೇತಾರ. ಬ್ರಾಹ್ಮಣಶಾಹಿ ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ತೀವ್ರವಾಗಿ ಖಂಡಿಸುತ್ತಿದ್ದ ಇವರು, ದಲಿತರ ಧಾರ್ಮಿಕ ಅಸ್ಮಿತೆಯನ್ನು ಬೌದ್ಧಧಮ್ಮದಲ್ಲಿ ಕಂಡುಕೊಂಡವರು. ಅಂಬೇಡ್ಕರ್ ಅವರಿಗಿಂತ ಮೊದಲೇ 1886ರಲ್ಲೆ 'ಅಸ್ಪೃಶ್ಯರು ಹಿಂದೂಗಳಲ್ಲ' ಎಂಬ ಕ್ರಾಂತಿಕಾರಿ ನಿಲುವನ್ನು ಸಾರಿದ ಇವರು, 1891ರಲ್ಲಿ 'ದ್ರಾವಿಡ ಮಹಾಜನ ಸಭಾ'ವನ್ನು ಸ್ಥಾಪಿಸಿ, ಅಂದಿನ ಜನಗಣತಿಯಲ್ಲಿ ಅಸ್ಪೃಶ್ಯರು ಹಿಂದೂಗಳು ಎಂದು ನಮೂದಿಸದೆ, ಜಾತಿಯಿಲ್ಲದ ದ್ರಾವಿಡರು ಎಂದು ದಾಖಲಿಸಬೇಕೆಂದು ದಲಿತರಿಗೆ ಕರೆಕೊಟ್ಟರು.

19ನೇ ಶತಮಾನದಿಂದ ಈ ದೇಶದ ಕೆಳಜಾತಿ, ಆದಿವಾಸಿಗಳು ಹಿಂದೂ ಧರ್ಮವನ್ನು ನಿರಾಕರಿಸಿ ಅನ್ಯ ಧರ್ಮಗಳಿಗೆ ಮತಾಂತರಗೊಂಡ ಸಂಗತಿಯನ್ನು ಈ ಕೃತಿಯಲ್ಲಿ ಚಾರಿತ್ರಿಕವಾಗಿ ಗುರುತಿಸಲಾಗಿದೆ. "ಕೇರಳದ ಇಝುವಲದ 'ಶ್ರೀ ನಾರಾಯಣಗುರು ಧರ್ಮಪರಿಪಾಲನ ಚಳವಳಿ'; ತಮಿಳು ನಾಡಿನ ಶನಾರರಲ್ಲಿ ಮುತ್ತುಕುಟ್ಟಿಸ್ವಾಮಿ ಆರಂಭಿಸಿದ 'ಅಯ್ಯವಾಜಿ ಚಳವಳಿ';

ಆಂಧ್ರಪ್ರದೇಶದ ಅಸ್ಪೃಶ್ಯರು ಪರಿಪಾಲಿಸಿದ 'ರಾಜಯೋಗಿ, ನರ್ಸಯ್ಯ ಭಕ್ತಿಶಾಖೆ'; ಒರಿಸ್ಸಾದ ಬಾವರಿಗಳು ಅನುಸರಿಸಿದ 'ಭೀಮಾಬಾಯಿ, ಮಹಿಮಧರ್ಮ' ಸಂಪ್ರದಾಯಗಳು; ಬಂಗಾಳದ ನಾಮಶೂದ್ರರು, ರಾಜ್‌ಬನ್ಸೀಗಳು, ಬರ್ಮಾಲಿ, ಕಾಯಬ್ರತುಗಳು ಕಟ್ಟಿದ 'ಮತುವಾ ಚಳವಳಿ'; ಪಂಜಾಬ್‌ನ ಚಮ್ಮಾರರು ರೂಪಿಸಿದ 'ಆದಿ ಧರ್ಮ ಚಳವಳಿ'; ಬಿಹಾರದ ಮುಂಡಾ ಬುಡಕಟ್ಟಿನ ಜನರ 'ಬಿರ್ಸಾ ಧರ್ಮ ಚಳವಳಿ'ಗಳು" ಮತಾಂತರ, ಧರ್ಮಾಂತರ ಹೋರಾಟದ ಚಾರಿತ್ರಿಕ ನೆಲೆಗಳನ್ನು ಸ್ಪಷ್ಟಪಡಿಸುತ್ತವೆ. ಮುಂಬೈನ ಮಾಂಗ್, ಮಹಾರ್; ಪಂಜಾಬ್‌ನ ಛೂರಾ, ಮರುಖಾಭಿ; ವಾರಣಾಸಿಯ ಡೋಮರು; ಬಿಹಾರದ ಚಮ್ಮಾರರು; ಉತ್ತರ ಪ್ರದೇಶದ ಬಲಿಯಾಗಳು; ಆಂಧ್ರದ ಹೊಲೆಮಾದಿಗರು ತಮಿಳುನಾಡಿನ ಶಾಂಬವ, ಶನಾರ್, ಪರಯಾರರು ಹಿಂದೂ ಧರ್ಮದಲ್ಲಿನ ಜಾತೀಯತೆಗೆ ಬೇಸತ್ತು, ಕ್ರೈಸ್ತ ಮಿಶನರಿಗಳ ಪ್ರಭಾವಕ್ಕೆ ಒಳಗಾಗಿ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಸಂಗತಿಯನ್ನು ಸಹಾ ಇಲ್ಲಿ ಚರ್ಚಿಸಲಾಗಿದೆ. ಅಂಬೇಡ್ಕರ್ ಅವರು 'ಹಿಂದೂ ಆಗಿ ಹುಟ್ಟಿದ್ದೇನೆ ಆದರೆ ಹಿಂದೂ ಆಗಿ ಸಾಯಲಾರೆ' ಎಂದು ಹೇಳಿ ಬೌದ್ಧಧಮ್ಮ ಸ್ವೀಕರಿಸಿದ ಐತಿಹಾಸಿಕ ಘಟನೆಯ ಹಿಂದೆ ಈ ಎಲ್ಲಾ ಚಳವಳಿಗಳ ದಟ್ಟ ಪ್ರಭಾವ ಇರುವುದನ್ನು ಗ್ರಹಿಸಬಹುದು.

ಭಾರತದಲ್ಲಿ ಬೌದ್ಧ ಧರ್ಮದ ಪುನರುತ್ಥಾನದ ನೆಲೆಗಳನ್ನು ಸಹಾ ಇಲ್ಲಿ ವಿವೇಚಿಸಲಾಗಿದೆ. "ಎಡ್ವಿನ್ ಅರ್ನಾಲ್ಡ್ ಬರೆದ 'ಲೈಟ್ ಆಫ್ ಏಶಿಯಾ' ಕೃತಿ; 1891ರಲ್ಲಿ 'ಅನಾಗರಿಕ ಧರ್ಮಪಾಲ' ಅವರು ಕೊಲಂಬೋದಲ್ಲಿ ಸ್ಥಾಪಿಸಿದ 'ಮಹಾಬೋಧಿ ಸೊಸೈಟಿ'; 1892ರಲ್ಲಿ ಕಲ್ಕತ್ತಾದ 'ಯುನೈಟೆಡ್ ಬುದ್ಧಿಸ್ಟ್ ಹವರ್ಲ್ಡ್' ಸಂಸ್ಥೆ ಪ್ರಕಟಿಸುತ್ತಿದ್ದ 'ಮಹಾಬೋಧಿ' ಪತ್ರಿಕೆ; ಧರ್ಮಾನಂದ ಕೊಸಾಂಬಿ ಅವರು ಮುಂಬೈನಲ್ಲಿ ಸ್ಥಾಪಿಸಿದ 'ಬಹುಜನ ವಿಹಾರ' ಎಂಬ ಬೌದ್ಧ ವಿಹಾರ" ಈ ಎಲ್ಲಾ ಸಂಗತಿಗಳು ಸಹಾ ಭಾರತದಲ್ಲಿನ ಬೌದ್ಧ ಧಮ್ಮದ ಪುನರುಜ್ಜೀವನದ ಕಾಯಕದಲ್ಲಿ ಪರಿಣಾಮಕಾರಿಯಾದ ಪಾತ್ರವನ್ನು ನಿರ್ವಹಿಸಿದ್ದಾವೆ. ಇದಕ್ಕೆ ಪೂರಕವಾಗಿ "ಸೂರ್ಯೋದಯ(1869), ಪಂಚಮ(1871), ಸುಗೀರ್ತವಾಸನಿ(1877), ದ್ರವಿಡ ಪಾಂಡ್ಯನ್(1885), ಆಂದ್ರಾರ್ ಮಿತ್ರನ್(1886), ಮಹಾವಿಕಟ ತೂತನ್(1888), ಪರಯನ್(1893), ಇಲ್ಲಾರ ಒಲುಕ್ಕಮ್(1898), ಪೂಲೋಗವ್ಯಾಸನ್(1900), ಒರು ಪೈಸಾ ತಮಿಳನ್(1907), ದ್ರವಿಡ ಕೋಕಿಲವ್(1907), ತಮಿಳ್ ಪೆಣ್(1916)" ಪತ್ರಿಕೆಗಳು ಬುದ್ಧನ ವಿಚಾರಗಳನ್ನು ಪ್ರಕಟಿಸುವ ಮೂಲಕ ಓದುಗರನ್ನು ಎಚ್ಚರಿಸಿ, ಪ್ರಭಾವಿಸಿದ್ದಾವೆ. ರೆವರೆಂಡ್ ಜಾನ್‌ರತ್ನಂ ಅವರು 1886ರಲ್ಲಿ ಸ್ಥಾಪಿಸಿದ 'ದ್ರವಿಡಾರ್ ಕಜಗಮ್'; 1891ರಲ್ಲಿ ನೀಲಗಿರಿಯಲ್ಲಿ ಸ್ಥಾಪಿಸಲ್ಪಟ್ಟ 'ದ್ರವಿಡ ಮಹಾಜನ ಸಭ'; 1892ರಲ್ಲಿ ರಚನೆಯಾದ 'ಪರಯಾರ್ ಮಹಾಜನ ಸಭ'; 'ಆದಿ ದ್ರಾವಿಡ ಮಹಾಜನ ಸಭ' ಸಂಘಟನೆಗಳು ಸಹಾ ಪರಿಣಾಮಕಾರಿಯಾಗಿ ದುಡಿದಿದ್ದಾವೆ. ಇದರ ಅರಿವಿದ್ದ ಅಯೋತಿದಾಸ್ ಅವರು ಬೌದ್ಧ ಧಮ್ಮದ ಪುನರ್ ಪ್ರತಿಷ್ಠಾಪನೆಯ ಹೋರಾಟವನ್ನು ಪ್ರಾಮಾಣಿಕವಾಗಿ ಮುಂದುವರಿಸಿದರು. ಇದಕ್ಕಾಗಿ ತಮಿಳುನಾಡು ಮತ್ತು ಕರ್ನಾಟಕವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡರು.

ಭಾರತೀಯ ದಲಿತರು ಮೂಲತಃ ದ್ರಾವಿಡರು, ಬೌದ್ಧರು ಎಂಬುದನ್ನು ತಮ್ಮ ಹೋರಾಟದ ಮೂಲಕ ಸಾಬೀತುಪಡಿಸ ಹೊರಟ ಅಯೋತಿದಾಸ್ ಅವರು ಆ ನಿಟ್ಟಿನಲ್ಲಿ ಮೌಲಿಕ ಚರ್ಚೆಯನ್ನು ಹುಟ್ಟುಹಾಕಿದರು. ಮದ್ರಾಸ್‌ನ ಥಿಯೋಸಾಫಿಕಲ್ ಸೊಸೈಟಿಯ ನಾಯಕರಾಗಿದ್ದ ಎಚ್. ಎಸ್. ಆಲ್ಕಾಟ್ ಅವರನ್ನು 1898ರಲ್ಲಿ ಭೇಟಿಯಾಗಿದ್ದ ಅಯೋತಿದಾಸ್ ಅವರೆದುರು : "ಪರಯಾ ಜಾತಿಗೆ ಸೇರಿದ ಜನರು ತಮಿಳುನಾಡಿನ ಮೂಲನಿವಾಸಿಗಳು. ಅಶೋಕ ಚಕ್ರವರ್ತಿಯ ಕಾಲದಲ್ಲೆ ಬೌದ್ಧ ಧರ್ಮವನ್ನು ಸ್ವೀಕರಿಸಿದವರು" ಎಂಬುದಾಗಿ ತಮ್ಮ ವಾದವನ್ನು ಮಂಡಿಸುತ್ತಾರೆ. ಅಯೋತಿದಾಸ್ ಅವರು ಪಿ. ಕೃಷ್ಣಸ್ವಾಮಿ ಅವರ ಜೊತೆಗೂಡಿ, ಅದಾಗಲೇ ಅಸ್ತಿತ್ವದಲ್ಲಿದ್ದ ಪರಯಾ ಸಂಘದ ಪ್ರತಿನಿಧಿಗಳಾಗಿ 1898 ಜುಲೈ 1ರಂದು ಬೌದ್ಧ ಧಮ್ಮದ ಹೆಚ್ಚಿನ ಅಧ್ಯಯನಕ್ಕಾಗಿ ಕೊಲಂಬೋಗೆ ತೆರಳುತ್ತಾರೆ. ಪ್ರವಾಸದಿಂದ ಮರಳಿ ಬಂದ ಅಯೋತಿದಾಸ್ ಮದ್ರಾಸ್‌ನ ರಾಯಪೇಟೆಯಲ್ಲಿ "ಸಖ್ಯ ಬೌದ್ಧ ಸಮಾಜ"ವನ್ನು ಸ್ಥಾಪಿಸಿದರು. "ತಮ್ಮನ್ನು ತಾವು ಬೌದ್ಧರೆಂದು ಪ್ರಕಟಿಸಿಕೊಳ್ಳುವುದೆಂದರೆ, ವರ್ತಮಾನದಲ್ಲಿರುವ ಗುಲಾಮಗಿರಿಯನ್ನು ಧಿಕ್ಕರಿಸುವುದು, ಭವಿಷ್ಯತ್ತಿನಲ್ಲಿ ವಿಮೋಚನೆಯೆಡೆಗೆ ಸಾಗಿ ಹೋಗುವುದು" ಎಂಬುದನ್ನು ಸ್ಪಷ್ಟಪಡಿಸಿದರು. ರೆವರೆಂಡ್ ಜಾನ್‌ರತ್ನಂ ಅವರ ಜೊತೆ ಸೇರಿ 'ದ್ರವಿಡ ಪಾಂಡಿಯನ್' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದ ಇವರು, 1891ರಲ್ಲಿ ನೀಲಗಿರಿಯಲ್ಲಿ ಅಸ್ತಿತ್ವಕ್ಕೆ ಬಂದ 'ದ್ರವಿಡ ಮಹಾಜನ ಸಭ'ದ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದಾರೆ. ಅಯೋತಿದಾಸ್ ಅವರು ದ್ರವಿಡ ಮಹಾಜನ ಸಭದ ಮೂಲಕ ಅಂದಿನ ರಾಷ್ಟ್ರೀಯ ಕಾಂಗ್ರೆಸ್‌ಗೆ 1891 ಡಿಸೆಂಬರ್ 21ರಂದು ಮನವಿ ಪತ್ರದ ಮೂಲಕ ಈ ಕೆಳಕಂಡ ಶೋಷಿತಪರ ಬೇಡಿಕೆಗಳನ್ನ ಸಲ್ಲಿಸುತ್ತಾರೆ :

1. ಅಸ್ಪೃಶ್ಯರನ್ನು 'ಪರಯಾರ'ರೆಂದು ಕರೆಯುವುದು ಉಚಿತವಲ್ಲ. ಪರಯಾ ಎಂದು ಅವಮಾನಿಸುವುದನ್ನು ಅಪರಾಧವೆಂದು ಪರಿಗಣಿಸಿ ಮಾನನಷ್ಟ ಮೊಕದ್ದಮೆ ಶಿಕ್ಷೆ ವಿಧಿಸುವ ಕಾನೂನು ರೂಪಿಸಬೇಕು.
2. ಅಸ್ಪೃಶ್ಯರ ಶಿಕ್ಷಣಕ್ಕಾಗಿ ಉಚಿತ ಶಾಲೆಗಳನ್ನು ಸ್ಥಾಪಿಸಬೇಕು. ವಿದ್ಯಾರ್ಥಿಗಳ ಶುಲ್ಕವನ್ನು ಮಾಫಿ ಮಾಡಬೇಕು.
3. ಮೆಟ್ರಿಕ್ಯುಲೇಶನ್ ಪಾಸಾದ ಅಸ್ಪೃಶ್ಯ ವಿದ್ಯಾವಂತರಿಗೆ ಸರ್ಕಾರಿ ನೌಕರಿ ಕಲ್ಪಿಸಬೇಕು.
4. ಮುನ್ಸಿಪಲ್ ಕಾರ್ಪೋರೇಷನ್, ಗ್ರಾಮ ಸಮಿತಿಗಳಿಗೆ ಅಸ್ಪೃಶ್ಯರನ್ನ ಪ್ರತಿನಿಧಿಗಳನ್ನಾಗಿ ನೇಮಿಸಬೇಕು.
5. ಅಸ್ಪೃಶ್ಯರು ಸಾರ್ವಜನಿ ಕೆರೆ ಬಾವಿ, ದೇವಾಲಯ, ಕೋರ್ಟು, ಕಚೇರಿ ಪ್ರವೇಶದ ನಿರ್ಬಂಧನೆಯನ್ನು ತೊಲಗಿಸಬೇಕು.
6. ಗೋಮಾಳ ಭೂಮಿಯನ್ನು ಪಂಚಮರಿಗೆ ಹಂಚಬೇಕು."

–ಎಂಬುದಾಗಿ ಶೋಷಿತರ ಸಾಮಾಜಿಕ ನ್ಯಾಯದ ಅಗತ್ಯತೆಯನ್ನು ಕುರಿತು ಒತ್ತಾಯಿಸುತ್ತಾರೆ.

"ಬುದ್ಧ : ಹಗಲಿರುಳನ್ನು ಬೆಳಗಿಸುವ ಕಾಂತಿ" ಎಂಬ ಕರಪತ್ರದ ಮೂಲಕ, ತಮಿಳು ಬೌದ್ಧ ಚಳವಳಿಯನ್ನು ಕುರಿತ ತಮ್ಮ ಯೋಜನೆಯನ್ನು ವಿವರಿಸಿದ ಅಯೋತಿದಾಸ್ ಅವರ ಹೋರಾಟ, ಚಿಂತನೆಯ ಪ್ರಭಾವಕ್ಕೆ ಒಳಗಾದ ದಲಿತೇತರರಲ್ಲಿ 'ಪ್ರೊ ಲಕ್ಷ್ಮಿನರಸು, ಸಿಂಗಾರವೇಲು ಚೆಟ್ಟಿಯಾರ್, ಎ. ಎಸ್. ಮುದಲಿಯಾರ್, ಸ್ವಪ್ನೇಶ್ವರಿ ಅಮ್ಮಾಳ್, ಗೋಪಾಲ್ ಚೆಟ್ಟಿಯಾರ್' ಪ್ರಮುಖರು. ಬೌದ್ಧಧಮ್ಮ ಪ್ರಸಾರಕ್ಕಾಗಿ ಸ್ಥಾಪಿಸಿದ್ದ 'ಸಖ್ಯ ಬೌದ್ಧ ಸಮಾಜ' ಸಂಸ್ಥೆಯನ್ನು ಪ್ರಜಾಪ್ರಭುತ್ವದ ನೆಲೆಗಟ್ಟಿನಲ್ಲಿ ರೂಪಿಸಿದ್ದ ಅಯೋತಿದಾಸ್ ಅವರು, ಮುಸ್ಲಿಂ, ಕ್ರೈಸ್ತ ಧರ್ಮಗಳಿಂದ ಬಂದವರನ್ನು ಸಹಾ ಈ ಸಂಸ್ಥೆಯ ಅಧ್ಯಕ್ಷರನ್ನಾಗಿ ನೇಮಿಸುತ್ತಿದ್ದರು. "ತಮ್ಮ ಧರ್ಮ ಪ್ರಧಾನವಾಗಿ ಶೋಷಿತ ಜಾತಿಗಳ ವಿಮೋಚನೆಯ ಗುರಿಯಿಂದ ಕೆಲಸ ಮಾಡಿದರೂ, ಒಟ್ಟು ಸಮಾಜದ ಕಲ್ಯಾಣವನ್ನು ದೃಷ್ಟಿಯಲ್ಲಿಟ್ಟುಕೊಳ್ಳುತ್ತದೆ"

**ಶೋಷಿತರ ವಿಮೋಚನೆಯನ್ನು ಧ್ಯೇಯವನ್ನಾಗಿಸಿಕೊಂಡಿದ್ದ ಅಯೋತಿದಾಸ್ ಅವರ ಸಖ್ಯ ಬೌದ್ಧ ಚಳವಳಿ ಮುಂದೆ ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಅವರ ದ್ರಾವಿಡ ಸ್ವಾಭಿಮಾನ ಚಳವಳಿಯನ್ನು ●●● ಪರಿಣಾಮಕಾರಿಯಾಗಿ ಪ್ರಭಾವಿಸಿತು. ●●●**

ಎಂಬುದನ್ನು ಸ್ಪಷ್ಟಪಡಿಸಿದರು. ಅಯೋತಿದಾಸ್‌ರ ನಿರ್ದೇಶನದಂತೆ, 1907ರಲ್ಲಿ ಕೋಲಾರದ ಕೆ. ಜಿ. ಎಫ್. ಮತ್ತು ಬೆಂಗಳೂರಿನಲ್ಲೂ 'ಸಖ್ಯ ಬೌದ್ಧ ಸಮಾಜ'ದ ಶಾಖೆಗಳು ಸ್ಥಾಪನೆಯಾದವು. ಅವುಗಳ ನೇತೃತ್ವದಲ್ಲಿ ಬೌದ್ಧ ವಿದ್ಯಾಲಯ, ಗ್ರಂಥಾಲಯಗಳನ್ನು ಸ್ಥಾಪಿಸಲಾಯಿತು. ಇವುಗಳನ್ನ ನಿರ್ವಹಿಸುತ್ತಿದ್ದವರು ಇಯಕ್ಕಣ್ಣು ಪುಲವಾರ್ ಅವರು. ಸ್ವತಃ ಕವಿಗಳು, ಗಾಯಕರು ಆಗಿದ್ದ ಇವರು ಬುದ್ಧನ ಬೋಧನೆ ಹಾಗೂ ಜೀವನವನ್ನು ಕುರಿತು ಹಾಡು ಬರೆದು ಹಾಡುತ್ತಿದ್ದರು. ಇವರೆ ಸ್ಥಾಪಿಸಿದ 'ಬೌದ್ಧ ಸಂಗೀತ ಸಭೆ' ಹಲವು ಶ್ರೇಷ್ಠ ಗಾಯಕರನ್ನು ಬೆಳಕಿಗೆ ತಂದಿತು. ಈ ಎಲ್ಲದರ ಪ್ರಭಾವದ ಹಿನ್ನೆಲೆಯಲ್ಲಿ ಕೆ. ಜಿ. ಎಫ್. ನಲ್ಲಿ 1911ರಲ್ಲಿ 'ಬೌದ್ಧ ಯುವಜನ ಸಂಘ' ಸ್ಥಾಪನೆಯಾಯಿತು. ಈ ಸಂಘದ ವತಿಯಿಂದ 'ಧಮ್ಮ ಸಹಾಯ ನಿಧಿ'ಯನ್ನು ಸ್ಥಾಪಿಸಿ ಅನೇಕ ಕಾರ್ಯಕ್ರಮಗಳಿಗೆ ಆರ್ಥಿಕ ಸಹಾಯ ನೀಡಲಾರಂಭಿಸಿತು. 'ಒರು ಪೈಸಾ ತಮಿಳನ್' ಪತ್ರಿಕೆಗಾಗಿ ಪ್ರಿಂಟಿಂಗ್ ಪ್ರೆಸ್ ಖರೀದಿಸುವಲ್ಲಿ ಕೂಡ ಕೆ.ಜಿ.ಎಫ್.ನ ಶಾಖೆ ಹಣ ಸಹಕಾರ ನೀಡಿದೆ. ಕೆ. ಜಿ. ಎಫ್. ನ ಸಖ್ಯ ಬೌದ್ಧ ಸಮಾಜದ ಅಂದಿನ ಸದಸ್ಯರಾಗಿದ್ದ ಸಿ. ಲಿಂಗಯ್ಯ ಅವರು ಆ ದಿನಗಳಲ್ಲೇ ಸಿಲೋನಿನ ಮಾಲಿಕಕಾಂಡ ವಿಹಾರಕ್ಕೆ ತೆರಳಿ ಪಾಳಿ ಭಾಷೆ ಕಲಿತು ಬರುತ್ತಾರೆ. 1911ರ ನಂತರ ಅಪ್ಪಾದುರೈ ಅವರು ಕೋಲಾರ ಶಾಖೆಯ ಜವಾಬ್ದಾರಿಯನ್ನು ಕೈಗೆತ್ತುಕೊಂಡು ಅಯೋತಿದಾಸ್ ನಂತರ ಬೌದ್ಧ ಚಳವಳಿಯನ್ನು ಮುಂದುವರಿಸಿದರು. ಇದರ ಪ್ರಭಾವದ ಹಿನ್ನೆಲೆಯಲ್ಲಿ ಎ. ಪಿ. ಪೆರಿಯಸಾಮಿ ಪುಲವಾರ್ ಮತ್ತು ಎಂ. ರಘುವಾರ್ ಅವರು ತಿರುಪತ್ತೂರ್‌ನಲ್ಲಿ ಬೌದ್ಧ ಸಮಾಜದ ಶಾಖೆಯನ್ನು ಸ್ಥಾಪಿಸಿದರು. 1907 ರಿಂದ 1914ರವರೆಗಿನ ಕಾಲಘಟ್ಟವನ್ನು ಸಖ್ಯ ಬೌದ್ಧ ಚಳವಳಿಯ ವಿಸ್ತರಣೆಯ ಹಂತವೆಂದೆ ಚರಿತ್ರೆಯಲ್ಲಿ ಗುರುತಿಸಲಾಗಿದೆ. ಈ ಕಾಲಘಟ್ಟದಲ್ಲೆ ಬೌದ್ಧ ಚಳವಳಿ ದೇಶ-ವಿದೇಶಗಳಲ್ಲಿ ವ್ಯಾಪಿಸಿತು. ಸಿಕಂದರಾಬಾದ್, ನಾಗಪುರ, ಪುಣೆ, ದಕ್ಷಿಣ ಆಫ್ರಿಕಾ, ಎಟಿಕೋಲಾ, ರಂಗೂನ್‌ಗಳಲ್ಲಿ ಸಖ್ಯ ಬೌದ್ಧ ಸಮಾಜದ ಶಾಖೆಗಳು ಸ್ಥಾಪನೆಯಾದವು.

1907 ಜೂನ್ 19ರಂದು ಅಯೋತಿದಾಸ್ ಅವರ ಸಂಪಾದಕತ್ವದಲ್ಲಿ 'ಒರು ಪೈಸಾ ತಮಿಳನ್' ಎಂಬ ತಮಿಳು ವಾರಪತ್ರಿಕೆಯನ್ನು ರಾಯಪೇಟೆಯ ಸಖ್ಯ ಬೌದ್ಧ ಸಮಾಜದ ಕಾರ್ಯಾಲಯದಿಂದ ಪ್ರಕಟಿಸಲಾಯಿತು. ಪತ್ರಿಕೆಯ ಧ್ಯೇಯವನ್ನು ಕುರಿತು : "ಕೆಲವು ತತ್ವಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು, ಗಣಿತಶಾಸ್ತ್ರಜ್ಞರು, ಸಾಹಿತಿಗಳು ಸೇರಿ ಸಾಮಾನ್ಯ ಜನರಿಗೆ ನ್ಯಾಯವನ್ನು ಒಳ್ಳೆಯ ಮಾರ್ಗವನ್ನು ಮತ್ತು ಸತ್ಯವನ್ನು ಬೋಧಿಸುವ ಉದ್ದೇಶದಿಂದ ಈ 'ಒರು ಪೈಸಾ ತಮಿಳನ್' ಪತ್ರಿಕೆಯನ್ನು ಪ್ರಾರಂಭಿಸುತ್ತಿದ್ದೇವೆ" ಎಂದು ಆರಂಭದ ಸಂಚಿಕೆಯಲ್ಲೆ ಸ್ಪಷ್ಟಪಡಿಸಿದರು. ಕೆ.ಜಿ.ಎಫ್., ಬೆಂಗಳೂರು, ತಿರುಪತ್ತೂರು, ರಂಗೂನ್, ದಕ್ಷಿಣ ಆಫ್ರಿಕಾದಿಂದ ಪತ್ರಿಕಾ ಪ್ರತಿನಿಧಿಗಳು ತಪ್ಪದೆ ವರದಿಗಳನ್ನ ಕಳುಹಿಸುತ್ತಿದ್ದರು. ಅಯೋತಿದಾಸ್ ಅವರು ಬರೆಯುತ್ತಿದ್ದ ಸಂಪಾದಕೀಯ ಬರಹಗಳು ಹೊಸ ಆಲೋಚನೆ, ಚರ್ಚೆಗಳನ್ನು ಹುಟ್ಟುಹಾಕಿದವು. ತಮಿಳು ಮೂಲನಿವಾಸಿಗಳ ಪರಂಪರೆ ಹಾಗೂ ಬೌದ್ಧ ಚಿಂತನೆಗಳನ್ನು ಕುರಿತು ಇವರು ಬರೆದ 'ಪೂರ್ವ ತಮಿಳನ್ ಒಲ್ಲಿ' ಎಂಬ ಧಾರವಾಹಿ ಸ್ವರೂಪದ ಬರಹವೇ 1921ರಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಯಿತು. "ಇಂದ್ರಾರ್ ದೇಶದಲ್ಲಿ ಬೌದ್ಧ ಪರ್ವ ದಿನಗಳು(1923); ಜಾತಿಪದ್ಧತಿ-ಹುಟ್ಟು ಬೆಳವಣಿಗೆ; ಯಥಾರ್ಥ ಬ್ರಾಹ್ಮಣರು-ಸುಳ್ಳು ಬ್ರಾಹ್ಮಣರು; ಪೌರಾಣಿಕ ಕತೆಗಳಲ್ಲಿನ ಸತ್ಯಾಸತ್ಯತೆಗಳು" ಮೊದಲಾದ ಅಯೋತಿದಾಸ್ ಅವರ ಬರಹಗಳೆಲ್ಲ ಅವರು ತಮಿಳನ್ ಪತ್ರಿಕೆಗೆ ಬರೆದ ಬರಹಗಳೆ ಆಗಿವೆ. ಇವುಗಳಲ್ಲದೆ ಅಯೋತಿದಾಸ್ ಅವರು ತಮಿಳಿನಲ್ಲಿ : "ಕೊನೆಯಿಲ್ಲದ ಬೆಳಕು(1898); ಜಾತಿಗಳ ಅವತರಣೆ(1912); ಆದಿವೇದಂ(1912); ಅಂಬಿಕೈ ಅಮ್ಮನ್ ಚರಿತ್ರೆ(1921); ವಿವಾಹ ಧರ್ಮ ವ್ಯಾಖ್ಯಾನ(1926); ನಂದನ ಚರಿತ್ರೆಯಲ್ಲಿ ಅಭೂತ ಕಲ್ಪನೆಗಳು(1930); ಮುರುಗನ್ ಚರಿತ್ರೆ(1932); ವೇಷ ಬ್ರಾಹ್ಮಣ ಚರಿತ್ರೆ(1932); ಯಥಾರ್ಥ ಬ್ರಾಹ್ಮಣ ಚರಿತ್ರೆ(1932); ಕಪಾಲೇಶನ ಮೇಲೆ ಚಾರಿತ್ರಿಕ ಸಂಶೋಧನೆ(1932); ವಿಭೂತಿ ಸಂಶೋಧನೆ(1932); ತಿರುಕ್ಕುರುಳ್ ದೈವ ಚಿಂತನೆ(1950); ಹರಿಶ್ಚಂದ್ರನ ಅಸತ್ಯಗಳು(1950); ತಿರುವಳ್ಳುವರ್ ಚರಿತ್ರೆ(1950); ಬೌದ್ಧ ಧರ್ಮ : ಪ್ರಶ್ನೆಗಳು-ಉತ್ತರಗಳು(1955); ಸಖ್ಯ ಮಹಾಮುನಿ(1977)" ಮುಂತಾದ ಗ್ರಂಥಗಳನ್ನು ರಚಿಸಿದ್ದಾರೆ. 'ಇಂದ್ರಾರ್ ದೇಶ ಚರಿತೆ(1957)' ಬರಹದಲ್ಲಿ ಅಯೋತಿದಾಸ್ ಅವರು, ಪ್ರಾಚೀನ ಬೌದ್ಧ ಚರಿತ್ರೆಯನ್ನು ಕುರಿತು ಹೇಳುತ್ತ : "ಪಂಚೇಂದ್ರಿಯಗಳನ್ನು ಗೆದ್ದ ಬುದ್ಧನ ಹೆಸರಿನಲ್ಲಿ ಭಾರತವನ್ನು ಮೊದಲು 'ಇಂದ್ರಾರ್ ದೇಶ' ಎಂದು ಕರೆಯಲಾಗುತ್ತಿತ್ತು. ಜಾತಿಭೇದಗಳು ನಾಶವಾಗಿ, ಶ್ರಮಜೀವಿಗಳಿಗೆ ಒಳ್ಳೆಯ ಬದುಕು ಸಿಕ್ಕಾಗಲೇ ದೇಶಕ್ಕೆ ನಿಜವಾದ ಸ್ವಾತಂತ್ರ್ಯ ಬಂತೆಂದು ಗುರುತಿಸಬೇಕೆಂದು" ಪ್ರತಿಪಾದಿಸಿದ್ದಾರೆ. ಇದೇ ಪತ್ರಿಕೆಯನ್ನು ಕೆ.ಜಿ.ಎಫ್.ನ ಶಾಖೆಯವರು 1908ರಲ್ಲಿ 'ತಮಿಳನ್' ಎಂಬ ಹೆಸರಿನಲ್ಲಿ ಪ್ರಕಟಿಸಲಾರಂಭಿಸಿದರು. ಅದೇ ವರ್ಷ ಆಗಸ್ಟ್‌ನಲ್ಲಿ ಗೌತಮ್ ಪ್ರಿಂಟಿಂಗ್ ಪ್ರೆಸ್ ಅನ್ನು ಸ್ಥಾಪಿಸಿದರು.

1914 ಮೇ 5ರಂದು ರಾಯಪೇಟೆಯಲ್ಲಿ ಅಯೋತಿದಾಸ್ ನಿಧನ ಹೊಂದಿದ ತರುವಾಯದಲ್ಲಿ ಅವರು ಕಟ್ಟಿ ಬೆಳೆಸಿದ 'ಸಖ್ಯ ಬೌದ್ಧ ಸಮಾಜ ಚಳವಳಿ(ಪರಯಾರರ ಚಳವಳಿ)' ತನ್ನ ಪ್ರಭಾವವನ್ನು ಕಳೆದುಕೊಳ್ಳಲಾರಂಭಿಸಿತು. ಶೋಷಿತರ ವಿಮೋಚನೆಯನ್ನು ಧ್ಯೇಯವನ್ನಾಗಿಸಿಕೊಂಡಿದ್ದ ಅಯೋತಿದಾಸ್ ಅವರ ಸಖ್ಯ ಬೌದ್ಧ ಚಳವಳಿ ಮುಂದೆ ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಅವರ ದ್ರಾವಿಡ ಸ್ವಾಭಿಮಾನ ಚಳವಳಿಯನ್ನು ಪರಿಣಾಮಕಾರಿಯಾಗಿ ಪ್ರಭಾವಿಸಿತು. ಬೌದ್ಧ ಚಳವಳಿಯ ನಾಯಕ ಜಿ. ಅಪ್ಪಾದುರೈ ಅವರು 1932ರಲ್ಲಿ ಕೋಲಾರದ ಬೌದ್ಧ ಸಮಾಜದ ನೇತೃತ್ವದಲ್ಲಿ ನಡೆದ 'ದ್ರಾವಿಡ ಆತ್ಮಗೌರವ ಚಳವಳಿಯ ಮೊದಲ ಸಮಾವೇಶ'ಕ್ಕೆ ಪೆರಿಯಾರ್ ಅವರನ್ನು ಕರೆತಂದು 'ನಮ್ಮ ಆಳು'(ನಮ್ಮ ಮನುಷ್ಯ) ಎಂದು ಶೋಷಿತ ಸಮಾಜಕ್ಕೆ ಪರಿಚಯಿಸಿದರು. ಒಟ್ಟಾರೆ, ಸ್ವಾತಂತ್ರ್ಯ ಪೂರ್ವದಲ್ಲಿಯೇ ಬೌದ್ಧ ಚಳವಳಿಯನ್ನು ಶೋಷಿತರ ಸ್ವಾಭಿಮಾನಿ ಚಳವಳಿಯನ್ನಾಗಿ ಕಟ್ಟಿ ಬೆಳೆಸಿದ ತಮಿಳು ದಲಿತ ಹೋರಾಟಗಾರ 'ಪಂಡಿತ ಅಯೋತಿದಾಸ್' ಅವರನ್ನು ಕನ್ನಡಕ್ಕೆ ಪರಿಚಯಿಸಿರುವ ಬಿ. ಸುಜ್ಞಾನಮೂರ್ತಿ ಅವರಿಗೆ ಕನ್ನಡ ಓದುಗರು ಎಂದೆಂದೂ ಕೃತಜ್ಞರು. ●



# ಗಂಗೆಗೌರಿ, ಕೆಂಪಿ ಬುಡ್ಡಿಯರನ್ನು ಕೂಗಿ...

⌘ ಎಚ್.ಜಯಪ್ರಕಾಶ್ ಶೆಟ್ಟಿ

( 'ಹೊಳೆಯೆಂಬ ಹೊನ್ನ ಹರಿವು' ಪುಸ್ತಕದ ಲೇಖನದ ಸಂಗ್ರಹ ರೂಪ : ಲೇಖಕ : ಎಚ್.ಜಯಪ್ರಕಾಶ್ ಶೆಟ್ಟಿ)

ಅಭಿಮಾನದಿಂದ ಹೇಳುತ್ತೇನೆ ನಾನು ಆಸ್ಪತ್ರೆಯಲ್ಲಿ ಹುಟ್ಟಿಲ್ಲ. ಆಸಾಡಿ ತಿಂಗಳ ಬಿರುಮಳೆಯ ನಡುವೆಯೂ ಮೂರು ದಿನಗಳ ತನಕ ನೋವು ತಿನ್ನುತ್ತಾ ನನ್ನವ್ವ ನನ್ನನ್ನು ನಮ್ಮ ದನಕಟ್ಟುವ ಕೊಟ್ಟಿಗೆಯಲ್ಲಿಯೇ ನೆಲಕ್ಕೆ ತಂದಳಂತೆ. ನನ್ನ ಹೊಕ್ಕಳಬಳ್ಳಿಯನ್ನು ಹೊಂದಿದ ಅಮೆಕಸವನ್ನು ಹಟ್ಟಿಯಣೆಗೆ ತಾಗಿಕೊಂಡಂತೆ ಇದ್ದ ಬಸಲೆ ಚಪ್ಪರದಡಿಯೇ ಹೂಳಲಾಯಿತಂತೆ. ಇದು ನನ್ನೊಬ್ಬನ ಕತೆಯಲ್ಲ. ನನ್ನನ್ನೂ ಒಳಗೊಂಡಂತೆ ನಮ್ಮೂರಿನಲ್ಲಿ ಬಹುತೇಕರ ಹುಟ್ಟು ಹಟ್ಟಿಯಣೆಯಲ್ಲಿ ನಡೆದುದು. ತುಂಬಿದ ಬಸುರಿಯರಿಗೆ ಹೆರಿಗೆ ನೋವು ಶುರುವಾದ ತಕ್ಷಣ ಅವರನ್ನು ವರ್ಗಾಯಿಸುತ್ತಿದ್ದುದು ಹಸು ಎಮ್ಮೆಗಳನ್ನು ಕಟ್ಟುವ ಜಾಗಕ್ಕೆ ತಾಗಿಕೊಂಡೇ ಇರುತ್ತಿದ್ದ ಕೊಟ್ಟಿಗೆಗಳಿಗೆ. ದನದ ಕಲಗಚ್ಚು ಕಾಯಿಸುವ ಬಾಯರು ಒಲೆ, ಭತ್ತಕುಟ್ಟಲು ಬಳಸುತ್ತಿದ್ದ ಕುಟ್ಟೊಬರಲು, ಸ್ನಾನಕ್ಕಾಗಿ ಇಡುತ್ತಿದ್ದ ನೀರು ಕಾಯಿಸುವ ವ್ಯವಸ್ಥೆಯಲ್ಲವನ್ನೂ ಹೊಂದಿರುತ್ತಿದ್ದ ಹಟ್ಟಿಯಣೆಗಳೇ ನಮ್ಮ ತಾಯಂದಿರು ನಮ್ಮನ್ನು ಭೂಮಿಗೆ ಇಳಿಬಿಡುವ ತಾಣಗಳಾಗಿದ್ದವು. ಹಾಗಾಗಿ ಹುಟ್ಟಿದ ಮಕ್ಕಳನ್ನು ತಂದೆ ಮನೆಯ ಕಡೆಯವರು ನಮ್ಮ ಹಟ್ಟಿಯಣೆಗಳಲ್ಲಿ ಹುಟ್ಟಿದವನಲ್ವಾ? ಎಂದೇ ಸಂಭೋಧಿಸುತ್ತಿದ್ದುದುಂಟು. ಇಂತಹ ಹಟ್ಟಿಯಣೆಗಳಲ್ಲಿ ಹುಟ್ಟುವುದು ಮಾತ್ರವಲ್ಲದೆ ಅದೇ ಕರುಮರಿಗಳ ಜತೆಗೆ ಜನನೋತ್ತರವಾದ ಬಾಲ್ಯವನ್ನು ಕಳೆಯುವ ಬದುಕಿನ ಸುಖವನ್ನು ಕೈತುಂಬ ಚಾಚಿಕೊಂಡೇ ಬೆಳೆದ ಆನಂದ ನನ್ನೊಂದಿಗಿದೆ. ಇದಲ್ಲದೆ ಈ ನಾಲ್ಕು ಕಾಲಿನ ಹಸು-ಕೋಣ-ಎಮ್ಮೆ-ಎತ್ತುಗಳೆಂಬ ಪಶುಲೋಕ ಭಾಷಿಕವಾಗಿಯೂ ನುಡಿಗಟ್ಟು, ಗಾದೆ, ಕಥೆ ಇತ್ಯಾದಿಗಳ ಮೂಲಕವೂ ನನ್ನ ಮಾನಸಿಕ ವಲಯವನ್ನು ಹೊಕ್ಕು ಗಟ್ಟಿಯಾಗಿ ಕುಂತು ಬಿಟ್ಟಿವೆ.

ಅಕ್ಷರವೆಂಬ ಶಿಕ್ಷಣ ಕ್ರಮಕ್ಕೆ ಒಡ್ಡಿಕೊಳ್ಳುವ ಮೊದಲೇ ಹಾಡಿಹಕ್ಕಲುಗಳಲ್ಲಿರುವ ಛಿದ್ರವಾದ ದೇವರ ಲಿಂಗಗಳಿಗೊ, ಮೂರ್ತಿಗಳಿಗೋ ಸಂಬಂಧಿಸಿದಂತೆ ಕೇಳುತ್ತಿದ್ದ ಕಥೆಗಳಲ್ಲಿ, ಹಾಗೆಯೇ ಜಾನಪದ ಲೋಕದ ಅನಾಥ ನಾಯಕ ನಾಯಕಿಯರಿಗೆ ಸಂಬಂಧಿಸಿದ ಕಥೆಗಳಲ್ಲಿ ಈ ಹಸುಗಳ ಲೋಕದ ಅಂಶಿಕ ಪರಿಚಯ ನಿರಂತರವಿತ್ತು. ಅದೇ ತೆರನಾಗಿ ಅಕ್ಷರ ಜಗತ್ತಿನ ಶಿಕ್ಷಣ ಕ್ರಮಕ್ಕೆ ತೆರೆದುಕೊಳ್ಳುತ್ತಿದ್ದಂತೆ, ಅನ್ನದಾತನ ಒಡನಾಡಿಯಾದ ಜಾನುವಾರುಗಳು ಮತ್ತೆ ಎದುರಾಗುತ್ತಿದ್ದವು. ಈ ಹಂತದಲ್ಲಿ ನನಗೆ ಸ್ಪಷ್ಟವಾಗಿ ನೆನಪಿರುವ ಹಾಗೆ ಮೂರನೇ ತರಗತಿಯಲ್ಲಿ ನನಗೆ ಪಾಠ ಮಾಡುತ್ತಿದ್ದ ಶಿಕ್ಷಕರೊಬ್ಬರು ಉಳಿದ ಯಾವ ಪಾಠವನ್ನೂ ನೆಟ್ಟಗೆ ಮಾಡದೆ ಇದ್ದಾಗಲೂ "ಧರಣಿ ಮಂಡಲ ಮಧ್ಯದೊಳಗೆ . . . ." ಎಂಬ ಗೋವಿನ ಹಾಡನ್ನು ರಾಗಬದ್ಧವಾಗಿ ಹಾಡಿ ಹೇಳುವುದನ್ನು ಮರೆತವರಲ್ಲ. ಆಗಿನ್ನೂ ಒಂಭತ್ತರ ಹರೆಯದ ಆಸುಪಾಸಿನ ನಾನು ಈ ಪಠ್ಯದ ಜತೆಗೆ ಮೂಡುತ್ತಿರುವ ಲಿಂಗಗಳಿಗೋ, ಬೆಳೆಯುತ್ತಿರುವ ಹುತ್ತಗಳಿಗೋ, ತಾಯಿಯಿಲ್ಲದ ತಬ್ಬಲಿ ಮಕ್ಕಳಿಗೋ, ತಾಯ್ತನದ ಅನುಬಂಧದಲ್ಲಿ ಹಾಲು ಸೂಸುವ ಕಥೆಗಳನ್ನು ಕೇಳಿದವನಿದ್ದೆ. ಹುಟ್ಟಿದಾರಭ್ಯದಿಂದ ತೊಡಗಿ ಆಕ್ಷರಿಕವಲ್ಲದ ಮತ್ತು ಅಕ್ಷರ ಜಗತ್ತಿನ ಪಠ್ಯಗಳೆರಡರ ಮೂಲಕವೂ ನಾನು ಕೇಳಿದ ಬಹುಪಾಲು ಕಥೆಗಳು ಕೈಲೂತಿಯಂತಹ ವರ್ಣ ಶ್ರೇಷ್ಠವೋ, ಗಂಗೆ ಗೌರಿಯರಂತಹ ನಾಮ ಶ್ರೇಷ್ಠವೋ ಆಗಿದ್ದ ಹಸುಗಳಿದ್ದು, ಅಂತಹ ಕಥೆಗಳಲ್ಲಿ ನನ್ನ ಮುದ್ದಿನ ಎಮ್ಮೆಗಳಾಗಲೀ, ಕೋಣಗಳಾಗಲೀ, ಎತ್ತುಗಳಾಗಲೀ, ಕರುಹಡೆಯದ ಒಂದೇ ಕಾರಣಕ್ಕೆ "ಗೊಡ್ಡು"ಗಳೆನಿಸಿಕೊಳ್ಳುತ್ತಿದ್ದ ಬಂಜೆಹಸುಗಳಾಗಲೀ ಇರುತ್ತಿರಲಿಲ್ಲ! ಕಥೆಗಳಲ್ಲಿ ಇರುತ್ತಿದ್ದ ಬಹುಪಾಲು ಹಸುಗಳು ತುಂಬಿದ ಕೆಚ್ಚಲನ್ನು ಹೊತ್ತುಕೊಂಡು ಹಾಲು ಸುರಿಯಲು ತಯಾರಾಗಿಯೇ ನಿಂತವುಗಳು! ಯಾರೂ ಕಾಣದಂತೆಯೇ ಹುತ್ತದ ಮೇಲೆ ಹಾಲು ಸುರಿಯುವ, ಕಾಳಿಂಗನಂತಹ ಗೊಲ್ಲ ಕರೆದ ತಕ್ಷಣ ಬಂದು ಅವನ ತಂಬಿಗೆಯನ್ನು ತುಂಬುವಂತೆ ಚಲ್ಲಿ ಸೂಸಿ ಹಾಲು ಕರೆಯುತ್ತಿದ್ದ ಹಸುಗಳೇ. ಪ್ರಾಯಶಃ ಈ ಹಸುಗಳಿಗಿಂತ, ತಂಬಿಗೆ ತುಂಬುವ ಹಾಲೇ ಅತಿಮುಖ್ಯ ವಸ್ತುವೆನಿಸುತ್ತದೆ. ತುಂಬಿದ ಕೆಚ್ಚಲು, ಕರೆದಾಕ್ಷಣ ಬರುವ ಸಿಪಾಯಿ ಶಿಸ್ತು, ತಪ್ಪೇ ಮಾಡಲಾರದ ಸಾತ್ವಿಕ ಮುಖಗಳು, ಜತೆಗೆ ಬಹುಮಟ್ಟಿಗೆ ಎಲ್ಲವೂ ತಾಯಂದಿರುಗಳು. ತಮ್ಮ ಹೆಸರು (ಗಂಗೆ, ಗೌರಿ, ತುಂಗಭದ್ರೆ, ಪುಣ್ಯಕೋಟಿ), ಬಗೆ ಇತ್ಯಾದಿಗಳಲ್ಲಿ ಸ್ವಚ್ಛತೆಯನ್ನು ಮೈಗೂಡಿಸಿಕೊಂಡಿರುವ ಜತೆಗೆ ಪ್ರವೃತ್ತಿಯಲ್ಲೂ ಕನಿಷ್ಠತೆಯ ಸೋಂಕಿನಿಂದ ಮುಕ್ತವಾದಂತೆಯೇ ಇರುವ ಈ ಕೊಟ್ಟಿಗೆಯ ಕಪಿಲೆಯರನ್ನು ಅಕ್ಷರ ಮತ್ತು ಮೌಖಿಕ ಪಠ್ಯಗಳೆರಡೂ ಅಚ್ಚುಹಾಕಿ ಕೊಡುತ್ತಾ ಹೋಗುತ್ತವೆ.

ಹಾಗಾಗಿ ಕಾಳಿಂಗನೆಂಬ ಗೊಲ್ಲನ ಹಸುಗಳಿಗಿದ್ದ ಸಿಪಾಯಿ ಶಿಸ್ತಿರದ ನಮ್ಮ ಹಸುಗಳ ಲೋಕವೇ ಒಂದಿದೆ ಎನಿಸುತ್ತದೆ. ಈ ಲೋಕದೊಳಗಡೆ ಹಸು ಎಂದಾಗಲೇ ನನಗೆ ಹಸಿವು-ಹಸುವುಗಳೆರಡನ್ನೂ ಕೇಳಿದೆಂತೆನಿಸುತ್ತದೆ. ನನಗನಿಸುವ ಹಾಗೆ ಈ ಎರಡರ

ಅನುಬಂಧವಿಲ್ಲದಿದ್ದಲ್ಲಿ ನನ್ನವರ ಹಟ್ಟಿಗಳಿಗೆ ಅರ್ಥವೇ ಇರಲಿಲ್ಲ. ಹಟ್ಟಿ ಮತ್ತು ಹೊಟ್ಟೆಯ ನಡುವೆ ಬಹಳ ಅಂತರವೇನೂ ಇಲ್ಲ. ಹಾಗಾಗಿಯೇ ಏನೋ ಈ ಹಟ್ಟಿಗಳು ಇರುತ್ತಿದ್ದುದೇ ಮನೆಗೆ ತಾಗಿಕೊಂಡು. ನೆಲದ ಜತೆಗೆ ಗುದ್ದಾಡುತ್ತ ಬದುಕನ್ನು ಕಟ್ಟಿಕೊಳ್ಳುವ ನನ್ನವರ ಲೋಕದ (ಉದ್ಯೋಗದ ಹಸಿವು, ಹೊಟ್ಟೆಯ ಹಸಿವು, ಬೆಳೆಯ ಹಸಿವು, ಬಂಡವಾಳದ ಹಸಿವುಗಳೆಂಬ) ಹಸಿವಿನ ಹಲವು ಬಗೆಗಳಿಗೆ ಸುತ್ತಿಕೊಂಡಿರುವ ಹಸು ಕೇವಲ ಒಂದು ಸಂಗತಿಯಲ್ಲ, ಬದಲಾಗಿ ಬದುಕಿನ ಬಹುಮುಖ್ಯ ಭಾಗ. ಹುಲ್ಲು ಮಾಡುಗಳಿಗೋ, ಮರದಡಿಗೋ ಇರುತ್ತಿದ್ದ ದೈವದ ಹೆಸರಿನ ಕಲ್ಲುಚಕ್ಕೆ/ಮುಂಡಿಗೆ/ಉರಗಳ ಎದುರು ಹರಕೆಯ ಸರಕುಗಳಾಗಿ ಪ್ರತಿಬಾರಿಯ ತಿಂಗೋಡು ಪೂಜೆಗಳಲ್ಲಿ ಇರಿಸುತ್ತಿದ್ದುದು ಚಿನ್ನ ಬೆಳ್ಳಿಯ ಕಿರೀಟಗಳನ್ನಾಗಿರಲಿಲ್ಲ. ಬದಲಾಗಿ ಕಂಚು, ಹಿತ್ತಾಳೆಯಿಂದ ಮಾಡಿದ ಈ ಹಸು,ಕೋಣ,ಕರುಗಳ ರೂಹುಗಳನ್ನ! ನಾಕ್ಕಾಲ್‌ಮುಂಬು4 ಆಗಿ ಪರಿಭಾವಿತವಾಗಿದ್ದ ಈ ಜಾನುವಾರುಗಳನ್ನ ಹುಲಿಗಳಿಂದ, ಕಾಯಿಲೆಗಳಿಂದ ಕಾಪಾಡಿಕೊಟ್ಟ ದೈವಕ್ಕೆ ನೀಡಿದ ಕುರುಹುಗಳಿವು. ಹಾಗೆಯೇ ಕಟ್ಟೆವಸಂತ4ಮಾಡಿ ಕಾಳಭೈರವನನ್ನು ಕೂಗಿ ಕರೆದು ಹರಕೆಯ ಹುಂಡಿಗಳಿಗೆ ಕಾಣಿಕೆ ಹಾಕಿ "ಪಾವುತೀರ್ಥ, ಪಾವುಕಡ್ಲೆಯನ್ನ ಮಂದಾಲಗಿರಿಗೆ ಸೇರಿಸಿಕೊಂಡು ಗಂಟಿಕರು, ಎತ್ತು-ಬೀಜ, ಮಕ್ಕಳು ಮರಿಗಳನ್ನು ತಲೆಕಾದು, ಹೋದಲ್ಲಿ ಬಂದಲ್ಲಿ ಒಳ್ಳೇದು ಕೊಡು" ಎಂದು ಮಾಡುತ್ತಿದ್ದ ಏಕಮುಖೀ ಕೇಳಿಕೆಯಲ್ಲೂ ಜಾಗಪಡೆಯುತ್ತಿದ್ದದ್ದು ಈ ಎತ್ತು ಕರುಗಳೇ. ಜೀವನ ಭದ್ರತೆಯ ಸಾಧನವಾಗಿ ನೇಲ್(ನೇಗಿಲು), ನೊಗ, ಎತ್ತು, ಬೀಜಗಳನ್ನು ಸಮಾನವಾಗಿ ಗೌರವಿಸುವ ಕೃಷಿಲೋಕ ನೇಗಿಲು-ನೊಗಗಳಿಗೆ ಕದಿರುಕಟ್ಟಿ, ಬೀಜಕ್ಕೆ ಹತ್ರಾವದಿಯ ಪೂಜೆಮಾಡಿ, ಎತ್ತು ಕೋಣಗಳಿಗೆ ಆರ್ದ್ರಾಡಿ ಬರುವ ದಿನ ಕಾಲು ತೊಳೆದು, ಕರು ದನ-ಎತ್ತುಗಳಿಗೆ ದೀಪಾವಳಿಯ ದೀಪತೋರಿಸಿ, ಕೊಡಿಹಬ್ಬದಂದು ಹುಂಡುಹಾಕಿ, ರೊಟ್ಟಿ ಕಟ್ಟಿ - ಹೀಗೆ ಎಲ್ಲವನ್ನೂ ಪೂಜೆಯ ವರ್ತುಲದೊಳಗೆ ತಂದು ಪೂಜಿಸಿ ಗೌರವಿಸುವ ಜತೆಗೆ ಬಳಕೆಯ ಸಾಧನ ಪಳೆಯುಳಿಕೆಯಾದಾಗ ಸಂಗ್ರಹಾಲಯದಲ್ಲಿರಿಸುವುದಿಲ್ಲ. 'ಮ್ಯೂಸಿಯಂ ಸಂಸ್ಕೃತಿ'ಯ ಮಾದರಿಯದಲ್ಲದ ಈ 'ಪ್ರೀತಿಯ' ಲೌಖಿಕ ಜಗತ್ತು ನಿರುಪಯುಕ್ತ ನೇಗಿಲನ್ನು ಬೂದುನೀರ ಒಲೆಗೆ ಹಾಕಿ ಎಣ್ಣೆನೀರ ಸ್ನಾನದ ಸರಕಾಗಿಸಬಲ್ಲದು. ಹಾಗೆಯೇ ಅನುಪಯುಕ್ತ ಸರಕಾದ ಹಸು-ಕರುಗಳನ್ನು ಅಷ್ಟೇ ಸಹಜವಾಗಿ ವಿಕ್ರಯಮಾಡಿ ಹೊಸ ಹಸು ಕರುಗಳ ವರ್ತುಲವನ್ನು ಮುಂದುವರೆಸಬಲ್ಲದು. ಕುಟುಂಬಯೋಜನೆಯನ್ನು ಧಿಕ್ಕರಿಸಿಯೂ, ಹಟ್ಟಿಯ ಗಾತ್ರವನ್ನು ವಿಸ್ತರಿಸದೆ ಅದೇ ಅವಕಾಶದಲ್ಲಿ ಪ್ರೀತಿಯನ್ನು ಧಾರೆಯೆರೆದು, ಹಸುವನ್ನು ಸಾಕಿ ಹಸಿವಿಂಗಿಸಿಕೊಳ್ಳಬೇಕಲ್ಲವೇ?. ಇಂತಹ ಹಸು ಕೋಣಗಳ ಮೈತೊಳೆದು ಕೋಡ ಇಡುಕಿನಲ್ಲಿರುವ ಕೊಳೆ ತೆಗೆಯಲು ಬೀಳು/ಹುಲ್ಲಿನ ಕೋಡಶೆಳೆ5ಹಾಕಿ ಸ್ವಚ್ಛಗೊಳಿಸಿ, ಮೈಮೇಲೆ, ಬಾಲದ ಗೊಂಚಿನಲ್ಲಿ ಮೆತ್ತಿಕೊಂಡಿರುತ್ತಿದ್ದ ಒಣಗು(ಉಣ್ಣೆ), ಚಟ್ಟ್‌ಒಣಗು, ಹೇನು-ಚೀರುಗಳನ್ನು ಎಳೆದು ತೆಗೆದು ಅವುಗಳ ಜತೆಗೇ ಹೊಳೆಯಲ್ಲಿ ಮಿಂದು ಬರುತ್ತಿದ್ದ ನಮ್ಮೊಳಗೆ ಆ ಹಸು-ಹಸಿವುಗಳೆರಡೂ ನೆನಪಾಗಿ ಕೂತುಬಿಟ್ಟಿವೆ.

ನಮ್ಮ ಪಾಲಿಗೆ ಹಸುವೆಂದರೆ ಕ್ಯಾಲೆಂಡರ್‌ಗಳಲ್ಲಿಯೋ, ವರ್ಣಚಿತ್ರಗಳಲ್ಲಿಯೋ ಮಮತೆಯ ಪೋಸ್‌ನಲ್ಲಿ ಅಂಟಿಸಲ್ಪಟ್ಟ ನಾಲ್ಕು ಕಾಲಿನ ಹುಲ್ಲು ತಿನ್ನುವ ದೇವರಲ್ಲ. ಅಥವಾ ಹಸುಸಾಕದೇ ಪ್ಯಾಕೆಟ್ ಹಾಲು ಕುಡಿಯುವವರು ಕಲ್ಪಿಸಿಕೊಟ್ಟಿರುವ ಕಾಮಧೇನುವೊ, ಪುಣ್ಯಕೋಟಿಯೊ ಅಲ್ಲ. ಅದೊಂದು ಆಪ್ತವಾದ ಜೀವ. ಪ್ರೀತಿಗೆ ಕಾರಣವಾಗುತ್ತಾ ಬದುಕಿಗೆ ಆಧಾರವಾಗಬೇಕೆಂದು ಸಹಜ ಮನುಷ್ಯರಾದ ರೈತರು, ದನಗಾಹಿಗಳು ಇಲ್ಲಿಯವರೆಗೆ ಮತ್ತು ಇನ್ನು ಮುಂದು ಕೂಡ ಮುನ್ನಡೆಸಿಕೊಂಡು ಹೋಗುತ್ತಿರುವ ಪ್ರತ್ಯೇಕವಾದ ಲೋಕ. ಆ ಲೋಕದೊಳಗೆ ಪ್ರವೇಶ ಕಾಣದೆ ಮತ್ತು ಪ್ರವೇಶ ಬಯಸದ ಶುಭ್ರವಸನ ದಾರಿಗಳು ಭಾವಿಸುವಂತೆ ಒಂದೇ ಏಟಿಗೆ ಆರಾಧನೆ ಮಾಡಿಯೋ, ಪೂಜ್ಯತೆಯ ಸರಕಾಗಿ ಮ್ಯೂಸಿಯಂನಲ್ಲಿಟ್ಟೋ ಕೂರುವ ಜಗತ್ತಲ್ಲ ಅದು. ಹೊಟ್ಟೆಗೆ ತಣ್ಣೀರು ಬಟ್ಟೆ ಕಟ್ಟಿಕೊಳ್ಳಲಾರದೆ ಬಾಳಿನ ಬವಣೆಯಿಂದ ಬೇಯುವ ನೈಜ ಅನುಭವದ ಆ ಲೋಕದಲ್ಲಿ ಭಾವನೆಯಿದೆ, ಬದುಕಿದೆ, ವ್ಯವಹಾರವಿದೆ, ಬಳಕೆಯಿದೆ. ಇಂತಹ ಸಂಕೀರ್ಣ ಆಯಾಮದಲ್ಲಿ ನಿಜಗೊಳ್ಳುವ ಹಸುವಿನ ಲೋಕವನ್ನು ಯಾವುದೋ ಒಂದು ಚಿತ್ರಕ್ಕೆ/ಪ್ರತಿಮೆಗೆ ಜೋತುಹಾಕಲಾಗದು. ಕಾಳಿಂಗನೆಂಬ ಗೊಲ್ಲನ ಲೋಕದಲ್ಲಿಯ ಗಂಗೆ, ಗೌರಿ, ತುಂಗೆಯರೂ ಅಲ್ಲಿದ್ದಾರೆ. ಹಾಗೆಯೇ (ಗೊಡ್ಡು) ಅಹಲ್ಯಾನಂತವರೂ ಅಲ್ಲಿದ್ದಾರೆ. ಅಂತಹ ಲೋಕದಲ್ಲಿ ದನ ಕಟ್ಟುವ ಹಟ್ಟಿಗಳು ದೇವಾಲಯವೂ ಆಗುತ್ತವೆ.(ತಾತ್ಕಾಲಿಕವಾಗಿ) ಕೆಲಹೊತ್ತಿನ ನಿಲ್ದಾಣಗಳೂ ಆಗುತ್ತವೆ. ಹಾಗೆಯೇ ಜೀತದ ಮನೆಯೂ ಆಗುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ ಹಟ್ಟಿಯಲ್ಲಿರುವುದು "ಕೊರಳಿಗೆ ಕಟ್ಟುವ ಹಗ್ಗಗಳೇ ವಿನಃ ಮಲ್ಲಿಗೆಯ ದಂಡೆಯಲ್ಲ".

ಹಸು, ಎಮ್ಮೆ, ಎತ್ತುಗಳ ಕೊರಳಿಗೆ ಹಗ್ಗ ಕಟ್ಟಿ, ಬೆನ್ನು ಸವರಿ, ಸರಿಯೆನಿಸಿದಾಗ ಬಾಸುಂಡೆ ಬರುವಂತೆ ಬಾರಿಸಿ, ಮಾನ ತೆಗೆಯದಂತೆ ನಿಯಂತ್ರಿಸಲು ಒದ್ದಾಡಿ, ಮಳೆಗಾಲದ ಉಳುಮೆಗೆ ಜೋಡಿಲ್ಲದವರ ಪಾಡನ್ನು ಕಂಡು ಅನುಭವಿಸಿದ ನನಗೆ ಇತ್ತೀಚಿಗಿನ ದಿನಗಳಲ್ಲಿ ಅವುಗಳನ್ನು ಸಾಕುವುದೇ ಒಂದು ಶಿಕ್ಷೆಯಾಗುತ್ತಿರುವುದು ಆತಂಕದಾಯಕವೆನಿಸುತ್ತಿದೆ. ಹಿಂದೆಂದೂ ಕಂಡುಕೇಳರಿಯದ ಹಾಗೆ ದಿಡೀರ್ ಆಗಿ ಗೋವಿನ ಮೇಲಿನ ಪ್ರೀತಿ ಉಕ್ಕಿ ಹರಿಯುತ್ತಿರುವ ಈ ಗಳಿಗೆಯಲ್ಲಿ ಅದೊಂದು ಜೀವವೆಂಬುದಕ್ಕಿಂತ ಹೆಚ್ಚಾಗಿ ಲಾಂಛನವಾಗುತ್ತಿರುವುದು ಕಳವಳಕಾರಿ ಸಂಗತಿ. ಹಸುವೆಂಬುದನ್ನು ಒಂದು ಏಕರೂಪಿ ಅಚ್ಚಿನಲ್ಲಿ ನಿರೂಪಿಸುತ್ತಿರುವ ಈ ಹೊತ್ತಿನಲ್ಲಿ ನಾನು ಕಂಡ 'ಹಸುವಿನ ಲೋಕ' ಅದರ ಪಾಡು, ಅನಿವಾರ್ಯತೆಗಳನ್ನು ಈ ಮೂಲಕ ಹಂಚಿಕೊಂಡು ಹಗುರಾಗ ಬಯಸುತ್ತೇನೆ.

ಹಸುಸಾಕುವುದು ಅಲಂಕಾರಕ್ಕಲ್ಲ ಎಂಬುದನ್ನು ನಾನು ಹೇಳಬೇಕಾಗಿಲ್ಲ. ಆದರೆ ಹಾಗೆ ಸಾಕುವವರೂ ಉಂಟು. ಕಂಬಳದ ಫಲಕಗೆದ್ದು ಮೀಸೆ ತಿರುವುದಕ್ಕಾಗಿ ಅಲಂಕಾರಕ್ಕೆಂಬಂತೆ ಸಾಕುವವರಿರುವರಾದರೂ ಅವರುಗಳು ನಮ್ಮ ಜಾಗತೀಕರಣದ ಜಗತ್ತಿನ ಉದ್ಯಮಪತಿಗಳಂತಿರುವವರು. ಕ್ರಿಕೆಟಿಗರನ್ನು ಕೊಂಡುಕೊಂಡು ಆಟವಾಡಿಸಿ ಮೋಜುಮಾಡಬಲ್ಲವರು, ಮೃಗಾಲಯದ ಆನೆಯನ್ನು ದತ್ತುಪಡೆಯಬಲ್ಲವರು ಮತ್ತು ದೇಗುಲ/ಮಠಗಳಿಗೆ ಆನೆದಾನ ಮಾಡಬಲ್ಲವರು. ಅಂತಹ ಅಲಂಕಾರ ಪ್ರಿಯರಾರೂ ನನ್ನೂರಿನಲ್ಲಿ ಇರಲು ಅಂದಿಗೆ ಅವಕಾಶವಿರಲಿಲ್ಲ. ಅವರೆಲ್ಲಾ ಇರುವ ಹೊಲಮನೆ ಉಳುವುದಕ್ಕಾಗಿ, ಚಾಕಣ್ಣು(ಡಿಕಾಕ್ಷನ್)ಬಿಡಿಸಿ ಅದಕ್ಕೊಂದಿಷ್ಟು ಹಾಲು ಬೆರೆಸುವುದಕ್ಕಾಗಿ, ಹೋಟೆಲು ಮನೆಗಳಿಗೆ ಹಾಲು ಹಾಕಿ ಚೂರು ಪಾರು ಕಾಸು ಗಿಟ್ಟಿಸಿ ತಾವು ಬೆಳೆಯದ ಉಪ್ಪು ಮೆಣಸು ಹೊಂದಿಸುವ ದೈನಿಕದ ಒತ್ತಡಕ್ಕಾಗಿ ಹಸು ಸಾಕುತ್ತಿದ್ದರು ಮತ್ತು ಸಾಕುತ್ತಿರುವವರು. ಈ ಒತ್ತಡಕ್ಕಾಗಿಯೂ ಅವರು ವೈಜ್ಞಾನಿಕ ಹೈನುಗಾರಿಕೆ ನಡೆಸಲಾರದ ಸ್ಥಿತಿಯಲ್ಲಿ ಕರಾವಿಗೆಂದು ಸಾಕುತ್ತಿದ್ದುದು ಬಹುವಾಗಿ ಮಲನಾಡುಗಿಡ್ಡ ಇಲ್ಲವೆ ದೇಸೀ ತಳಿಯ ಕಿರುಗಾತ್ರದ ಅವೇ ಹುಂಡಿ, ಕೆಂಪಿ, ಬುಡ್ಡಿಯಂತಹ ದನಗಳನ್ನು. ವರ್ಷಕ್ಕೊ, ಎರಡು ವರ್ಷಕ್ಕೊ ಕರುಹಾಕುವ ಈ ಹಸುಗಳು, ದಿನಕ್ಕೆ

ನಾಲ್ಕೈದುಸಿದ್ದೆ7ಹಾಲು ಕೊಟ್ಟರೆ ಅದೇ ಹೆಚ್ಚು. ಇವು ಹಾಕುವ ಹೆಣ್ಣು ಕರುಗಳನ್ನು ಸಂತಾನವಾಗಿ ಬಳಸಿಕೊಳ್ಳಲು ಸಮಸ್ಯೆಯಿರಲಿಲ್ಲ. ಆದರೆ ಗಂಡುಕರುಗಳು ಮಾವಿನಕಾಯಿ ಗಾತ್ರದವುಗಳೇ ಹೆಚ್ಚಾಗಿರುತ್ತಿದ್ದ ಕಾರಣಕ್ಕಾಗಿ ಉಳುವ ಗುಡ್ಡಗಳನ್ನಾಗಿ ಬಳಸಿಕೊಳ್ಳಲು ಸಾಧ್ಯವಾಗದೆ ಬೆಳೆಯುವ ತನಕ ಕೆಲವೊಂದಿಷ್ಟು ಕಾಲ ಹಿಂದಣೆಯಲ್ಲಿ ಕಟ್ಟಿ, ಅಲ್ಲಿಯೇ ಸಗಣಿಯ ಮೇಲೆಯೇ ಹುಲ್ಲುತಳಿದು, ಬಿಟ್ಟು-ಕಟ್ಟಿ ಹೇಗೋ ಅನುಭವಿಸುವಷ್ಟು ಉಪದ್ರವವನ್ನು ಅವುಗಳಿಂದ ಅನುಭವಿಸಿಯಾದ ಮೇಲೆ ಮತ್ತು ಹಿಂದಣೆಯಲ್ಲಿ ಮತ್ತೊಂದನ್ನು ಕಟ್ಟಲೇಬೇಕಾದಾಗ ಇವುಗಳನ್ನು ಸಿಕ್ಕಷ್ಟಕ್ಕೆ ಸಾಗಹಾಕಿ ಯಾವುದಾದರೂ ಒಂದು ಸಣ್ಣ ಖರ್ಚನ್ನು ಸರಿತೂಗಿಸಿಕೊಳ್ಳುತ್ತಿದ್ದುದು ರೂಢಿ. ಕಟ್ಟಿ ಸಾಕಲು ಸಾಧ್ಯವಿಲ್ಲವೆನಿಸಿದಾಗ, ಯಾರು? ಮತ್ತು ಯಾಕೆ? ಕೊಳ್ಳುತ್ತಾರೆ ಎಂಬ ಅರಿವಿದ್ದೂ, ಹಟ್ಟಿಯನ್ನು ವಿಸ್ತರಿಸಲಾರದ, ಮನುಷ್ಯರಂತೆ ಅನುಪಯುಕ್ತ ಮಗುವನ್ನು ಲಿಂಗಪತ್ತೆಮಾಡಿ ಭ್ರೂಣಹತ್ಯೆ ಮಾಡುವ ವೈದ್ಯಕೀಯ ರೂಢಿಯೂ ಇರದ ಅವರು ಅವುಗಳನ್ನು ಮಾರಲೇಬೇಕು. ಅವುಗಳು ಎಲ್ಲಿಗೆ ಹೋಗುತ್ತವೆ ಎಂಬ ಅರಿವಿದ್ದೂ ಒಂದೂ ಕಾಸಿಲ್ಲದೆ ಎಲ್ಲಿಗೋ ಹೊಡೆದು ಬರುವುದು ಅವರಿಗೆ ಸಾಧ್ಯವೂ ಇರಲಿಲ್ಲ. ಮಾತ್ರವಲ್ಲ ನನ್ನೂರಿನಲ್ಲಿ ಹಾಗೆ ಹೊಡೆದುಬಂದ ಒಂದೇ ಒಂದು ಉದಾಹರಣೆಯನ್ನು ನಾನು ಕಂಡಿಲ್ಲ. ಆದರೆ ಹಿಂದಣೆಗಳು ಮಾತ್ರ ಹೊಸ ಸದಸ್ಯನಿಗಾಗಿ ಖಾಲಿಯಾಗುತ್ತಿದ್ದುದು ನಿಜ.

ಹಾಗೆಯೇ ಉಳುವುದಕ್ಕಾಗಿ ತರುತ್ತಿದ್ದ ಸಾಕಷ್ಟು ಜಾನುವಾರುಗಳಲ್ಲಿ ಬಾಯ್ಗೂಡಿ ಹಲ್ಲಾದವುಗಳೇ ಹೆಚ್ಚು. 2–3 ಸಾಗುವಳಿ ಮಾಡಿದ ಮೇಲೆ ಬಹುಸಂದರ್ಭಗಳಲ್ಲಿ ಇವುಗಳ ವಿಕ್ರಯವೂ ಮೇಲಿನಂತೆಯೇ ಅನಿವಾರ್ಯ. ಸಣ್ಣ ಬಂಡವಾಳವನ್ನು ಹೂಡಿ ತರುತ್ತಿದ್ದ ಎತ್ತು/ಕೋಣಗಳು ತಮ್ಮಿಂದ ಖಾಲಿಯಾಗುವಾಗ ಒಂದಿಷ್ಟಾದರೂ ಇಡಗಂಟು ಉಳಿಸಿಹೋಗದೇ ಇದ್ದರೆ ಸಣ್ಣ ರೈತರ ಪಾಡು ನಿಲುಗಡೆಗೆ ಬಿದ್ದಂತೆಯೇ. ಅದೇ ತೆರನಾಗಿ ಹಾಲು ಕರೆಯುವ ಮುದಿಹಸುಗಳೂ ತಮ್ಮ ಕರು ಉತ್ಪಾದಿಸುವ ಸಾಮರ್ಥ್ಯ ತೀರಿದ ಮೇಲೆ, ಹಾಲು ಕೊಡಲಾರದ ಸ್ಥಿತಿಯಲ್ಲಿ ಮುಂದಣೆಯಿಂದ ಹಿಂದಣೆಗೆ ಬರಲೇಬೇಕು. ಯಾಕೆಂದರೆ ಕರಾವಿನಚಕ್ರದಲ್ಲಿ ಆ ಮುದಿ ಹಸುವಿನ ಮಗಳಿಗೆ ಹೊಸಜಾಗ ಬೇಕಲ್ಲವೇ? ಇವು ಹಿಂದಣೆಯಲ್ಲಿ ಸಗಣಿ ಮೇಲೆ ಅಷ್ಟಿಷ್ಟು ದಿನ ಕಳೆದು ಖಾಲಿಯಾಗುತ್ತಿದ್ದವು, ಇಲ್ಲವೇ ಮಾರಲ್ಪಡುತ್ತಿದ್ದವು. ಕರು ಹಾಕಲಾರದ ಕರಾವಿನ ದನ, ಎಮ್ಮೆಗಳನ್ನು ಬಂಡವಾಳಕ್ಕಿಂತ ಹೆಚ್ಚಾಗಿ ಮುದಿವಯಸ್ಸಿನಲ್ಲಿ ಕಂಡುಕೊಳ್ಳುವುದು ಅಷ್ಟು ಸುಲಭವಲ್ಲ. ವಯಸ್ಸಾದಂತೆ ಬಾಯಿಯ ಹಲ್ಲುಗಳು ಒಂದೊಂದಾಗಿ ಜಾರಿ ಆಹಾರವನ್ನು ಸ್ವಯಂ ಜಗಿದು ನುಂಗಲಾರದ ದುರ್ಬಲ ಸ್ಥಿತಿಯಲ್ಲಿ ಚಂಡೆ ಉಗಿಯುವಂತಾಗುವ ಅವುಗಳ ಪಾಡು ಯಾತನಾದಾಯಕ. ಮೆಂದು ಬರಲಾರದ, ಹಾಕಿದ್ದನ್ನೂ ಚೆನ್ನಾಗಿ ಜಗಿದು ತಿನ್ನಲಾರದ ಜೀರ್ಣಾವಸ್ಥೆಯಲ್ಲಿ, ವಯಸ್ಸಿನ ಪರಿಣಾಮವಾಗಿ ಮೈಮೇಲೆ ಆಗುವ ಗಾಯಗಳು ಬೇರೆ. ಚರ್ಮದ ಮೇಲೆ ಈ ಹಂತದಲ್ಲಿ ಆಗುವ ಗಾಯಗಳು, ಅವುಗಳ ಮೇಲೆ ಕೂತು ಇಪ್ಪಿ8ಹಾಕುವ ನೊಣಗಳನ್ನು ಓಡಿಸಿಕೊಳ್ಳುವಲ್ಲಿಯೂ ಸೋಲುವ ಚೋಂಕಾಗಿ(ರೋಮಉದುರಿ) ನಿತ್ರಾಣಗೊಂಡ ಬಾಲ ಹಾಗೂ ಅಲ್ಲಾಡಿಸಲಾರದ ಕಿವಿಗಳಿಂದಾಗಿ ಈ ಗಾಯಗಳಲ್ಲಿ ಹುಳುವಾಗಿ ನೆತ್ತರು ಸೋರುವಂತಾಗುತ್ತದೆ. ಬಯಲು ಹಾಗೂ ತೆರದ ಹಟ್ಟಿಯಲ್ಲಿ ಈ ಗಾಯಗಳ ಮೇಲೆ ದಾಳಿಮಾಡುವ ಕಾಗೆಗಳ ಹಿಂಸೆ ನೋಡಿಕೊಂಡಿರುವುದೇ ಯಾತನಾದಾಯಕ. ಅದೂ ಸಹಿಸಿಕೊಂಡು ಅವುಗಳು ಹಟ್ಟಿಯಲ್ಲಿಯೇ ಉಳಿದವೆಂದರೆ ಹಾಲುಕೊಡುವಾಗ ಕಾಮಧೇನುವಾಗಿದ್ದ ಅದೇ ಹಸು ಅಕ್ಷರಶಃ "ಕಾಡುವಧೇನು" ಆಗಲೂಬಹುದು. ಮಲಗಿದಲ್ಲಿಂದ ಏಳಲಾರದ ಅವುಗಳನ್ನು ಎಬ್ಬಿಸುವ ಸಲುವಾಗಿ ಅನಿವಾರ್ಯವಾಗಿ ಬಾಲವನ್ನು ತಿರುವಲಾಗುತ್ತದೆ. ಕೊನೆ ಕೊನೆಗೆ ಹೀಗೆ ತಿರುವುವ ವೇಳೆ ಉಂಟಾಗುವ ಬಾಲದ ವೇದನೆಗೂ ಎದ್ದು ನಿಲ್ಲುವ ತಾಕತ್ತು ಕಳೆದುಕೊಂಡ ಮೇಲೆ ಅವುಗಳ ಶುಶ್ರೂಷೆಗೆ ಕನಿಷ್ಠ 3–4 ಜನ ನಿಲ್ಲಬೇಕಾದ ಸ್ಥಿತಿ ಉಂಟಾಗಬಹುದು. ಎಮ್ಮೆ, ಕೋಣ, ಎತ್ತುಗಳಾದರೆ ಈ ಸ್ಥಿತಿ ಮತ್ತಷ್ಟು ಸಂಕಟದಾಯಕ. ಆದಾಯವೂ ಇಲ್ಲದೆ ಬಂಡವಾಳವನ್ನೂ ಕಳೆದುಕೊಳ್ಳುತ್ತಾ ಅನಾಥಾಶ್ರಮದಂತೆ ಚಾರಿಟಿಯಕೆಲಸ ಮಾಡುವ ಸಾಮರ್ಥ್ಯ ಒಬ್ಬ ಸಾಮಾನ್ಯ ರೈತನಿಗೆ ಇರುವುದು ಸಾಧ್ಯವೇ? ಕೈ ಮೈ ನೆಕ್ಕಿದ ಅದೇ ಹಸು ಈಗ ಇಡಿಯ ಮನೆಯನ್ನೇ ನೆಕ್ಕಿನಾಶ ಮಾಡಿದ ಅನುಭವವಾಗುತ್ತದೆ. ದುರಂತವೆಂದರೆ ಈ ಸ್ಥಿತಿಗೆ ತಲುಪಿದ ಹಸುವನ್ನು ಕೊಂದು ಪಾಪಕಟ್ಟಿಕೊಳ್ಳಲಾರದ ಅವರು ಅದು ಸಾಯುವ ತನಕ ಪಡಬಾರದ ಪಾಡುಪಡುತ್ತಾರೆ. ಹಾಗಾಗಿ ಆ ಸ್ಥಿತಿ ಒದಗದಿರಲಿ ಎಂದು ಮುಂಚಿತವಾಗಿಯೇ ಅದನ್ನು ಹಿಂದಣೆಯಲ್ಲಿ ಕಟ್ಟಿ ಹಟ್ಟಿಯಿಂದ ಹೊರಹಾಕಿ ಹಗುರಾಗಲು ಕಾಯುತ್ತಾರೆ.

## ಹೊಳೆಗಟ್ಟಿದ ಶೆಟ್ಟಿ ದಡಮುಟ್ಟಿಸಿದ ಖಾದರ್:

ನನ್ನೂರಿನ ಅನೇಕರಲ್ಲಿ ಹಸುಗಳನ್ನು ಬಂದೋಬಸ್ತ್ ಮಾಡುವುದಕ್ಕೆ ಸಂಬಂಧಿಸಿ ಅಸಡ್ಡೆಯೂ ಇದೆ. ಹೀಗೆ ಅಸಡ್ಡೆ ಮಾಡುವವರು ತಮ್ಮ ಹಸು-ಕರುಗಳಿಂದಾಗಿ ಹಗುರ ಮಾತುಗಳನ್ನು ಕೇಳುವುದನ್ನು ತಪ್ಪಿಸಿಕೊಳ್ಳಲಾಗದು. ಈ ಉದಾಸೀನತೆಯ ಕಾರಣದಿಂದ ಕಣ-ಮನೆ-ಗದ್ದೆಗಳಿಗೆ ಸ್ವಲ್ಪ ಮುಕ್ತವಾಗಿಯೇ ನುಗ್ಗುವ ಇವರ ಹಸುಕರುಗಳಿಂದಾಗಿ ಕೇಳಬಾರದ ಬೈಗುಳಗಳನ್ನೂ ಅಷ್ಟೇ ಮುಕ್ತವಾಗಿ ಕೇಳಬೇಕಾಗುತ್ತದೆ. ಅದು ಅನೇಕರಿಗೆ ಸ್ವಲ್ಪ ಅಭ್ಯಾಸವಾಗಿಯೂ ಉಂಟು. ನನ್ನ ಹತ್ತಿರದ ದಾಯಾದ್ಯರೊಬ್ಬರ ಈ ಸಂಬಂಧವಾದ ಅಜಾಗ್ರತೆ ಒಂದು ಮಳೆಗಾಲದ ಆರಂಭದಲ್ಲಿ ಸ್ವಲ್ಪ ದುಬಾರಿಯೇ ಆಯ್ತು. ಸಾಕಷ್ಟು ಬೇಸಾಯದ ಹೊಲವಿದ್ದ ಅವರಲ್ಲಿ ಉಳುವುದಕ್ಕೆಂದು ಗಟ್ಟಿಮುಟ್ಟಾದ ಆಳೆತ್ತರದ ಎರಡು ಕೋಣಗಳಿದ್ದವು. ಅವು ಅಂತಹ ಕಾಟು ಸ್ವಭಾವದವುಗಳೂ ಆಗಿರಲಿಲ್ಲ. ಆದರೆ ಜಾನುವಾರು ಜಾತಿಯಲ್ಲವೇ? ಹಸಿರು ಕಂಡಲ್ಲಿಗೆ ಬಾಯಿ ಎತ್ತಿಕೊಂಡು ಹೋಗುವುದು ಸಹಜವೇ. ಪಾಪದ ಕೋಣಗಳಿಗೆ ಸಂಬಂಧಿಸಿದಂತೆ ಒಂದಾನೊಂದು ಮಳೆಗಾಲದ ದಿನದಲ್ಲಿ ಆಗಬಾರದ ಅನಾಹುತದ ಘಟನೆಯೊಂದು ಘಟಿಸಿಯೇ ಹೋಯಿತು. ಆ ಘಟನೆಯಲ್ಲಿ ನಡೆದುದಿಷ್ಟು. ನೇಜಿಗೆ ಪೂರ್ವದಲ್ಲಿ ಗದ್ದೆಯಗಳನ್ನು ಉಳುಮೆಮಾಡಿ ಮಣ್ಣು ಹದ ಮಾಡುವ ಸಲುವಾಗಿ ಅರ್ಕ್ಲಹೂಂಟೆ ಅಂತ ನಮ್ಮೂರಕಡೆ ಮಾಡುವುದಿದೆ. ಗದ್ದೆಯಲ್ಲಿ ಬೆಳೆದ ಹುಲ್ಲುಕಸಗಳು ಮಳೆಗಾಲದ ನೀರಲ್ಲಿ ಕೊಳೆಯುವುದಕ್ಕೆ ಅನುಕೂಲವಾಗುವಂತೆ ಮಾಡುವ ಮೊದಲ ಉಳುಮೆಗಳಿವು. ಈ ಉಳುಮೆಗಾಗಿ ಎಂದಿನಂತೆ ಕೋಣದ ಮಾಲಿಕ ಅವುಗಳನ್ನು ಉಳುಮೆಗೆ ಒಯ್ದಿದ್ದಾನೆ. ಹೂಡಿಬಿಟ್ಟು(ಉಳುಮೆ ಮಾಡಿ) ದೈವದಮನೆಯ ಎದುರಿನ ಮಕ್ಕಿಯ(ಬೆಟ್ಟುಗದ್ದೆ)ಹೊಂಡದಲ್ಲಿ ಮೈತೊಳೆದು,ಹಾಗೆಯೇ ಮೇಯಲಿ ಎಂದು ಅಲ್ಲಿಯೇ ಬಿಟ್ಟ ಯಜಮಾನ ಮನೆಯ ಕಡೆಗೆ ಬಂದಿದ್ದಾನೆ. ಅವುಗಳೊ ಹಾಗೆಯೇ ಮೇಯುತ್ತಾ ಮತ್ತೊಬ್ಬ ದಾಯಾದ್ಯರ ಮನೆಯೆದುರಿನ ಅಗೆ ಹಾಕಿದ ಗದ್ದೆಗೆ ಇಳಿದಿವೆ. ವಯಸ್ಸು ಮೀರಿದ ಯಜಮಾನ ದೊಣ್ಣೆ ಸಮೇತವಾಗಿ ಇವುಗಳನ್ನು ಅಟ್ಟಿಸಿಕೊಂಡು ಬಂದಾಗ ಕಕ್ಕಾಬಿಕ್ಕಿಯಾಗಿ ಹೊಳೆಬದಿಯ ಕಡೆಗೆ ಅವು ಪೇರಿಕಿತ್ತಿವೆ. ಆ ದಿಕ್ಕಿಗೆ ಬಂದವುಗಳನ್ನು ಬೆನ್ನಟ್ಟಿಕೊಂಡು ಬಂದ ಅಜ್ಜನ ಗಂಟಲಿಗೆ ಹೆದರಿ ಹೊಳೆಹಾರಿದ ಕೋಣಗಳಲ್ಲಿ ಒಂದು ಮಾತ್ರ ಮತ್ತೆಲ್ಲೋ ದಡ ಸೇರಿತ್ತು. ಆದರೆ ಮತ್ತೊಂದು ಕೋಣ ಯಾವ ದಿಕ್ಕಿಗೆ ಹೋಯಿತೆಂಬುದೇ ಅರ್ಥವಾಗಲಿಲ್ಲ. ಸ್ವಲ್ಪ ಹೊತ್ತಿನ ಬಳಿಕ ಬಂದ ಹೋರಿ(ಕೋಣ)ಯ

ಯಜಮಾನ ಬಯಲಿನಲ್ಲಿ ಸಿಕ್ಕಿದ ಒಂಟಿಕೋಣವನ್ನು ಹಟ್ಟಿಗೆ ಕಟ್ಟಿ ಮಿಕ್ಕಿದ್ದನ್ನು ಸಿಕ್ಕ ಸಿಕ್ಕ ಕಡೆ ಹುಡುಕಿದರೂ ಎಲ್ಲಿಯೂ ಪತ್ತೆಯಾಗಿರಲಿಲ್ಲ.

ದಿನಗಳು ಉರುಳಿದವು. ಹಟ್ಟಿಯಲ್ಲಿ ಕಟ್ಟಿದ ಒಂಟಿಕೋಣ ತನ್ನ ಸಂಗಾತಿಗಾಗಿ ಅಲ್ಲಿಂದಲೇ ಗೆಲೆಯ(ಕೂಗ)ತೊಡಗಿತು. ಮನೆಮಂದಿ ಊರೆಲ್ಲಾ ಹುಡುಕಿ ಕಾಣದೆ 'ನಿಮಿತ್ತ' ಕೇಳಿದರು. ದೈವ ಆಳಿಕೆ ಮಾಡಿ 'ನುಡಿ' ಕೇಳಿದರು.ಮಾತ್ರವಲ್ಲ ತುಂಬಿದ ಮಳೆಗಾಲದಲ್ಲಿ ಬೆಳೆದುನಿಂತ ಅಗೆ ಬೆದೆಯನ್ನು ಮಣ್ಣಿನಲ್ಲಿ ಸೇರಿಸಲಾರದೆ ಹಡುಬಿದ್ದುಹೋಗುವ ಆತಂಕದಲ್ಲಿ ನರಳಿದರು. ದೈವದ ಪಾತ್ರಿ,ನಿಮಿತ್ತದ ಜ್ಯೋತಿಷಿಗಳು ಇವರಲ್ಲಿ ಇದ್ದಬದ್ದ ಭರವಸೆಯೂ ಕಳೆದುಹೋಗುವಂತೆ ಮಾಡಿದರೆ ವಿನಹಾ ಪರಿಹಾರ ನೀಡಲಾಗಲಿಲ್ಲ. ಒಬ್ಬೊಬ್ಬರು ಒಂದೊಂದು ತರಹ ಮಾತಾಡಿದರು.ಊರೂರು ಸುತ್ತಿಯೂ ಕೋಣದ ಸುಳಿವೇ ಸಿಗಲಿಲ್ಲ.

ಘಟನೆ ನಡೆದ ನಾಲ್ಕೈದು ದಿನಗಳ ತರುವಾಯ ತುಂಬಿದ ಹೊಳೆಯಲ್ಲಿ ತೇಲಿಬರುವ ಕಟ್ಟಿಗೆಯ ದಿಮ್ಮಿಗಳನ್ನು ಒಟ್ಟು ಹಾಕಿಕೊಂಡುಹೋಗುವ ತಮ್ಮ ರೂಢಿಯಂತೆ ಕಂಡ್ಲೂರಿನ ಕೆಲ ಸಾಬರುಗಳು ದೋಣಿ ಪಾತಿಯೊಂದಿಗೆ ಬಂದಿದ್ದರು. ವಾರಾಹಿಯ ಎಡದಂಡೆಯಲ್ಲಿರುವ ಬೀಳು-ಬಲ್ಲೆಗಳಲ್ಲಿ ಸೌದೆ ಕೂತಿರುತ್ತದೆ ಎಂಬ ಆಸೆಯಲ್ಲಿ ಪಾತಿಯನ್ನು ತೆಗೆದುಕೊಂಡು ಬಿದಿರು ಮೆಳೆಯೊಂದರಲ್ಲಿ ದೋಣಿಯ ಜಲ್ಲೆಯನ್ನು ತುರುಕಿದಾಗ ದೀರ್ಘವಾಗಿ ಉಸಿರು ಬಿಟ್ಟಂತಾಗಿ ಖಾದರ್‌ಸಾಬ್ ಬೆಚ್ಚಿಬಿದ್ದ! ತಕ್ಷಣ ಅದೊಂದು ಭೀಕರವಾದ ಹಾವಿರಬಹುದು ಎಂಬ ಆತಂಕಕ್ಕೆ ಒಳಗಾದ ಅಬ್ದುಲ್‌ಖಾದರ್ ಹತ್ತಿರದಲ್ಲಿ ಲಭ್ಯವಿದ್ದ ಒಂದಿಬ್ಬರನ್ನು ಪಾತಿಯೊಂದಿಗೆ ಅಲ್ಲಿಗೆ ಬರುವಂತೆ ಕೂಗಿದ. ಪ್ರವಾಹದಲ್ಲಿ ತೇಲಿ ಬರುವ ಇಂತಹ ಹಾವುಗಳನ್ನು ಮುಟ್ಟಲು ಹೋಗುವುದು ಸ್ವಲ್ಪ ಆತಂಕಕಾರಿ. ಆದರೆ ನಂತರ ಸ್ವಲ್ಪ ಧೈರ್ಯ ಮಾಡಿಕೊಂಡು ದೋಣಿಯಲ್ಲಿಯೇ ನಿಂತು ಸರ್ಕಸ್ ಮಾಡಿ ಜಲ್ಲೆ ತೂರಿನೋಡುವಾಗ ಕೋಡಿಗೆ ಸಿಕ್ಕಿದ ಹಗ್ಗ ಬಿಡಿಸಿಕೊಳ್ಳಲಾರದೆ, ನೀರಿನಲ್ಲಿಯೇ ಕಾಲನ್ನೂ ಬಡಿಯಲಾರದ ನಿಸ್ತೇಜ ಸ್ಥಿತಿಯಲ್ಲಿರುವ ಕೋಣವನ್ನು ಕಂಡು ನಿರಾಳರಾಗಿ ತಮ್ಮ ಸೌದೆ ಕೆಲಸ ಮರೆತು, ಅದನ್ನು ಬಚಾವು ಮಾಡುವ ಕೆಲಸದಲ್ಲಿ ತೊಡಗಿಕೊಂಡರು. ಕೋಡಿಗೆ ಸಿಕ್ಕಿದ ಬೀಳಿನಿಂದ ಬಿಡಿಸಿಕೊಳ್ಳಲಾರದೇ ನೀರಿನಲ್ಲಿಯೇ ನಿಂತ ಕೋಣವನ್ನು ಅಲ್ಲಿಂದ ಬಿಡಿಸಿ ತೇಲಿ ಹೋಗದ ಹಾಗೆ ಹಗ್ಗವೊಂದನ್ನು ಬಳಸಿ ಕಟ್ಟಿಕೊಂಡು ದಡಕ್ಕೆ ತಂದರು. ಆದರೆ ಅವರಿಗೆ ಅದು ಯಾರ ಕೋಣ(ಹೋರಿ) ಎಂಬ ಮಾಹಿತಿಯಿರಲಿಲ್ಲ. ನಮ್ಮೂರಿನ ಕೋಣ ಕಳೆದು ಸುದ್ದಿಯನ್ನೂ ಆವರು ಬಲ್ಲವರಾಗಿರಲಿಲ್ಲ. ಯಾವ ಊರಿನ ಕೋಣವೊಂದು ಹೀಗೆ ತೇಲಿ ಬಂದು ಸಿಕ್ಕಿಹಾಕಿಕೊಂಡಿದೆ ಎಂಬುದನ್ನು ತಿಳಿಯದ ಅವರುಗಳು ಕಾಕತಾಳೀಯವಾಗಿ ಅದನ್ನು ನಮ್ಮಕಡೆಯ ಹೊಳೆಯದಡಕ್ಕೆ ತರಬೇಕಾಗಿ ಬಂದುದರಿಂದ ಆ ಸುದ್ದಿಯನ್ನು ನಮ್ಮೂರಿಗೆ ಮುಟ್ಟಿಸಿದರು. ಊರ ಕಡೆಗೆ ಬಂದು ಸಂಗತಿ ತಿಳಿಸಿದಾಗ ಇಲ್ಲಿಯವರೆಗೆ ಕೋಣ ಕಳೆದುಕೊಂಡು ಕಂಗಾಲಾಗಿದ್ದವರು ನಿಟ್ಟುಸಿರುಬಿಟ್ಟರು. ಅವರು ಮತ್ತು ಆ ಊರಮಂದಿಯ ಖುಷಿಗೆ ಪಾರವೇ ಇರಲಿಲ್ಲ. ಅನೇಕರಿಗೆ ಅದೊಂದು ಸಾಹಸವಾಗಿ, ಉಪಕಾರವಾಗಿ ಏನೇನೋ ಆಗಿ ಕಂಡಿತು. ಅಂದಿನಿಂದ ಖಾದರ್ ಈ ಘಟನೆಯೇ ನಿಮಿತ್ತವಾಗಿ ನಿರಂತರ ಸಂಪರ್ಕ ಹೊಂದಿದ ವ್ಯಕ್ತಿಯಾಗಿ ಊರಿನ ನಂಬಿಕಸ್ತನಾದುದು ಮುಂದಿನ ಮಾತು.

ಹೊಳೆಯಿಂದ ಹೊರಬಂದರೂ 4-5 ದಿನಗಳಿಂದ ಒಂದೇ ಸಮನೆ ಸುರಿಯುವ ಮಳೆ, ಕಾಲಬುಡದಲ್ಲಿರುವ ತಂಡಿನೀರುಗಳ ನಡುವೆ ಸಿಕ್ಕಿ ತಿನ್ನುವುದಕ್ಕೆ ಏನೂ ಇಲ್ಲದೆ ನಾಲ್ಕು ಹೆಜ್ಜೆ ನಡೆಯಲಾರದ ಸ್ಥಿತಿಗೆ ತಲುಪಿದ ಕೋಣವನ್ನು ಆ ಮುಸಲ್ಮಾನ ಹುಡುಗರ ನೆರವಿನಿಂದ ಹಟ್ಟಿಗೆ ತಂದರು. ಕೋಣ ಕಳೆದುಕೊಂಡಿದ್ದ ನನ್ನ ದಾಯಾದ್ಯರಿಗೆ ಅದು ಯಾವ ಸ್ಥಿತಿಯಲ್ಲಿಯೇ ಇರಲಿ, 'ಮನೆಗೆ ಬಂತಲ್ಲಾ' ಎನ್ನುವ ನೆಮ್ಮದಿಯ ಮುಂದೆ ಸ್ವರ್ಗವೂ ಆ ಕ್ಷಣದಲ್ಲಿ ಹಗುರವಾಗಿಯೇ ಕಂಡಿತ್ತು.ಈ ಘಟನೆ ನಡೆಯುವ ವೇಳೆ ನಾನು 5-6ನೇ ತರಗತಿಯಲ್ಲದ್ದೆ. ಇದು ಕನಿಷ್ಠ 30 ವರ್ಷಗಳ ಹಿಂದಿನ ಕಥೆ. ಅಚ್ಚರಿಯೆಂದರೆ ಇಂದು ನಾವು ಕೇಳಿಸಿಕೊಳ್ಳುತ್ತಿರುವ ಹಾಗೆ ಎಲ್ಲೆಂದರಲ್ಲಿ ಸಿಕ್ಕ ಹಸು ಕೋಣಗಳನ್ನು ಕದಿಯುತ್ತಾರೆಂಬ ಆಪಾದನೆಯನ್ನು ಯಾರ ಮೇಲೆ ಹೊರಿಸಲಾಗುತ್ತಿದೆಯೋ,ಅವರೇ ನನ್ನ ದಾಯಾದಿಗಳ ಎತ್ತುಬೀಜವನ್ನು ಆ ವರ್ಷದ ಮಟ್ಟಿಗೆ ಉಳಿಸಿಕೊಟ್ಟಿದ್ದರು ಎಂಬುದನ್ನು ಹೇಳಲು ನನಗೆ ಯಾವ ಮುಜುಗರವೂ ಇಲ್ಲ. ಆದರೆ ಕೋಣದ ಸಿಕ್ಕಿದ ತಕ್ಷಣ ಸಮಸ್ಯೆಯೆಲ್ಲವೂ ಪರಿಹಾರ ಕಂಡಿರಲಿಲ್ಲ. ನೀರಿಗೆ ಬಿದ್ದ ಕೋಣ ಸಿಕ್ಕಿದ್ದರೂ, ಸೋತು ಹೋದ ಕೋಣನ ಹೆಗಲ ಮೇಲೆ ನೊಗ ಇಡುವ ಧೈರ್ಯ ಬರಬೇಕಾದರೆ ಮತ್ತೆ 10-12 ದಿನಗಳೇ ಸಂದು ಹೋದವು. ಬೆಳೆದು ನಿಂತ ಅಗೆಬೆದೆಗಳು ಗಂಟುಬೀಳ ತೊಡಗಿದವು. ಕೊನೆಗೂ ನಟ್ಟಿಯೆಂಬ ಶಾಸ್ತ್ರವನ್ನು ಮುಗಿಸುವಾಗ ಎರಡು ವಾರಗಳು ತಡವಾಗಿ ಆ ವರ್ಷದ ಅವರ ಸಾಗುವಳಿಯ ಫಸಲಿನ ಮೇಲೇನೇ ಹೊಡೆತಬಿತ್ತು. ಆದರೆ ಆ ಸಜ್ಜನಿಕೆಯ ಯುವಕರಿಂದಾಗಿ ಕೋಣದ ಮೇಲಿನ 'ಗಂಟು' ವಾರಾಹಿ ಪಾಲಾಗುವುದು ತಪ್ಪಿತು. ಆರ್ಥ್ರಾಡಿ ಹೊಟ್ಟುಸುಟ್ಟು ಮಾಡಿದ ಸಾಗುವಳಿಯ ವಾರ್ಷಿಕ ದೀಕ್ಷೆ ಈಡೇರಿತ್ತು.

ಹುಲ್ಲು ತಿನ್ನುವ ಸಂಗತಿಯೊಂದಿಗೆ ತಗಲು ಹಾಕಿಕೊಂಡ ಹಸು ಹುಲ್ಲನ್ನು ಮಾತ್ರ ತಿನ್ನುತ್ತದೆಯೆ ಎಂದು ಕೇಳಿದರೆ ಉತ್ತರ ಏನೆನ್ನಬೇಕು? ಪವಿತ್ರವಾದ ಗೋವು ಪವಿತ್ರವೂ, ಶುದ್ಧವೂ ಆದ ಹುಲ್ಲನ್ನು ಮಾತ್ರ ತಿನ್ನುತ್ತದೆ ಎಂದು ಹೇಳುವವರಿದ್ದರೆ ಒಂದೋ ಅವರ ಉದ್ದೇಶವನ್ನು ಅನುಮಾನಿಸಬೇಕು ಇಲ್ಲವೇ ಅವರ ಲೋಕಾನುಭವಕ್ಕೆ ಕನಿಕರಪಡಬೇಕು. ಯಾಕೆಂದರೆ ಹಸುವನ್ನು ಶುದ್ಧ ಸಸ್ಯಾಹಾರಿ ಎಂದು ವರ್ಗೀಕರಿಸುವುದೂ ಪೂರ್ಣ ಪ್ರಮಾಣದಲ್ಲಿ ಸರಿಯೆನಿಸಲಾರದು. ಯಾವೊಂದು ಪ್ರಾಣಿ ಸಮುದಾಯವೂ ಮುಖ್ಯಾಹಾರದಲ್ಲಿ ಸಮಾನತೆ ತೋರಬಹುದಲ್ಲದೆ, ಇಡಿಯ ಆ ಜೀವಸಮುದಾಯವೇ ಆಹಾರದಲ್ಲಿ ಏಕರೂಪಿಯಾಗಿ ವರ್ತಿಸುತ್ತದೆ ಎಂಬ ತರ್ಕ ತಳಬುಡವಿಲ್ಲದ ತರ್ಕವೇ ಸರಿ. ಎಲ್ಲವೂ ಹುಲ್ಲು ತಿನ್ನುತ್ತವೆ ಎಂಬಲ್ಲಿ ಅನುಮಾನವಿಲ್ಲ. ಆದರೆ ತರಾವರಿ ಆಹಾರಾಸಕ್ತಿಯಿರುವ ಹಸುಗಳು ಒಂದು ತಿನ್ನುವುದನ್ನೇ ಮತ್ತೊಂದು ತಿಂದೇ ತಿನ್ನುತ್ತದೆ ಎಂದು ಪ್ರಮೇಯ ಕಟ್ಟಲು ಸಾಧ್ಯವಿಲ್ಲ. ನಾಡಾಡಿ ಹೋರೆಮ್ಮೆ, ಹಸು ಕರುವಿನ ಆಹಾರ ಲೋಕವು ಮನುಷ್ಯರ ಹೇಲಿನಿಂದ ತೊಡಗಿ, ಕರುಹಾಕುವ ವೇಳೆಯ ಮಾಸು (ಕಸ),ಅವುಗಳದ್ದೇ ಕರುಗಳ ವಿಸರ್ಜನೆಯಾದ ಕಂದಿ, ಒಣಗಿದ ಮೂಳೆ, ಮಣ್ಣು, ಬಟ್ಟೆ, ಕಂಬಳಿ, ಪ್ಲಾಸ್ಟಿಕ್‌ಡಬ್ಬ, ಹೊಗೆಸೊಪ್ಪು, ಕಾಸರಕನ(ಕಾಯೆರ್)ಬೀಜ,ಗೊಬ್ಬರಗಳ ತನಕವೂ ವಿಸ್ತರಿತವಾಗಿದೆ ಎಂದರೆ ಅನೇಕರು ಹುಬ್ಬೇರಿಸಬಹುದು, ಕೆಲವರಿಗೆ ಅಸಹ್ಯ ಅನಿಸಬಹುದು. ಇನ್ನು ಕೆಲವರು ಸುತರಾಂ ಒಪ್ಪದೆಯೂ ಇರಬಹುದು. ಯಾಕೆಂದರೆ ಶುದ್ಧವಾದ (?) ಹಾಲುಕೊಡುವ ಹಸು, ಪವಿತ್ರವಾದ ಭಾವನೆಯ ಹೂರಣವಾಗಿರುವ ಹಸು ಚಿ ಕೊಳಕನ್ನೆಲ್ಲಾ ತಿನ್ನುತ್ತದೆ ಎಂಬುದು ಕಣ್ಣೆದುರು ಕಾಣಬಾರದ ಸತ್ಯ. ಆದರೂ ಅವು ಅದನ್ನು ಹಿಂದಿನಿಂದ ತಿನ್ನುತ್ತಿದ್ದವು ಮತ್ತು ಈಗಲೂ ತಿನ್ನುತ್ತಿವೆ.ಪದವಿ ಮುಗಿಸುವತನಕ ಮತ್ತು ಆ ಮೇಲೂ ಕೂಡ ಇಂತಹ ಹಸುಗಳನ್ನು ಹಟ್ಟಿಯಲ್ಲಿ ಕಟ್ಟುವವೇಳೆ ಅವುಗಳ ಮೂತಿ ತಗುಲಿದಾಗ ಮೈಯೆಲ್ಲಾ ಹೇಸಿಕೊಂಡು ಸ್ನಾನದ ಮೇಲೆ ಮತ್ತೆ ಸ್ನಾನಮಾಡಿದ ಅನುಭವ ನನಗಿದೆ.

ಮನುಷ್ಯರ ಸೆಗಣಿ ಹೋರೆಮ್ಮೆ, ಹಸು, ಎತ್ತುಗಳೆಲ್ಲವುದರ ಬಹಳ ಪ್ರಿಯವಾದ ಆಹಾರಗಳಲ್ಲೊಂದು.

ಮನುಷ್ಯರ ಸೆಗಣಿ ಹೋರೆಮ್ಮೆ, ಹಸು, ಎತ್ತುಗಳೆಲ್ಲವುದರ ಬಹಳ

ಪ್ರಿಯವಾದ ಆಹಾರಗಳಲ್ಲೊಂದು. ಆದರೆ ಎಲ್ಲವೂ ಶತಸಿದ್ಧವಾಗಿ ಇದನ್ನು ತಿಂದೇ ತೀರುತ್ತವೆ ಎನ್ನುವುದು ಅಪಚಾರವಷ್ಟೇ ಅಲ್ಲ ಸುಳ್ಳು ಕೂಡಾ ಆಗುತ್ತದೆ. ನಮ್ಮ ಹಟ್ಟಿಯಲ್ಲಿ ನಾನು ಕಂಡಂತೆ ಶೇ 80% ರಷ್ಟು ಜಾನುವಾರುಗಳು ಹೇಲುಬಾಕಗಳು. ಕೆಲವಂತೂ ಇದನ್ನು ತಿನ್ನುವುದಕ್ಕಾಗಿಯೇ ವಿಶೇಷ ತಂತ್ರ ಮಾಡುತ್ತಿದ್ದವು. ನಮ್ಮ ಮನೆಯಲ್ಲಿ ಕೆಂಪಿ ಅಂತ ಒಂದು ದನ ಬಹಳ ವರ್ಷಗಳವರೆಗೂ ಇತ್ತು. ಹತ್ತಿಂಚು ಉದ್ದದ ಮುಂದಕ್ಕೆ ಬಾಗಿದ ಎರಡು ಕೋಡುಗಳಿಂದ ಇದು ಕೆಲವೊಮ್ಮೆ ನಮಗೆ ಆತಂಕವನ್ನೂ ಉಂಟುಮಾಡುತ್ತಿತ್ತು. ಇದರ ಮೈಬಣ್ಣ ಅತ್ಯಂತ ಸೊಗಸು. ಜಾಜಿಕೆಂಪು ಬಣ್ಣದ ಈ ಹಸುವಿನ ಬೆಳ್ಳನೆಯ ಮುಸುಡಿಯ ಮೇಲೆ ಕಪ್ಪುಮಚ್ಚೆಗಳಿದ್ದವು. ಹೆಚ್ಚು ಹರಾಮಿಯೂ ಅಲ್ಲದ, ತೊಂಡು ಮೇಯುವ ಕೆಟ್ಟಸ್ವಭಾವದ್ದೂ ಅಲ್ಲದ ಈ ಹಸುವಿಗೆ ಇದೊಂದು ಕೆಟ್ಟಚಾಳಿಯಿತ್ತು. ಇದಕ್ಕೆಂದೇ ಮೇವಿಗೆ ಬಿಡುವುದಕ್ಕಾಗಿ ಕೊರಳುಬಳ್ಳಿ ತಪ್ಪಿಸಿ ಹಟ್ಟಿಯಿಂದ ಹೊರಗೆ ಎಬ್ಬುವಾಗಲೇ ಉಳಿದವುಗಳಿಗಿಂತ ಮುಂದೆ ಹೊರಟು, ತನ್ನ ಇಷ್ಟದ ಒಣಕುತಿಂಡಿ ಸಿಕ್ಕುವ ಪರಿಚಿತ ಜಾಗಕ್ಕೆ ನುಗ್ಗಿ ಬಿಡುತ್ತಿತ್ತು. ಸಾರ್ವತ್ರಿಕವಾಗಿ ಶೌಚಾಲಯರಹಿತ ಹಳ್ಳಿಯಾಗಿದ್ದ, ಆಂಶಿಕವಾಗಿ ಈಗಲೂ ಹಾಗೆಯೇ ಇರುವ ನಮ್ಮೂರಿನಲ್ಲಿ ಇದಕ್ಕೇನೂ ಬರಗಾಲವೂ ಇರಲಿಲ್ಲ. ಈ ಜಾಗಗಳಲ್ಲಿ ಕಾಲು ಹಾಕಲು ಸರ್ಕಸ್ ಮಾಡಿಕೊಂಡು ಹೋಗಬೇಕಾಗಿದ್ದ ನಮಗೆ ಆ ಪ್ರಕ್ರಿಯೆಯನ್ನು ತಡೆಯಲೂ ಸಾಧ್ಯವಾಗುತ್ತಿರಲಿಲ್ಲ. ಇದೇ ತೆರನಾದ ವರ್ತನೆಯನ್ನು ಹಟ್ಟಿಗೆ ಎಬ್ಬುವಾಗಲೂ ಪುನರಾವರ್ತಿಸುತ್ತಿದ್ದ ಚಂದದ ಮೈಬಣ್ಣದ ಈ ಹಸು ಗೋಧೂಳಿಯಲ್ಲಿ ಉಳಿದವುಗಳಂತೆ ಹಟ್ಟಿಗೆ ಬಾರದೇ ಗ್ವಾಯ್‌ಒಳಾಲ್(ಗೇರುತೋಟ)ಗೆ ನುಗ್ಗಿ ತನ್ನ ಕೆಲಸ ನಿರ್ವಹಿಸುತ್ತಿತ್ತು. ಕೆಂಪಿಯೂ ಸೇರಿದಂತೆ ಅನೇಕ ಜಾನುವಾರುಗಳು ಶೌಚಾಲಯವೇ ಇಲ್ಲದೇ ಎಲ್ಲೆಂದರಲ್ಲಿ ಅವತರಿಸುತ್ತಿದ್ದ ಈ ಮಲಿನದ ಕುರುಹೂ ಸಿಕ್ಕದಂತೆ ನೆಕ್ಕಿ ಬಿಡುತ್ತಿದ್ದವು.ಕಣ್ತಪ್ಪಿ ಉಳಿದುದನ್ನು ಒಣಕಲು ತಿಂಡಿ ತಿನ್ನುವಂತೆ ತಿನ್ನುತ್ತಿದ್ದವು. ಇದೇ ಸ್ಥಿತಿ ಬೇಸಿಗೆಯ ಕಾಲದಲ್ಲಿ ಹೊಳೆಗೆ ಮತ್ತು ಹೊಳೆಯಿಂದ ಹೋರೆಮ್ಮೆಗಳನ್ನು ಎಬ್ಬಿಕೊಂಡು ಬರುತ್ತಿದ್ದ ತೋಡಿನಲ್ಲಿಯೂ ಎದುರಾಗುತ್ತಿತ್ತು. ಲೋಕಕ್ಕೆ ತೋರದಂತೆ ಮರೆಯಿರುವ ಈ ಜಾಗ ಮಬ್ಬು ಹೊತ್ತಿನಲ್ಲಿ ಆಪ್ಯಾಯಮಾನವಾದ ಶೌಚಕ್ರಿಯೆಯ ತಾಣವಾಗುತ್ತಿದ್ದುದರಿಂದ ಜಾನುವಾರುಗಳನ್ನು ಈ ಜಾಗೆಯ ಮೂಲಕ ಎಬ್ಬಿಕೊಂಡು ಬರುವಾಗ ನಾವು ಯಾರೂ ಅವುಗಳ ಹಿಂದೆ ಬರುತ್ತಿರಲಿಲ್ಲ. ಹಾಗಾಗಿ ದೂರನಿಂತು ಹೈ, ಹೋ . . ಎಂದು ಬೊಬ್ಬಿಡುವ ನಮ್ಮ ಕೂಗಿಗೆ ಅವು ಕ್ಯಾರೆ ಅನ್ನದೆ ಅವುಗಳ ಪಾಡಿಗೆ ಓಣಿ ಸ್ವಚ್ಛಗೊಳಿಸುವ ಕೆಲಸದಲ್ಲಿ ತೊಡಗುತ್ತಿದ್ದವು. ಹಾಗಾಗಿ ಹಟ್ಟಿಯಲ್ಲಿ ಇವುಗಳನ್ನು ಕಟ್ಟುವವೇಳೆ ಮೈ ಕೈ ತಾಗದಂತೆ ಸರ್ಕಸ್ ಮಾಡುವ ಜತೆಗೂ ಉಸಿರನ್ನು ಬಿಗಿಹಿಡಿದುಕೊಂಡು ಬೈಯ್ದುಕೊಳ್ಳುತ್ತಾ ಅವುಗಳ ಕೊರಳಿಗೆ ದಾಂಬು (ಹಗ್ಗ) ಸಿಕ್ಕಿಸುತ್ತಿದ್ದೆವು.

ಇನ್ನು ಕೆಲವು ಜಾನುವಾರುಗಳ ಆಹಾರದ ಆಯ್ಕೆ ಮತ್ತು ಬಯಕೆಯೇ ವಿಚಿತ್ರ ತೆರನಾಗಿದೆ. ನಮ್ಮ ಮನೆಯಲ್ಲಿದ್ದ ಬುಡ್ಡಿ ಎಂಬ ಹೆಸರಿನ ಹಸು ಕಾಸರಕದಕಾಯಿ ಆಗುವ ವೇಳೆ ಅದರ ಹಣ್ಣು ಮತ್ತು ಬೀಜ ತಿನ್ನಲು ಹುಡುಕಾಡುತ್ತಿತ್ತು. ಇದರ ಪರಿಣಾಮವಾಗಿ ಹೀಗೆ ತಿಂದಾಗಲೆಲ್ಲಾ ಅದು ಕೊಡುತ್ತಿದ್ದ ಹಾಲು ಕಾಸರಕನ ಬೀಜದ ಕಹಿಯಂಶ ತೋರಿಸುತ್ತಿತ್ತು. ಅದು ಕಾಸಾನ್(ಕಾಯೆರ್) ಹಣ್ಣುಬೀಜ ತಿಂದುದನ್ನು ಕಾಣದೆಯೂ ಅದರ ಹಾಲಿನ ಮೂಲಕ ಅದು ನಿನ್ನೆ ಏನನ್ನು ತಿಂದಿತ್ತು ಎಂಬುದನ್ನು ಗುರುತಿಸುತ್ತಿದ್ದೆವು. ಹಾಗೆಯೇ ಶೇ. 90ಕ್ಕೂ ಮಿಕ್ಕಿದ ಹಸು-ಎಮ್ಮೆಗಳು ಕರುಹಾಕುವಾಗ ಬೀಳುವ ತಮ್ಮದೇ ದೇಹದ ಮಾಸು (ಕಸ) ತಿನ್ನಲು ಹಪಹಪಿಸುತ್ತವೆ. ಹೀಗೆ ತಿಂದರೆ ಹಾಲು ಖೋತಾ ಆಗುತ್ತದೆ ಎಂಬ ನಂಬುಗೆಯ ಮೇರೆಗೆ ಅವು ಅದನ್ನು ತಿನ್ನದಂತೆ ಕಾಯುತ್ತಾರೆ. ರಾತ್ರಿವೇಳೆ ಕರುಹಾಕಿದರೆ ತಿನ್ನದಿರಲಿ ಎಂದು ಎಚ್ಚರಿಕೆವಹಿಸಿ ಎರಡೆರಡು ಕಡೆಯಿಂದ ಹಗ್ಗ ಕಟ್ಟಿದರೂ ಕೆಲವು ಹಸುಗಳು ಏನಾದರೂ ಸರ್ಕಸ್ ಮಾಡಿ ತಿಂದುಬಿಡುತ್ತವೆ. ಅಷ್ಟೇ ಅಲ್ಲದೆ ಕರುಹಾಕಿದಾಗ ಕರುವಿನ ಮೈಮೇಲಿನ ಪೊರೆಯನ್ನು ಕೆಲವು ಹಸುಗಳು ನೇರವಾಗಿಯೇ ನೆಕ್ಕಿ ಸಾಫು ಮಾಡುತ್ತವೆ. ಇನ್ನು ಕೆಲವು ಹಸುಗಳಿಗೆ ಹಾಗೆ ನೆಕ್ಕಲಿ ಎಂದು ಕರುವಿನ ಮೈಮೇಲೆ ಭತ್ತದ ತೌಡುಹಾಕಬೇಕಾಗುತ್ತದೆ. ತಮ್ಮದೇ ಕರುಗಳ ಕಂದಿಯನ್ನು ಸಹಜವಾಗಿಯೇ ತಾಯಿಹಸು ಮತ್ತು ಎಮ್ಮೆಗಳು ತಿನ್ನುತ್ತವೆ. ಕರುಹಾಕಿದ ವೇಳೆಯಲ್ಲಿ ಕರುಗಳ ಕಾಲಿನ ಎಳೆಗೊರಸುಗಳ ಮೇಲ್ಪದರವನ್ನು ಉಗುರಿನಿಂದಲೋ, ಹಲ್ಲುಕತ್ತಿಯಿಂದಲೋ ಚಿವುಟಿತೆಗೆದು ಅದನ್ನು ತಾಯಿಹಸು/ಎಮ್ಮೆಗೇ ಕೊಡುತ್ತಾರೆ. ಹಾಗೆಯೇ ಕರುಗಳು ಮಣ್ಣು ತಿನ್ನುವುದು ಸಾಮಾನ್ಯ. ಕೆಲವೊಮ್ಮೆ ಈ ಚಾಳಿ ದೊಡ್ಡವಾದ ಮೇಲೂ ಮುಂದುವರೆಯಬಹುದು.

ಈ ಮೇಲಣ ವಿಲಕ್ಷಣ ಆದರೆ ಸಹಜ ಆಹಾರಾಸಕ್ತಿಗಳಲ್ಲದೆ ಇನ್ನು ಕೆಲವೊಂದು ಕಡೆ ಉಳುವ ಜಾನುವಾರುಗಳಿಗೆ ಚೆನ್ನಾಗಿ ಮೈಬರಲಿ ಎಂಬ ಉದ್ದೇಶದಿಂದ ಅವುಗಳು ಬಾಯರು ಕುಡಿಯುವ ಬಾಣೆಗೆ ರಾತ್ರಿ ಉಚ್ಚೆ ಹೊಯ್ದು ಅವು ಕುಡಿಯುವಂತೆ ಮಾಡುವುದುಂಟು. ಈ ರೂಢಿ ಅಧಿಕವಾಗಿ ಕಾಣುವುದು ಕೋಣಗಳಿಗೆ ಸಂಬಂಧಿಸಿದಂತೆ. ಉಳುವ ವೇಳೆ ಉಳುವಾತನೇ ಉಳುಮೆ ನಿಲ್ಲಿಸಿ ಅವುಗಳ ಬಾಯಿಗೆ ಉಚ್ಚೆ ಹೊಯ್ಯುವ ರೂಢಿಯನ್ನು ನಾನೂ ಸಾಮಾನ್ಯವಾಗಿ ಕಂಡಿದ್ದೇನೆ. ಹೀಗೆ ಮೂತ್ರ ಕುಡಿದ ಜಾನುವಾರುಗಳು ಆ ರೂಢಿಯಿಲ್ಲದವರ ಮನೆಗೆ ಹೋದಾಗ ಮೈತೆಗೆಯುತ್ತವೆಯೆಂದೂ ಹೇಳಲಾಗುತ್ತದೆ. ಆ ಕಾರಣಕ್ಕಾಗಿ ಈ ಮೂತ್ರ ಕುಡಿಸುವ ರೂಢಿಯನ್ನು ಯಾರೂ ಮುಕ್ತವಾಗಿ ಹೇಳಿಕೊಳ್ಳೋದಿಲ್ಲವಂತೆ. ಉಳುವ ಜಾನುವಾರುಗಳ ಖರೀದಿಯಲ್ಲಿ ಅವುಗಳ ಮೈಗೆ (ದಪ್ಪಕ್ಕೆ) ಪ್ರಾಶಸ್ತ್ಯ ನೀಡುವುದರಿಂದ ಇದೊಂದು ಗೌಪ್ಯತಂತ್ರ. ಆಹಾರಕ್ಕೆ ಸಂಬಂಧಿಸಿದಂತೆ ಈ ವಾಸ್ತವದ ಅರಿವಿನ ನಡುವೆಯೂ ಮೀನು ತಿಂದು ತೊಳೆದ ಪಾತ್ರೆಯ ನೀರನ್ನಾಗಲೀ, ಮೀನು ಕುದಿಸಿದ ಪಾತ್ರೆಯ ನೀರನ್ನಾಗಲೀ ಜಾನುವಾರುಗಳ ಬಾಯರಿಗೆ ಸೇರಿಸುವುದಿಲ್ಲ. ಅವು ಮೂಳೆಯನ್ನು ಕಡಿಯುವುದು, ಮಾಸು ತಿನ್ನುವುದರ ಅರಿವಿದ್ದೂ, ತಾವು ತಿನ್ನುವ ಮಾಂಸದ ಸಾರಿನ ಉಳಿಕೆಯನ್ನು ಅವುಗಳು ತಿನ್ನುವ ಆಹಾರದೊಂದಿಗೆ ಸೇರಿಸುವುದಿಲ್ಲ. ಆದರೆ ತರಕಾರಿ ಸಾರು, ಅಕ್ಕಿ, ಅನ್ನದ ನೀರನ್ನು ಧಾರಾಳವಾಗಿ ಸೇರಿಸಿ ನೀಡುತ್ತಾರೆ. ತಾವು ತಿನ್ನಲು ಕೊಡದೆಯೂ ಕೊಳಕನ್ನು ತಿನ್ನುವ ಹಸುಗಳ ಬಾಯಿಯನ್ನು ಶಾಸ್ತ್ರಗ್ರಂಥಗಳೇ ಅಪವಿತ್ರ ಎಂಬ ಅರ್ಥದಲ್ಲಿ ಹೇಳಿದ ಉಲ್ಲೇಖಗಳು ಸ್ಮೃತಿ, ಪುರಾಣದ ಓದುಗರಿಗೆ ಬರವಣಿಗೆಯ ಮೂಲಕ ಪರಿಚಿತವಾದದು.9ಆದರೆ ಜನಸಾಮಾನ್ಯರಿಗೆ ಜೀವನಾನುಭವದ ಮೂಲಕವೇ ಆ ಹೇಳಿಕೆಗಳ ನಿಖರವಾದ ಕಾರಣಗಳು ದಕ್ಕಿವೆ.ಈ ತರಾವರಿ ಆಹಾರಾಸಕ್ತಿಯನ್ನು ಕಣ್ಣಾರೆ ಕಂಡೂ ಅವರಿಗೆ ಹಸುಗಳನ್ನು ಹೇಸದೆಯೇ ಪ್ರೀತಿಸುವುದು ಹೇಗೆಂದು ಗೊತ್ತಿದೆ.ಹಾಗೆ ಯಾಕೆ ಪ್ರೀತಿಸುತ್ತೇವೆ ಎಂಬುದೂ ಗೊತ್ತಿದೆ. ಅದು ಹಾಕುವ ಸೆಗಣಿ,ಎಳೆಯುವ ನೇಗಿಲು,ಕೊಡುವ ಹಾಲು ಎಲ್ಲವೂ ಅವರ ಅನ್ನವೇ ಅಲ್ಲವೇ?

ತಾವು ಬಳಸುವ ವಸ್ತುವನ್ನು ಯಾವಾಗ ಪೂಜಿಸಬೇಕು,ಹೇಗೆ ಬಳಸಬೇಕು ಎಂಬ ವ್ಯಾವಹಾರಿಕ ಸಂವಿಧಾನ ಹೊಂದಿರುವ ಕೃಷಿಕರಿಗೆ ತಾವು ಸಾಕುತ್ತಿರುವ ಗೋವೊಂದನ್ನು ಲಾಭದಾಯಕವಾಗಿ ಎಷ್ಟು ಕಾಲ ಇರಿಸಿಕೊಳ್ಳಬಹುದೆಂಬುದರ ಲೆಕ್ಕಾಚಾರವಿರುತ್ತದೆ. ಅದೇ ರೀತಿ ಅವುಗಳನ್ನು ಮಾರಲೇಬೇಕಾದ ಲೌಖಿಕ ಒತ್ತಡದ ನಡುವೆ ಯಾವ ವಯೋಮಾನದ,

ಯಾವ ಗುಣಮಟ್ಟದ ಹಸುವನ್ನು ಯಾರು ಖರೀದಿಸಬಲ್ಲರು ಎಂಬ ಅರಿವೂ ಇರುತ್ತದೆ. ತಾನು ಮಾರುವುದು ಯಾಕೆ ಎಂಬುದು ಅರ್ಥವಾಗುವವನಿಗೆ ಇನ್ನೊಬ್ಬ ಕೊಂಡುಕೊಳ್ಳುತ್ತಾನೆಂದರೆ ತನಗೆ ಅನುಪಯುಕ್ತವಾದುದು ಆತನಿಗೆ ಉಪಯುಕ್ತವಾಗುವ ದಾರಿಯು ಎಂತಹುದು ಎಂಬುದೂ ಗೊತ್ತಿರುತ್ತದೆ. ಆದರೆ ಕೃಷಿಕರ ಜಗತ್ತಿನಲ್ಲಿ ಉಳಿದ ಕುರಿ, ಕೋಳಿಗಳ ಸಾಕಣೆಯ ಜತೆಗಿರದ ವಿಲಕ್ಷಣ ಸಂಬಂಧವೊಂದು ಈ ಜಾನುವಾರುಗಳ ಜತೆಗಿರುತ್ತದೆ. ಸಾಕುತ್ತಲೇ ಮೈಸವರುತ್ತಲೇ ಕುರಿ, ಕೋಳಿಗಳನ್ನು ಕಣ್ಣೆದುರಿಗೆ, ಕೊಂದು ತಿನ್ನುವುದು ಅವರಿಗೆ ಜೀವ-ಕರುಣೆ ಇಂತಹ ಯಾವ ಸಂಗತಿಯನ್ನು ಉದ್ದೀಪಿಸಬೇಕಾಗಿಲ್ಲ. ಆದರೆ ಹಸು-ಎಮ್ಮೆಗಳ ಜೊತೆಗಿನ ಸಂಬಂಧದ ಸ್ವರೂಪವನ್ನು ಹೀಗೆ ಸರಳವಾಗಿ ಅವರು ತೂಗಿಕೊಳ್ಳಲಾರರು. ಈ ಜಾನುವಾರುಲೋಕದ ಜೊತೆಗೆ ಅವರೊಳಗೆ ರೂಢಿಪ್ರಜ್ಞೆಯ ಮೂಲಕ ಭಾವನೆಯ ಆಳಕ್ಕೆ ಬೇರು ಬಿಟ್ಟ ಸಂಬಂಧದ ತಂತು ಒಂದಿರುತ್ತದೆ. ಅದರ ಪ್ರಭಾವದಿಂದಾಗಿ ತಾವು ಸಾಕಿ, ತಾವೇ ತಿನ್ನದ ಗೋವಿಗೆ ಸಂಬಂಧಿಸಿದಂತೆ ಸಾಗಹಾಕುವ ವೇಳೆ ಒಂದು ಸಣ್ಣ ಪಾಪಪ್ರಜ್ಞೆಯೂ ಕಾಡುವಂತಹ ಸಾಂಸ್ಕೃತಿಕ ವಾತಾವರಣದಲ್ಲಿ ಅವರಿರುತ್ತಾರೆ ಎಂಬುದೂ ದಿಟ. ಜಾನುವಾರನ್ನು ಯಾರಿಗೇ ಮಾರುವುದಿರಲಿ, ತನ್ನ ಹಟ್ಟಿಯಿಂದ ಹೊರಹೊಡಿಸುವಾಗ ಹಣಕ್ಕಾಗಿ ತನ್ನ ಮಕ್ಕಳಂತಿರುವ ಬಂಧುತ್ವವೊಂದನ್ನು ಕಳೆದುಕೊಳ್ಳುವ ಸಂಕಟ ಅನುಭವಿಸದ ಕೃಷಿಕ ಪ್ರಾಯಶಃ ಇರಲಾರ. ತಾವೇ ಹೆರಿಗೆ ಮಾಡಿ, ತಾವೇ ಕೈತುತ್ತು ಹಾಕಿ, ತಾವೇ ಮೈತೊಳೆದು ಮಕ್ಕಳಂತೆ(?) ಸಾಕಿದವುಗಳೆನ್ನುವ ಭಾವನಾತ್ಮಕ ಸಂಬಂಧಗಳ ಕಾರಣದ ಸಂಕಟ ಅದು. ಪರಂಪರೆಯಿಂದ ಬಂದ ಕಥನಗಳು ಮತ್ತು ತಾನೇ ಸಾಕಿದ್ದರ ಜೊತೆಗಿನ ಒಡನಾಟದ ಮೂಲಕ ಕಟ್ಟಿಕೊಂಡ ನಿಶ್ಚಿತ ಸಂಬಂಧಗಳನ್ನೆಲ್ಲಾ ನಿರಾಕರಿಸಿ 'ಮಾರಿ ಕೈತೊಳೆದುಕೊಳ್ಳುವ" ಸಣ್ಣತನ ತನ್ನದೆನ್ನುವುದರಿಂದ ಹುಟ್ಟುವ ಪಾಪಪ್ರಜ್ಞೆಯದು. ಭೌತಿಕ ವ್ಯಾವಹಾರಿಕ ಸತ್ಯದ ನಡುವೆ ನುಸುಳಿಕೊಳ್ಳುವ ಈ ವಿಲಕ್ಷಣ ಸಂಬಂಧದ ಪರಿಣಾಮವಾಗಿ ಜಾನುವಾರುಗಳ ವಿಕ್ರಯವು ಸಾಕಿದಾತನಲ್ಲಿ ಒಂದು ಬಗೆಯ ಕೊಲೆಗಡುಕತನದ ಪಾಪಪ್ರಜ್ಞೆಯ ಭಾವವನ್ನೂ ಉದ್ದೀಪಿಸುವ ಸಾದ್ಯತೆಯನ್ನು ಅಲ್ಲಗಳೆಯಲಾಗದು. ಈ ಪಾಪಾತ್ಮಸ್ಥಿತಿಯನ್ನು ಬಹುವಾಗಿ ಅನುಭವಿಸುವವನು ಕೃಷಿಕನಾಗಿರುವ ಜೊತೆಗೆ ಮಧ್ಯಮ ಇಲ್ಲವೇ ಕೆಳಮಧ್ಯಮವರ್ಗಕ್ಕೆ ಸೇರಿದವನೂ ಆಗಿರುತ್ತಾನೆ. ಅಷ್ಟೇ ಅಲ್ಲದೆ ಆತ ಈ ದೇಶದ ಸಾಮಾನ್ಯ ಮಧ್ಯಮವರ್ಗವನ್ನು ಆಕ್ರಮಿಸಿಕೊಂಡಿರುವ ಕರ್ಮಸಿದ್ಧಾಂತದ ಹಿಡಿತ,ಪ್ರಭಾವಗಳಿಗೆ ಪಕ್ಕಾದವನೂ ಆತನಾಗಿರುತ್ತಾನೆ. ವರ್ತಮಾನದ ದುಸ್ಥಿತಿಯನ್ನು ತನ್ನ ಪೂರ್ವದ ಕರ್ಮಫಲವೆಂದು ನಂಬುತ್ತಾ, ತದನಂತರದ ಬದುಕಿನ ಪಾಪಗಳ ಕುರಿತು ಸದಾ ಆತಂಕದಲ್ಲಿಯೇ ಇರುವ ಮಧ್ಯಮವರ್ಗದ ಎಲ್ಲಾ ಗುಣದೋಷಗಳೂ ಈತನಲ್ಲಿರುತ್ತವೆ.ಆಯ್ಕೆಯುಲ್ಲದ ಕೃಷಿಬದುಕಿನ ಹುಟ್ಟು ಮತ್ತು ವರ್ತಮಾನದಲ್ಲಿ ಅನುಭವಿಸುತ್ತಿರುವ ಭೌತಿಕ ದುರವಸ್ಥೆಯನ್ನು ಪುರಾಕೃತಕರ್ಮದ ಬಳುವಳಿಯಾಗಿಯೂ, ಆ ಕರ್ಮ ನಿಮಿತ್ತವಾದ ಈ ಬಾಳಿನ ಹೊಣೆಗಾರ ತಾನೇ ಎನ್ನುವಂತೆಯೂ ಆತ್ಮನಿಂದೆಯಲ್ಲಿ ನಿಂತುಬಿಡುವ,ಆತ್ಮದ ಆಚೆಗೆ ಪಾಪದ ಹೊಣೆಯನ್ನು ಗುರುತಿಸಲಾರದ ವರ್ಗಕ್ಕೆ ಸೇರಿದವನೀತ. ವರ್ತಮಾನದ ಸ್ಥಿತಿಗಾಗಿ ಹೀಗೆ ಗತದ ಹೊಣೆಹೊತ್ತುಕೊಳ್ಳಬೇಕಾದ ಅನಿವಾರ್ಯತೆಯಿಂದ ಪಾರಾಗಲಾರದ ಸಂಕಟದ ನಡುವೆಯೂ, ಸಾಕಿದ ಜೀವವನ್ನು ಕನಿಕರವಿಲ್ಲದೆ ಮಾರಬೇಕಾದ ವರ್ತಮಾನದ ಸ್ಥಿತಿಯಿಂದಾಗಿ ಮುಂದಿನ ಬಾಳಿನ ಪಾಪದ ಬುತ್ತಿಯನ್ನು ಬಲಿದುಕೊಳ್ಳುತ್ತಿದ್ದೇನೆ ಎಂಬತೊಳಲಾಟಕ್ಕೆ ಗುರಿಯಾಗುವವನಿವನು. ಹೀಗೆ ವ್ಯಕ್ತಿಗತ ನೆಲೆಯಲ್ಲಿ ಪಾಪದ ಹೊಣೆಹೊತ್ತು ಕೊರಗಿನಲ್ಲಿರುವವನೀತ. ಅಷ್ಟೇ ಅಲ್ಲದೆ ಈ ಕೊರಗಿನಿಂದ ಪಾರಾಗುವ ನಿರೀಕ್ಷೆ ಹೊಂದಿದವನೂ ಆಗಿ, ಪಾಪಚಕ್ರದಿಂದ ಪಾರುಗಾಣುವ ದಾರಿಕಾಣದೆ ಹತಾಶೆಯ ಮನಸ್ಥಿತಿಯಲ್ಲಿರುವವನೂ ಹೌದು.

ಕರ್ಮಚಕ್ರದ ಈ ಬದಲಾಗದ ನಿರಂತರತೆಗೆ ಸಿಕ್ಕಿ ಘಾಸಿಗೊಳಗಾಗುವ ಸಮುದಾಯದೊಳಗಿನ ಪಾಪಪ್ರಜ್ಞೆಯ ತೊಳಲಾಟ ಮತ್ತು ಅದರಿಂದ ಪಾರಾಗುವ ದಾರಿಕಾಣದೆ ಉಂಟಾಗುವ ಹತಾಶೆಗಳು ಸಮುದಾಯವನ್ನು ದಿಕ್ಕುತಪ್ಪಿಸುವ ಬಾಹ್ಯಶಕ್ತಿಯೊಂದರ 'ಉದ್ದೇಶಿತ ಕಾರ್ಯಯೋಜನೆ'ಗೆ ಹಾಳತವಾಗಿ ಒದಗಿ ಬರುತ್ತವೆ. ಪಾಪಪ್ರಜ್ಞೆಯ ಹೊಣೆಗಾರಿಕೆಯಲ್ಲಿ ಸಣ್ಣಗೆ ನರಳುವ ಸಾಮಾನ್ಯರು ಕೊಡಮಾಡಿದ ಈ ಸಣ್ಣ ಜಾಗವನ್ನೇ ತನ್ನ ಶಕ್ತಿ ರಾಜಕಾರಣದ ಅಂಗಣವನ್ನಾಗಿ ಸ್ಥಾಪಿತ ಯಜಮಾನ್ಯವು ಬಳಸಿಕೊಳ್ಳುತ್ತದೆ. ರೈತನ ದುಸ್ಥಿತಿಗೆ ಇಡಿಯ ಸಾಮಾಜಿಕ ವ್ಯವಸ್ಥೆಯಲ್ಲಿನ ಆರ್ಥಿಕ ಅಸಮತೋಲನದ ಜೊತೆಗಿನ ಇತರ ಕಾರಣಗಳನ್ನು ಶೋಧಿಸಿ ತೋರುವ ವಾಸ್ತವಿಕ ಮಾರ್ಗಕ್ಕೆ ಬದಲಾಗಿ ಅದು ಬೇರೊಂದು ದಾರಿಯನ್ನು ಹಿಡಿಯುತ್ತದೆ. ರೈತನ ಅಸಹಾಯಕತೆಯ ಕ್ಷಣವು ಅವನ ಪಾಪೋತ್ಪಾದನೆಯ ಕ್ಷಣವಾಗಿ ಮಾರ್ಪಡುವ ಮೂಲ ಕಾರಣ ಆರ್ಥಿಕ ಆಮಿಷವೆಂದೂ, ಹಸುವನ್ನು ಸಾಕಿ ಹಸುವಿನಂತಾದ ಮುಗ್ಧನನ್ನು ವಂಚನೆಯ ಬಲೆಯಲ್ಲಿ ಕೆಡವಿಹಾಕಲಾಗಿದೆಯಂತಲೂ ಅದು ವಾದಿಸುತ್ತದೆ. ತನಗೆ ನಿಜವಾಗಿಯೂ ಇಲ್ಲದ ನೆಲೆಯನ್ನು ಇರುವಂತೆ ನೋಡಿಕೊಳ್ಳುವ ಸಲುವಾಗಿಯೇ ಹೀಗೆ ಖರೀದಿದಾರರನ್ನು ಅದು ಅಪರಾಧೀಕರಣಕ್ಕಿಳಿಸಿ ರಾಕ್ಷಸೀಕರಣ ಮಾಡುತ್ತದೆ. ಪಾಪಾತ್ಮನಲ್ಲದವನಲ್ಲಿ ಪಾಪಾತ್ಮದ ಕುರಿತಾದ ಪಶ್ಚಾತ್ತಾಪ ಹುಟ್ಟಿಸುವ ಈ ಆರ್ಥಿಕ ಆಮಿಷದ ನಿವಾರಣೆಗೆ ತಾನು ಪೂರ್ಣ ನಾಯಕತ್ವವನ್ನು ವಹಿಸುವುದಾಗಿ ಹೇಳುತ್ತದೆ. ಹೀಗೆ ಸಾಮಾನ್ಯರ ದೈನಿಕದ ಬದುಕಿನ ಸಂದರ್ಭದಲ್ಲಿ ಸಿಗುವ ಇಂತಹ ಚಿಕ್ಕ ಚಿಕ್ಕ ಅವಕಾಶಗಳನ್ನೇ ತಮ್ಮ ಬೆಚ್ಚನೆಯ ಗೂಡನ್ನಾಗಿ ಸ್ಥಾಪಿತ ಯಜಮಾನಿಕೆ ಮಾರ್ಪಡಿಸಿಕೊಳ್ಳುತ್ತದೆ. ಇಂತಹ ಸೂಕ್ಷ್ಮವಾದ ನೆಯ್ಗೆಯಲ್ಲಿರುವ ಮೂಕಪ್ರಾಣಿಯ ಕುರಿತಾದ ಕರುಣೆಯ ಪುಟ್ಟನೆಲೆಯಲ್ಲಿಯೇ ತನ್ನ ಯಶಸ್ಸಿನ ಬೀಜವನ್ನು ನೆಟ್ಟು ಹೆಮ್ಮರವಾಗಿಸಿದ ಸ್ಥಾಪಿತ ಯಜಮಾನಿಕೆ 'ಕೊಲೆಯ ಕಾರಣನಾದ' ಎಂಬ ಕೃಷಿಕನ ಸ್ವ ಕರ್ಮದ ಹೊಣೆಗಾರಿಕೆಯನ್ನು ಅನ್ಯ ಮೂಲದಲ್ಲಿ ತೋರಿಸಿ, ರೈತನಿಗೆ ಪಾಪ ಮುಕ್ತಿಯ ನಿರುಮ್ಮಳತೆಯನ್ನು ನೀಡುತ್ತದೆ. ರೈತಾಪಿ ವರ್ಗ ಹಸುವನ್ನು ಯಂತ್ರವಾಗಿ ಬಳಸಿಯೂ, ಭಾವನಾತ್ಮಕ ಸಂಬಂಧವನ್ನು ಹೊಂದಿರುವ ಹಿನ್ನೆಲೆಯಲ್ಲಿ ಅದು ಮಾಡಬೇಕಾದ ಕೆಲಸವನ್ನು ಅದರ ಪರವಾಗಿಯೇ ತಾನು ಮಾಡುತ್ತಿರುವಂತೆ ನಂಬಿಸುತ್ತದೆ. ಹಸುವನ್ನು ವಿಕ್ರಯಿಸುವವನು ಸಾಕುವವನ ಬಡತನವನ್ನು ಬಳಸಿಕೊಂಡು ಅವನ ಭಾವನೆಗಳನ್ನು ಅತಿ ವ್ಯವಸ್ಥಿತವಾಗಿ ಧಮನಿಸುತ್ತಿದ್ದಾನೆ ಎಂಬ ವಿಚಾರವನ್ನು ವೈಚಾರಿಕ ಆಕೃತಿಯಾಗಿ ಗಟ್ಟಿಗೊಳಿಸುತ್ತಾ ಹೋಗುತ್ತದೆ. ಹೀಗೆ ಅಶಿಕ್ಷಿತ ಮತ್ತು ಅರೆಶಿಕ್ಷಿತ ಸಮುದಾಯಕ್ಕೆ ತಮ್ಮ ಪಾಪದ ಹೊಣೆಗಾರಿಕೆಯಿಂದ ಪರಿಹಾರ ನೀಡಿದ ಭ್ರಮೆಯನ್ನು ಉಂಟುಮಾಡುವ ಮುಲಕ ಈ ಸಾಂಸ್ಥಿಕಶಕ್ತಿಕೇಂದ್ರ ಮತ್ತಷ್ಟು ಸಾಮೀಪ್ಯವನ್ನು ಸಾಧಿಸುತ್ತದೆ.

ಈ ತಂತ್ರಯೋಜನೆ ಹಸುವಿನ ಉಳಿದೆಲ್ಲಾ ಆಯಾಮದ ಚರ್ಚೆಯನ್ನು ನಿವಾರಿಸಿ ಅದನ್ನು ಆಹಾರವಾಗಿ ಬಳಸುವ ಸಮಸ್ಯೆಯನ್ನು ಮಾತ್ರ ಮುನ್ನೆಲೆಗೆ ತರುತ್ತದೆ. ಇದು ವಾಸ್ತವಿಕವಾಗಿ ಜೀವ ಆತ್ಮ-ಹತ್ಯೆ-ವಧೆ-ಪಾಪಗಳೆಂಬ ಪರಿಭಾಷೆಗಳ ಚಕ್ರದಲ್ಲಿ ನಿರ್ದಿಷ್ಟವಾದ ಆಹಾರಕ್ರಮವೊಂದನ್ನು ಆಹಾರದ ಬದಲಾಗಿ ಆಕ್ರಮಣವೆಂಬ ಸಂಕಥನದಲ್ಲಿ ಬಂಧಿಸುವ ರಾಜಕಾರಣ. ಹಸಿವು ಆಹಾರಗಳ ಈ ರಾಜಕಾರಣದ ಪರಿಭಾಷೆಯು ಇಲ್ಲಿಗೆ ನಿಲ್ಲಲಾರದು. ಇದು ಮುಂದುವರೆದು ಸೂಕ್ಷ್ಮವಾಗಿ ಸಸ್ಯೇತರ ಮೂಲವನ್ನು ಆಹಾರ ಮಾದರಿಯ ಆಕರವಾಗಿ

ಬಳಸುವ ಒಂದು ವಿಶಾಲ ಸಮುದಾಯವನ್ನೇ ರಾಕ್ಷಸೀಕರಣದ ಆವರಣದಲ್ಲಿ ಕಟ್ಟುವ ಕೆಲಸವನ್ನು ಚುರುಕುಗೊಳಿಸುತ್ತದೆ. ಇದರ ತಾಜಾ ಉದಾಹರಣೆಯಾಗಿಯೇ ಆಹಾರ ಸಂಸ್ಕೃತಿಯ ಬಹಿಷ್ಕೃತ ಮಾದರಿಯೆಂದು ವಾದಿಸಿ ಸರ್ಕಾರಿ ಶಾಲೆಯಲ್ಲಿ ಓದುವ ಬಡಮಕ್ಕಳ ಅನ್ನದ ತಟ್ಟೆಗೆ ಬೀಳಬಹುದಾಗಿದ್ದ ಮೊಟ್ಟೆಯಂತಹ ಪೌಷ್ಟಿಕ ಆಹಾರವನ್ನು ಅಪಹರಿಸಿದ್ದ ಬಗೆಯನ್ನು ನೆನೆದುಕೊಳ್ಳಬಹುದು. ಹೀಗೆ ಈ ಸಂಕಥನದ ವಿಸ್ತರಣೆಯಿಂದ ಅನ್ನವೊಂದು ಆಹಾರವಾಗುವ ಬದಲು ಅನ್ಯಗೊಂಡು ಸಾಂಸ್ಕೃತಿಕವಾಗಿ ಬಹಿಷ್ಕೃತ ಮಾದರಿಯಾಗುತ್ತದೆ. ಬಹಿಷ್ಕೃವಾದುದನ್ನು ತಿಂದವರನ್ನು ಪಾರಂಪರಿಕ ಸಮಾಜ ಹೇಗೆ ಅಂಚಿಗೆ ಸರಿಸಿದೆಯೋ, ಅಂತೆಯೇ ಹೊಸಕಾಲದ ರಾಜಕೀಯ ಅಧಿಕಾರ ಕೇಂದ್ರದಿಂದಲೂ ಇವರನ್ನು ಅಂಚಿಗೆ ಸರಿಸುವುದೇ ಈ ಸ್ಥಾಪಿತಶಕ್ತಿಯ ಆತ್ಯಂತಿಕ ಗುರಿ. ಅದೆಲ್ಲವನೂ ಸಾಧಿಸಲು ಈ ಹಸು-ಎಮ್ಮೆಗಳ ಜಗತ್ತಿನ ಕಾರ್ಯಯೋಜನೆಗಳು ಪೂರಕವಾಗಿ ಒದಗಿ ಬರುತ್ತವೆ ಎಂಬುದನ್ನು ಗಮನಿಸಬೇಕು.



ಈಗಾಗಲೇ ಮೇಲೆ ಹೇಳಿದಂತೆ ಜಾನುವಾರುಗಳ ಕುರಿತ ಇಡಿಯ ರಾಜಕೀಯ ಸಂಕಥನಕ್ಕೆ ಜಾನುವಾರು ಜಗತ್ತಿನ ಇತರ ಸಮಸ್ಯೆಗಳು ಆದ್ಯತೆಯ ಪ್ರಶ್ನೆಗಳಲ್ಲ. ಹಾಗೊಂದು ವೇಳೆ ಅವುಗಳನ್ನು ಮುನ್ನೆಲೆಗೆ ತಂದು ಸಂಪನ್ಮೂಲವನ್ನು ಉಳಿಸುವುದೇ ಅದರ ಆದ್ಯತೆಗಳಾಗಿದ್ದ ಪಕ್ಷದಲ್ಲಿ, ಹಸು-ಎಮ್ಮೆಗಳ ಈ ಜಾನುವಾರು ಜಗತ್ತು ದೊಡ್ಡ ಸಂಖ್ಯೆಯಲ್ಲಿ ಕರಗುತ್ತಿರುವ ಈ ಹೊತ್ತಿನಲ್ಲಿ ಅಮೃತಸದೃಶವಾದ ಒಂದು ಲೀಟರ್ ಹಾಲು ತೆಗೆಯಲು ರೈತನಿಗೆ ಬೀಳುತ್ತಿರುವ ಖರ್ಚೆಷ್ಟು? ಆದರೆ ಆತ ನಿಜಕ್ಕೂ ಪಡೆಯುತ್ತಿರುವುದೆಷ್ಟು? ನಮ್ಮದೇ ನೆಲದೊಡಲಿನಿಂದ ತೆಗೆಯಲು ಅನುಮತಿಸಿದ ಒಂದು ಲೀಟರ್ ಖನಿಜಯುಕ್ತವೆನ್ನಲಾಗುವ ನೀರಿಗೆ ಎಷ್ಟು ಬೆಲೆಪಡೆಯಲು ಅನುಮತಿಸಲಾಗಿದೆ? ನಮ್ಮದೇ ಕಡಲಿನ ಉಪ್ಪನ್ನು ನಾವೇ ಸಿದ್ಧಪಡಿಸಿಕೊಳ್ಳುತ್ತೇವೆ,ಅದರ ಮೇಲೆ ತೆರಿಗೆ ಸಲ್ಲದೆಂದು ಉಪವಾಸ ಕುಳಿತ ಗಾಂಧೀಜಿಯವರ ಹೋರಾಟದಿಂದ ಸ್ವಾತಂತ್ರ್ಯ ಪಡೆದ ಇದೇ ದೇಶ, ಬಹುರಾಷ್ಟ್ರೀಯ ಕಂಪೆನಿಗಳಿಗೆ ಇಂದು ಒಂದು ಕೆ.ಜಿ ಉಪ್ಪನ್ನು ಎಷ್ಟು ದರದಲ್ಲಿ ಮಾರಲು ಅನುಮತಿ ನೀಡಿದೆ? ಇದೆಲ್ಲದರ ಜೊತೆಗೆ ನಮ್ಮದೇ ನಿಸರ್ಗ ಸಂಪತ್ತನ್ನು ಬಳಸುವ ದೇಶದ ಕುಭೇರರಿಗೆ, ಬಹುರಾಷ್ಟ್ರೀಯ ಕಂಪೆನಿಗಳಿಗೆ ಕೊಡುತ್ತಿರುವ ತೆರಿಗೆ ರಿಯಾಯಿತಿಗಳೆಷ್ಟು? ಎಂಬ ಪ್ರಶ್ನೆಗಳು ಮುಖ್ಯವಾಗುತ್ತಿದ್ದವು. ಇವುಗಳ ಬಗೆಗೆ ಚಕಾರವೆತ್ತದೆ ರೈತನ ದುಡಿಮೆಯ ಫಲವನ್ನು ಅಡ್ಡಾದಿಡ್ಡಿ ದರಕ್ಕೆ ಕಸಿದುಕೊಂಡು, ಆತನಿಂದ ಹೊಣೆಗಾರಿಕೆಯನ್ನು ನಿರೀಕ್ಷಿಸುವ ನಾಗರಿಕ ಸಮಾಜಕ್ಕೆ ರೈತನ ಸಮಸ್ಯೆಯ ನಿಜವಾದ ಅರಿವಾಗಲೀ, ಸಹಾನುಭೂತಿಯಾಗಲೀ ಇದೆಯೇ? ರೈತನಿಗೆ ಆರ್ಥಿಕ ಭದ್ರತೆಯನ್ನೊದಗಿಸುವ ವಿಮೆಯ ಸೌಲಭ್ಯದ ವ್ಯಾಪ್ತಿಗೆ ಎಷ್ಟೊಂದು ಹಸುಗಳು ಒಳಪಟ್ಟಿವೆ? ಇದಕ್ಕೆಲ್ಲಾ ರೈತರ ಅಜ್ಞಾನವಷ್ಟೇ ಕಾರಣವೇ? ಬರಗಾಲದ ಹೊತ್ತಿನಲ್ಲಿ ಕುಡಿಯಲು ನೀರನ್ನೂ ಪಡೆಯದೆ ಸಾಯುವ ಜಾನುವಾರುಗಳು ಎಷ್ಟಿವೆ? ಅತ್ಯಂತ ಸಂಪದ್ಭರಿತವಾದ ನಾಟಿತಳಿ ಹಸುಗಳನ್ನು ದಾನವಾಗಿಯೂ ಸ್ವೀಕರಿಸದಿರುವಾಗ ಅದನ್ನು ಸಾಕಬೇಕಾದವರು ಯಾರು? ಹಸುವೆಂದರೆ ಬರಿಯ ಹಾಲಿನ ಉತ್ಪಾದನೆಗಷ್ಟೇ ಸೀಮಿತವಾದುದೇ? ಅದನ್ನು ಕೇಂದ್ರವಾಗಿರಿಸಿದ ಇನ್ನಿತರ ಉದ್ಯಮಗಳನ್ನು ಹೇಗೆ ವಿವರಿಸಿಕೊಳ್ಳಬೇಕು? ಆದಾಯ ಮತ್ತು ಯಜಮಾನಿಕೆಗಳ ಮಾಧ್ಯಮವಾಗಿ ದುಡಿಸಲ್ಪಟ್ಟಿರುವ ಜಾನುವಾರುಗಳ ಜಗತ್ತನ್ನು ಕಾಪಾಡಿಕೊಳ್ಳುವ ಹೊಣೆಗಾರಿಕೆ ಯಾರ ಮೇಲಿದೆ? ಈ ಹೊಣೆಗಾರಿಕೆಯನ್ನು ಯಾರಿಂದ ನಿರೀಕ್ಷಿಸಲಾಗುತ್ತಿದೆ?. ಯಾರ ಮೇಲೆ ಹೊರಿಸಲಾಗುತ್ತಿದೆ? ಚಲನೆ ಕಳೆದುಕೊಂಡು ಅಪ್ರಸ್ತುತಗೊಳ್ಳುತ್ತಾ ಕಣ್ಣೆದುರಿನಿಂದ ಮಾಯವಾಗುತ್ತಿದ್ದರೂ, ಭಾವನೆಯಲ್ಲಿ ಲಂಗರು ಹಾಕಿ ನಿಲ್ಲುವುದರಿಂದ ಹಸು ಮತ್ತು ಅದರ ಜೊತೆಗಿನ ಪಾರಂಪರಿಕವಾದ ಜ್ಞಾನ-ಮೌಲ್ಯಗಳನ್ನೊಳಗೊಂಡ ಸಾಂಸ್ಕೃತಿಕ ಜಗತ್ತು ಉಳಿಯುತ್ತದೆಯೇ? ಒಂದು ಸಾಂಸ್ಕೃತಿಕ ಸಂದರ್ಭವು ಜಡತ್ವಕ್ಕೆ ತಳ್ಳಲ್ಪಡುವುದರಿಂದ ಸಮಾಜದ ಮನಸ್ಥಿತಿಯ ಮೇಲೆ ಉಂಟಾಗುವ ಪರಿಣಾಮವೆಂತಹದು? ಇಂತಹ ಸಾಲು ಸಾಲು ಪ್ರಶ್ನೆಗಳನ್ನು ಅವರ ಎದುರಿಗಿಡಬೇಕಾಗಿದೆ.

ಈ ಎಲ್ಲಾ ಹುನ್ನಾರಗಳನ್ನು ನಿರಸನಗೊಳಿಸಿ ಹಸುಸಾಕುವವರಿಗೆ ಗೌರವದ ಬದುಕಿನ ಜೊತೆಗೆ ನಮಗೆ ನಿಜಕ್ಕೂ ಬೇಕಾದ ತಳಿಗಳು ಉಳಿಯಬೇಕಾದರೆ ಅದನ್ನು ಸಾಕುವವರು ಪ್ರಜ್ಞಾವಂತರಾಗಬೇಕು. ದನ ಮೇಯಿಸುವುದು ಯಾತಕ್ಕೂ ಬೇಡದ ಉದ್ಯೋಗವೆಂಬ ಹಣೆಪಟ್ಟಿ ತೊಲಗಿ ಅದೊಂದು ಗೌರವ ತರುವ ಕಾಯಕವೆನಿಸುವ ವಾತಾವರಣ ಮೂಡಬೇಕು. ಭಾವನೆ ಮತ್ತು ಅಸಹಾಯಕತೆಯ ಮೇಲೆ ಯಜಮಾನಿಕೆ ಚಲಾಯಿಸಬಹುದಾದ ಅವಕಾಶ ಇಲ್ಲವಾಗಬೇಕು. ವಾಸ್ತವವನ್ನು ಇರುವಂತೆಯೇ ವಿವರಿಸಿಕೊಳ್ಳಬಹುದಾದ ಸಾಂಸ್ಕೃತಿಕ ವಾತಾವರಣ ಸಿದ್ಧಗೊಳ್ಳಬೇಕು. ಆದರೆ ಜನರನ್ನು ಶಿಕ್ಷಣದ ಆವರಣಕ್ಕೆ ತಾರದೆಯೇ ಹುನ್ನಾರಗಳನ್ನು ಅರ್ಥೈಸಿಕೊಳ್ಳುವ ಅರಿವಿನ ಜಗತ್ತು ಅಸಾಧ್ಯವಾಗುತ್ತದೆ. ಈ ಅರಿವಿನ ಜಗತ್ತು ಸಾಧ್ಯವಾದಾಗ ಅವರೇ ತಮ್ಮದೆಂದು ಭಾವಿಸಿಕೊಂಡ ಪಾಪದ ನೆಲೆಗಳಾಗಲೀ, ಕಾರಣರೆಂದು ಭ್ರಮಿಸಿದ 'ಅನ್ಯ'ತ್ವದ ಕಲ್ಪನೆಯಾಗಲೀ ನಿರಸನಗೊಂಡು ತಾವು ತಮ್ಮ ಮೇಲೆ ಹೇರಿಕೊಂಡ ನಾಯಕತ್ವವನ್ನು ತಾವೇ ನಿರಾಕರಿಸುವಂತಾಗುತ್ತದೆ. ಹಾಗಾದಾಗ ಮಾತ್ರ ಹುನ್ನಾರಗಳಿಗೆ ಸಮ್ಮತಿಯ ಮುದ್ರೆಯೊತ್ತಿದ ಜನಸಾಮಾನ್ಯರೇ ಪ್ರತಿರಾಜಕಾರಣದ ನಿಜದ ನಾಯಕರಾಗಿ ಸ್ಥಾಪಿತ ಯಜಮಾನ್ಯವನ್ನು ನಿರಾಕರಿಸಿ ದೈನಿಕವನ್ನು ಅರ್ಥಮಾಡಿಕೊಳ್ಳುತ್ತಾರೆ. ಅಂತಹ ಸ್ಥಿತಿಯೊಂದು ಸಾಧ್ಯವಾಗದೇ ಇರುವಲ್ಲಿಯವರೆಗೆ, ಹಿಂದಣೆ-ಮುಂದಣೆಗಳೆಂಬ ಹಟ್ಟಿಯ ಅವಯವಗಳಲ್ಲಿ ಹಿಂದಣೆ-ಮುಂದಣೆಗಳು ತುಂಬುವ-ಖಾಲಿಯಾಗುವ ಈ ನಿರಂತರತೆಯ ಕೊಂಡಿ ಸರಿದುಹೋಗಿ ಕೆಂಪಿ, ಬುಡ್ಡಿ, ಕಾಳಿ, ಬೆಳ್ಳಿ, ಕೆಂಪಣ್ಣರ ಉಪಸ್ಥಿತಿ ನಾಪತ್ತೆಯಾಗುತ್ತಾ ಸಾಗುತ್ತದೆ. ಅಚ್ಚು ಹಾಕಿಕೊಟ್ಟ ಧರಣಿಮಂಡಲ, ಕಾಳಿಂಗ, ಕೊಳಲು, ಗಂಗೆ, ತುಂಗೆಯರ ಜಪವಷ್ಟೇ ನಮ್ಮದಾಗಿ, ಲೋಹದ ರೂಪದ ಮೋಹದ ಗೋವು ಉಚ್ಚೆಹಾರಿಸುವ, ಜೀವ ತುಂಬಿದ ಹಸುಗಳನ್ನು ಕೊಂದು ಮುಗಿಸುತ್ತದೆ.

# ಮೈಕೆಲ್ ಫೊಕೋ

## ಮಾನವ ಜೀವನಾನುಭವದ ಇತಿಹಾಸಕಾರ

ಸಿ.ಜಿ.ಲಕ್ಷ್ಮೀಪತಿ



ಫೊಕೋರವರು ಭಾಷೆಯು ಪ್ರಾಣಿಗಳನ್ನು ಪ್ರಬೇದಗಳನ್ನಾಗಿ ವರ್ಗೀಕರಿಸಿತು. ಕೆಲವು ಪ್ರಾಣಿಗಳನ್ನು ವೈದ್ಯವಿಜ್ಞಾನದ ಪ್ರಯೋಗಗಳಿಗೆ ಒಡ್ಡಬಹುದೆಂದು ತಿಳಿಸಿತು. ಭಾಷೆಯ ನಿರೂಪಣೆಯ ಪ್ರಕಾರ ಜ್ಞಾನ ವ್ಯವಸ್ಥೆಯು ನಿರ್ಧರಿಸಲ್ಪಡುತ್ತದೆ ಎಂದಾಯಿತು.

ಮೈಕೆಲ್ ಫೋಕೊ : ಇವರು ಫ್ರಾನ್ಸಿನ ತತ್ವಜ್ಞಾನಿ, ರಾಜಕೀಯ ಚಿಂತಕ ಮತ್ತು ಸಮಾಜಶಾಸ್ತ್ರಜ್ಞ, ಜೊತೆಗೆ ಸಮಕಾಲೀನ ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗಿ, ಮಾರ್ಕ್ಸ್‌ವಾದಿ ಚಿಂತನೆಯನ್ನು ಮುಂದುವರೆಸಿದ ಫೋಕೋ ಅದನ್ನು ಭಿನ್ನವಾಗಿ ಅರ್ಥೈಸಿದ್ದರು ಅಥವಾ ಕೆಲವರು ಆರೋಪಿಸುವಂತೆ ಮಾರ್ಕ್ಸ್‌ವಾದಕ್ಕೆ ತತ್‌ವಿರುದ್ಧವಾದ ದಿಕ್ಕಿನಲ್ಲಿ ಆಲೋಚಿಸಿದ್ದರು 20–21ನೇ ಶತಮಾನದ ಜನಪ್ರಿಯ ಪ್ರಭಾವಿ ಚಿಂತಕರಲ್ಲಿ ಒಬ್ಬರಾದ ಇವರು ಫ್ರಾನ್ಸ್ ದೇಶದಲ್ಲಿ ಅಕ್ಟೋಬರ್ 15 1926ರಂದು ಜನಿಸಿದರು. ಇವರ ತಂದೆ ಶ್ರೀಮಂತ ವೈದ್ಯರಾಗಿದ್ದರು. ಕ್ಯಾಥೋಲಿಕ್ ಪಂಗಡಕ್ಕೆ ಇಷ್ಟವಾಗಿದ್ದ ಫೋಕೋ ಬಾಲ್ಯದಲ್ಲಿ ಚರ್ಚಿನ ಸಂಗೀತ ನುಡಿಸುವ ಗುಂಪಿನ ಹುಡುಗರಲ್ಲಿ ಒಬ್ಬರಾಗಿದ್ದರು. ತಾಯಿ ಮತ್ತು ತಂಗಿಯ ಜೊತೆಗೆ ತಂದೆಗಿಂತ ಹೆಚ್ಚು  ಆತ್ಮೀಯ ಸಂಬಂಧ ಹೊಂದಿದ್ದರು. ತನ್ನ ಶಿಕ್ಷಣದ ಅವಧಿಯಲ್ಲಿ ಫ್ರೆಂಚ್, ಇತಿಹಾಸ ಗ್ರೀಕ್ ಮತ್ತು ಇಂಗ್ಲೀಷ್ ಭಾಷೆಯ ಮೇಲೆ ಹತೋಟಿ ಪಡೆದಿದ್ದರು. 1943ರಲ್ಲಿ ಪ್ಯಾರಿಸ್‌ನ ಸುಪ್ರಸಿದ್ಧವಾದ ಇಕೊಲೆ ನಾಮರಲ್ ಸುಪೀರಿಯರ್ ಕಾಲೇಜಿಗೆ ಸೇರಿಕೊಂಡರು. ಆ ಕಾಲೇಜಿನಲ್ಲಿ ಗ್ರೀಲ್ ಟಿಪ್ಪೋ ಲೈಟ್ ಎಂಬ ತತ್ವಜ್ಞಾನಿಯ ಪ್ರಭಾವಕ್ಕೆ ಒಳಗಾಗಿ ಹೆಗಲ್‌ರವರ ತತ್ವಶಾಸ್ತ್ರವನ್ನು ಅಭ್ಯಾಸ ಮಾಡಿದರು. ಆಗ ಪೊಕೋರವರಿಗೆ ಇತಿಹಾಸ ಮತ್ತು ತತ್ವಶಾಸ್ತ್ರಕ್ಕೆ ಇರುವ ಆಳವಾದ ಸಂಬಂಧ ಅರ್ಥವಾಯಿತು. ಟಿಪ್ಪೊಲೈಟ್‌ರವರು ತತ್ವಶಾಸ್ತ್ರದ ಮೂಲಕ ಇತಿಹಾಸವನ್ನು ವಿವರಿಸಿಕೊಂಡ ಕಲೆಯನ್ನು ಫೋಕೋ ರವರಿಗೆ ಕರಗತ ಮಾಡಿಕೊಟ್ಟರು.

ಹೆಗಲ್‌ರವರು ಯಾವುದು ವಾಸ್ತವವೋ ಅದನ್ನು ತರ್ಕಬದ್ಧ ಹಾಗೂ ವೈಚಾರಿಕವಾದದ್ದು ಎಂದು ನಂಬಿದ್ದರು. ಅವರ ಫೇಕಲ್ ವಿಚಾರ ಅಥವಾ ಪ್ರಜ್ಞೆಯೇ.

ಇತಿಹಾಸ ಅಥವಾ ಮಾನವನನ್ನು ಮುನ್ನಡೆಸುವ ಶಕ್ತಿಯಾಗಿದ್ದಿತು. ಈ ಸಂದರ್ಭದಲ್ಲಿ ಫೋಕೋ ಮಾರ್ಕ್ಸ್‌ವಾದದ ಜೊತೆಗೆ ಹೆಗೆಲ್‌ನ ತತ್ವಜ್ಞಾನವನ್ನು ಅರ್ಥೈಸಿಕೊಂಡರು. ಹೀಗೆ ಅರ್ಥೈಸಿಕೊಳ್ಳುವಾಗ ಮಾರ್ಕ್ಸ್‌ವಾದದ ಪ್ರಮುಖ ಅಂಶವಾದ ಕಾರ್ಯಕಾರಣ ಸಂಬಂಧದ ಪರಿಕಲ್ಪನೆಯನ್ನು ಅನುಮಾನ ದೃಷ್ಟಿಯಿಂದ ಪರಿಶೀಲಿಸತೊಡಗಿದರು. ಎಕೆಲೋ ಪ್ಯಾರಿಸ್‌ನ ಇಓಖ ಕಾಲೇಜಿನಲ್ಲಿ ಅಧ್ಯಯನ ಮಾಡುವಾಗ ಖಿನ್ನತೆಗೆ ಒಳಗಾದರು. ಯಾರ ಜೊತೆಯು ಬೆರೆಯುತ್ತಿರಲಿಲ್ಲ. ಯಾವುದಾದರೂ ವಿಚಾರ ಬಂದಾಗ ತೀವ್ರ ವಾಗ್ವಾದದಲ್ಲಿ ತೊಡಗುತ್ತಿದ್ದರು. ಇದರಿಂದಾಗಿ ಫೊಕೋರ ಸ್ನೇಹಿತರು ದ್ವೇಷಿತೊಡಗಿದರು. ಆಗ ಹುಚ್ಚನಪಟ್ಟಕೂಡ ಕಟ್ಟಲಾಯಿತು. ಆತ್ಮಹತ್ಯೆಗೆ ಪ್ರಯತ್ನಿಸಿದ ಫೋಕೋ ಚಾಕುವಿನಿಂದ ತನ್ನ ಎದೆಯನ್ನು ಇರಿದುಕೊಂಡರು. ನಿದ್ರೆಯ ಮಾತ್ರೆಗಳನ್ನು ನುಂಗಿ ಸಾಯಲು ಪ್ರಯತ್ನಿಸಿದ್ದರು. ಈ ಸಂದರ್ಭದಲ್ಲಿ ಮೊಟ್ಟಮೊದಲ ಬಾರಿಗೆ ಫೋಕೋರವರಿಗೆ ಮನೋಚಿಕಿತ್ಸೆಯನ್ನು ನೀಡಲಾಯಿತು. ಆಗ ಅವರಿಗೆ ಮನಃಶಾಸ್ತ್ರದ ಪರಿಚಯ ಉಂಟಾಯಿತು. ಇದು ಮುಂದಿನ ಅಧ್ಯಯನಗಳಿಗೆ ಸಹಕಾರಿಯಾಯಿತು. ಈ ವಯಸ್ಸಿನಲ್ಲಿ ಅವರು

ಪುರುಷರೆಡೆಗೆ ಆಕರ್ಷಿತರಾದರು. ಅವರ ಬುದ್ಧಿ ಮತ್ತು ಹರಿತವಾದ ಮುಖಲಕ್ಷಣ ಗುರುತಿಸಿ "ನರಿ" ಎಂದುಕರೆಯುತ್ತಿದ್ದರು. ಪುರುಷರಿಗೆ ಆಕರ್ಷಿತವಾದ ಫೋಕೋ ತನ್ನ ಆಕರ್ಷಣೆಯನ್ನು ಬಹಿರಂಗವಾಗಿ ವ್ಯಕ್ತಪಡಿಸುವಂತಿರಲಿಲ್ಲ. ಏಕೆಂದರೆ ಶಾಸನ ಬದ್ಧವಾಗಿ ಪುರುಷ ಈ ಪುರುಷರ ಸಂಬಂಧ ಅಥವಾ ಸ್ತ್ರೀಯರ 'ಸ್ತ್ರೀಯರ ನಡುವಿನ ಸಂಬಂಧವನ್ನು ಫ್ರಾನ್ಸಿನಲ್ಲಿ ನಿಷೇಧಿಸಲಾಗಿತ್ತು. ಈ ವಿಚಾರಗಳು ಫೋಕೋರವರಲ್ಲಿ ಕುತೂಹಲವನ್ನು ತರಿಸಿದವು. ಈ ಮನುಷ್ಯನ ಲೈಂಗಿಕತೆಯನ್ನು ದಮನ ಮಾಡುವ ಸಾಮಾಜಿಕ ಕಟ್ಟುಪಾಡುಗಳನ್ನು ಕುರಿತು ಸಂಶೋಧನೆ ಮಾಡಲು ಪ್ರೇರೇಪಿಸಿದವು.

ಫ್ರಾನ್ಸ್‌ನಲ್ಲಿ ಆಗ ಎರಡು ಪ್ರಮುಖ ತತ್ವಶಾಸ್ತ್ರದ ಧಾರೆಗಳು ಪ್ರಚಲಿತದಲ್ಲಿದ್ದವು. ಒಂದು ಸಾರ್ತರ್‌ರವರ ಅಸ್ತಿತ್ವವಾದ ಮತ್ತೊಂದು ಎಡ್ಮಂಟ್ (ಹಝಲ್‌ರವರ ಫಿನೋಫಿನಾಲಜಿ ಇಂದ್ರೀಯ ಗೋಸರಣಾನುಭವಶಾಸ್ತ್ರ)

ಅಸ್ತಿತ್ವವಾದಿಯಾದ ಸಾರ್ತರ್‌ರವರು ಮಾನವನ ಅಸ್ಥಿತ್ವ ಅಥವಾ ಇರುವಿಕೆ ಇರುವಿಕೆಯಿಂದ ಅವನಿಗೆ ಉಂಟಾಗುವ ಅನುಭವಕ್ಕೂ ಅಸ್ತಿತ್ವಕ್ಕೂ ಹಾಗೂ ಆಯ್ಕೆ ಶ್ರೀ ಸ್ವಾತಂತ್ರ್ಯ ಇರುವ ಸಂಬಂಧವನ್ನು ಕುರಿತು ಚರ್ಚಿಸಿದರು. ಜಗತ್ತಿನ ಯಾವುದೇ ಜೀವ ಅಥವಾ ಮತ್ತು ತನ್ನ ಅಸ್ಥಿತ್ವದಿಂದ ಮಾತ್ರ ಅರ್ಥವನ್ನು ಹೊರಡಿಸುತ್ತಿದೆ ಎಂದು ಗಾಢವಾಗಿ ನಂಬಿದ್ದರು.

ಎಡ್ಮಂಟ್ ಟ್ರಜಲ್‌ರವರು ತಮ್ಮ ಫೆನೋಮಿನಾಲಜಿಯಲ್ಲಿ ವಸ್ತುಗಳು ವಿಚಾರಗಳು, ಹಿಂಭಾವನೆಗಳು ನಮ್ಮ ಪ್ರಜ್ಞೆಗೆ ಯಾವ ರೀತಿಯಲ್ಲಿ ತಾಗುತ್ತವೆ ಎಂಬುದನ್ನು ಕುರಿತು ಸಂಶೋಧನೆ ಮಾಡುತ್ತಿದ್ದರು.

ಫೆನೋಮಿನಾಲಜಿಯ ಚಿಂತಕರಿಗೆ ಜಗತ್ತನ್ನು ಕುರಿತು ಯಾವುದೇ ವಿವರಣೆಯನ್ನು ಹೆಚ್ಚು ಆಸಕ್ತಿ ಇರಲಿಲ್ಲ. ಬದಲಾಗಿ ಅದು ಪ್ರಜ್ಞೆಗೆ ಗೋಚರವಾಗುವ ಅನುಭವವನ್ನು ಕುರಿತು ಆಸಕ್ತಿ ಹೊಂದಿದ್ದರು. ಪೋಕೋರವರು ಈ ಎರಡು ತಾತ್ವಿಕ ಧಾರೆಗಳಿಂದ ಮನುಷ್ಯನ ಅಸ್ಥಿತ್ವ ಮನಸ್ಸು ಮತ್ತು ಮೆದುಳನ್ನು ಕುರಿತು ಅಧ್ಯಯನ ಮಾಡಲು ಸ್ಫೂರ್ತಿಪಡೆದರು. ಅದರ ಜೊತೆಯಲ್ಲಿ ಎಪಿಸ್ಟಾಮೊಲಜಿ (ಅಚಿಥಿಣಚಿಟಚಿ ಟಠಿಂಥಿ) ಜ್ಞಾನ ಮೀವಮಾಂಸೆಯನ್ನು ಕುರಿತು ಅಧ್ಯಯನ ಮಾಡತೊಡಗಿದರು. ಜ್ಞಾನ ಮೀಮಾಂಸೆ ಎಂದರೆ ಜ್ಞಾನ ಎಂದರೇನು ಯಾವುದನ್ನು ಜ್ಞಾನ ಎಂದು ಕರೆಯಲಾಗುತ್ತದೆ. ಜ್ಞಾನ ಎನ್ನುವುದು ನಿಜವಾಗಿಯೂ ಜ್ಞಾನವೇ? ಹೀಗಾಗಲೇ ಜ್ಞಾನ ವ್ಯವಸ್ಥೆ ಎಂದು ಕರೆಸಿಕೊಂಡಿರುವ ವಿಜ್ಞಾನಕ್ಕೆ ಖಚಿತತೆ ಇದೆಯೇ ಮೊದಲಾದವುಗಳನ್ನು ಪರಿಶೀಲಿಸುತ್ತದೆ. ಜ್ಞಾನ ಮೀಮಾಂಸೆಯಲ್ಲಿ ತೊಡಗಿದವರು ಯಾವುದೇ ಪರಿಕಲ್ಪನೆ ಸಿದ್ಧಾಂತ, ಜ್ಞಾನದ, ರಚನೆಯನ್ನು ಕುರಿತು ಚರ್ಚಿಸುತ್ತಾರೆ. ಜೊತೆಗೆ ವಿಜ್ಞಾನವು ಯಾವುದನ್ನು ಸತ್ಯ ಎಂದು ಪ್ರತಿಪಾದಿಸುತ್ತದೆಯೋ ಅದನ್ನು ಹಾಗೆ ಪ್ರತಿಪಾದಿಸಲಾಗುತ್ತದೆ ಎಂಬುದನ್ನು ಪರಿಶೀಲಿಸುತ್ತದೆ. ಈ ವಿಚಾರಗಳು ಪ್ಲೋಕೊರವರಿಗೆ ಜ್ಞಾನ ಮತ್ತು ಅಧಿಕಾರಕ್ಕೆ ಇರುವ ಸಂಬಂಧವನ್ನು ಪರೀಕ್ಷಿಸಲು ಸಹಾಯಕವಾದವು. ಇದೇ ಸಂದರ್ಭದಲ್ಲಿ ಮನಃಶಾಸ್ತ್ರವನ್ನು ಕುರಿತು ನಿರೂಪಣೆಗಳನ್ನು ಜಾರ್ಜಿಸ್ ಕ್ಯಾಂಗುಲ್ ಚರ್ಚೆಗಳಾಗುವ ಮನಃಶಾಸ್ತ್ರ ಎಂದರೇನು ಎಂಬ ಸರಳವಾದ ಪ್ರಶ್ನೆಯನ್ನು ಕೇಳಿದರು? ಈ ಪ್ರಶ್ನೆ ಸರಳವಾಗಿದ್ದರು ಸಹ ಪೊಕೋರವರ ಚಿಂತನಾಶಕ್ತಿಯನ್ನು ಬದಲಾಯಿಸುವಷ್ಟು (ಶಕ್ತಿ) ಪ್ರಭಾವಿಯಾಯಿತು. ಏಕೆಂದರೆ ಮನಃಶಾಸ್ತ್ರ ತಾವು ಅಧ್ಯಯನ ಮಾಡುವ ವಸ್ತು ಅಥವಾ ವ್ಯಕ್ತಿಯನ್ನು ಖಚಿತವಾಗಿ ವಿವರಿಸಲಾಯಿತು. ಮನುಷ್ಯನ ಪ್ರತಿಯೊಂದು ನಡೆ ಅಣೆಪಟ್ಟಿಯನ್ನು ಹಚ್ಚುತ್ತಾರೆ. ಇದರಿಂದಾಗಿ ಅದು ಮನುಷ್ಯನನ್ನು ನಿಯಂತ್ರಿಸುವ ವಿಜ್ಞಾನವಾಗಿ ಬೆಳೆದಿದೆ. ಎಂಬ ನಂಬಿಕೆಯು ಫೋಕೋ ರಲ್ಲಿ ಬೆಳೆಯತೊಡಗಿತು. ಈ ಚಿಂತನಾ ಕ್ರಮವೇ ಮುಂದುವರೆದು ವೈಜ್ಞಾನಿಕ ಸತ್ಯಗಳು ಎಂದು, ಯಾವುದನ್ನು ಕರೆಯಲಾಗುತ್ತಿತ್ತೋ ಅದನ್ನು ಪ್ರಶ್ನಿಸುವ ಅವಶ್ಯಕತೆಯನ್ನು ಫೋಕೋ ಮನಗಂಡರು. ವೈಜ್ಞಾನಿಕ ಸತ್ಯವೆಂದರೆ ಪವಿತ್ರವಾದುದೇನು ಅಲ್ಲ. ಅದು ಕಾಲದಿಂದ ಕಾಲಕ್ಕೆ ಬದಲಾವಣೆಗೆ ಒಳಪಡುವ ವ್ಯವಸ್ಥಿತವಾದ ಸಂಕಥನ ಎಂಬುದು ಫೊಕೋನ ಅಭಿಪ್ರಾಯವಾಗಿತ್ತು.

1950ರಲ್ಲಿ ಫೊಕೋರವರು ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರಾದರು. ಈ ಪಾರ್ಟಿಗೆ ಲೂಯಿಸ್ ಅಲ್ತೂಸರ್ ನಾಯಕರಾಗಿದ್ದಿರು. ಪೋಕೋ ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರಾಗಿದ್ದರು ಸಹ ಪಾರ್ಟಿಯ ಸಭೆಗಳಿಗೆ ನಿಯಮಿತವಾಗಿ ಹಾಜರಾಗುತ್ತಿರಲಿಲ್ಲ. ಬದಲಾಗಿ ಪಾರ್ಟಿಯ ಕೆಲವು ಸಿದ್ಧಾಂತಗಳನ್ನು ಟೀಕಿಸುತ್ತಿದ್ದರು.

ಫೊಕೋರವರ ಚಿಂತನೆಗಳನ್ನು ಅರಿತುಕೊಳ್ಳಲು ಮೇಲಿನ ಸುಧೀರ್ಘವಾದ ಪೀಠಿಕೆಯು ಸಹಾಯ ಮಾಡುತ್ತದೆ ಏಕೆಂದರೆ ಅವರ ಚಿಂತನೆಗಳು ಬಹುಮಟ್ಟಿಗೆ ಅವರ ವೈಯಕ್ತಿಕ ಬದುಕಿನ ಜೊತೆ ತಳುಕು ಹಾಕಿಕೊಂಡಿದೆ. ಆದುದರಿಂದ ಅವರ ಮೇಲೆ ಪ್ರಭಾವಿ ಬೀರಿದ ವ್ಯಕ್ತಿಗಳು ಘಟನೆಗಳು ಈ ಚಿಂತನಾಕ್ರಮಗಳನ್ನು ಸ್ವಲ್ಪಮಟ್ಟಿಗೆ ತಿಳಿದುಕೊಳ್ಳುವುದು ಅನಿವಾರ್ಯ, ಫೊಕೋರವರು ಯಾವುದೇ ಒಂದು ನಿರ್ದಿಷ್ಟವಾದ ಕ್ಷೇತ್ರಕ್ಕೆ ತಮ್ಮ ಚಿಂತನೆಯನ್ನು ಸೀಮಿತಪಡಿಸಿಕೊಳ್ಳಲಿಲ್ಲ. ತಮ್ಮ ಅರಿವಿಗೆ ಬರುವ ಪ್ರತಿಯೊಂದು ವಿಚಾರವನ್ನು ಆಳವಾಗಿ ಪರಿಶೀಲಿಸುತ್ತಿದ್ದರು. ಅಷ್ಟು ಮಾತ್ರವಲ್ಲದೇ ಜನಪ್ರಿಯ ಅಧ್ಯಾಪಕರಾಗಿದ್ದರು. ಅಮೇರಿಕಾದ ವಿಶ್ವವಿದ್ಯಾನಿಲಯಗಳಲ್ಲಿ ಅಥಿತಿ ಉಪನ್ಯಾಸಗಳನ್ನು ನೀಡತೊಡಗಿದಾಗ ಅವರ ಜನಪ್ರಿಯತೆಯು ಮುಗಿಲು ಮುಟ್ಟಿತು. ಅವರು ಉಪನ್ಯಾಸ ನೀಡುತ್ತಿದ್ದ ಸಭಾಂಗಣದ ಹೊರಗಡೆ ಜನರನ್ನು ನಿಯಂತ್ರಿಸಲು ಪೊಲೀಸರನ್ನು ನಿಯೋಜಿಸಲಾಗಿತ್ತು. ಅವರ ಹೇಳಿಕೆ ಸಂದೇಶವನ್ನು ಮುಖಪುಟ ಸುದ್ದಿಯಾಗಿ ಪ್ರಿಂಟಿಸಲಾಗಿತ್ತು. ಈ ವಿವರಗಳು ಪೊಕೋರವರ ಮಹತ್ವವನ್ನು ತಿಳಿಸುತ್ತವೆ. ವೈಯಕ್ತಿಕ ಬದುಕಿನಲ್ಲಿಯೇ ಪೊಕೋ ಕೆಲವೊಮ್ಮೆ ಅತಿರೇಕದ ಪ್ರಯೋಗಗಳಿಗೆ ತಮ್ಮ ದೇಹವನ್ನು ಒಡ್ಡಿಕೊಂಡರು. ಸಲಿಂಗಕಾಮ ಅತಿಯಾದ ಮಾದಕ ವಸ್ತುಗಳ ಬಳಕೆ, ವೇಶ್ಯಗೃಹಗಳಿಗೆ ಭೇಟಿ, ಫೊಕೋರವರ ಆರೋಗ್ಯದ ಮೇಲೆ ಕೆಟ್ಟಪರಿಣಾಮ ಬೀರಿದವು. ಯಾವುದನ್ನು ಸಮಾಜ ಸಹಜ ಎಂದು ಕರೆಯುತ್ತಿತ್ತೋ ಅಥವಾ ಅಸಹಜ ಎಂದು ಕರೆಯುತ್ತಿತ್ತೋ ಅದನ್ನು ಅವರು ಗಾಢ ಪರೀಕ್ಷೆಗೆ ಒಡ್ಡುತ್ತಿದ್ದರು. ಸತತವಾದ ಕಠಿಣ ಅಧ್ಯಯನದಿಂದ ಅವರಿಗೆ ಮಹತ್ವದ ಕೃತಿಗಳನ್ನು ರಚಿಸಲು ಸಾಧ್ಯವಾಯಿತು. ಅವರ ಕೃತಿಗಳು ಯಾವುವುವೆಂದರೆ

- ಮ್ಯುಡ್‌ನೆಸ್ ಅಂಡ್ ಸಿವಿಲೈಜೇಷನ್ (1964)
- ಎ ಹಿಸ್ಟರಿ ಆಫ್ ಇನ್‌ಸಾಲಿಟಿ In the Age of region ರೀಜನ್
- ದಿ ಆರ್ಡರ್ ಆಫ್ ಥೀಕ್ಸ್
- ಎ ಅಕ್ಯಾಲಜಿ ಆಫ್ ಹ್ಯೋಮನ ಸೈನ್ಸಸ್
- ದ ಆರ್ಕ್ಯಾಲಜಿ ಆಫ್ ನಾಲೆಡ್ಜ್
- ಡಿಸಿಪ್ಲಿನ್ ಆಫ್ ಫೋಶ್ ದ ಬರ್ತ್ ಆಫ್ ದಿ ಪ್ರಜನ್ ದ ಹಿಸ್ಟರಿ ಆಫ್ ಸೆಕ್ಯೂಲಜಿ

**Introduction**

**I II III – The carn of the salf**

**The birth or clinike**

**The ಯ___**

ಮೇಲಿನ ಶೀರ್ಷಿಕೆಗಳು ಸೂಚಿಸುವಂತೆ ಫೊಕೋರವರು ಮಾನವ ಜೀವನಾನುಭವದ ಇತಿಹಾಸವನ್ನು ಬರೆದಿದ್ದಾರೆ. ಈ ರೀತಿಯ ಇತಿಹಾಸದ ರಚನೆಯಿಂದಾಗಿ ಅವರು ಇತಿಹಾಸದ ಅಧ್ಯಯನಕ್ಕೆ ಹೊಸ ಮುನ್ನುಡಿಯನ್ನು ಬರೆದರು. ಅವರು ವೈವಿಧ್ಯಮಯ ವಿಚಾರಗಳ ಮೇಲೆ ಸಂಶೋಧನೆ ನಡೆಸಿದ್ದರಿಂದ ಅವರ ಚಿಂತನೆಯನ್ನು ಸೂಕ್ತರೂಪದಲ್ಲಿ ಚೌಕಟ್ಟಿಗೆ ಒಳಪಡಿಸಿ ವಿವರಿಸುವುದು ಕಷ್ಟ. ಆದರೂ ಕೂಡ ನಾವು ಅವರ ಚಿಂತನೆಗಳನ್ನು ಸರಳೀಕರಣಗೊಳಿಸದೇ ಪ್ರಮೇಯುಗಳ ರೂಪದಲ್ಲಿ ಬಣ್ಣಿಸಲು ಪ್ರಯತ್ನಿಸಬಹುದು.

ಯುರೋಪಿನ ಚರಿತ್ರೆ ಅಥವಾ ತತ್ವಶಾಸ್ತ್ರ ಪರಂಪರೆಯ ಗಾಢವಾದ ವಿದ್ಯಾರ್ಥಿಯಾಗಿದ್ದ ಫೊಕೋರವರು ತನ್ನ ಸಮಕಾಲೀನ ಪಾಶ್ಚಾತ್ಯ ಸಮಾಜ ಎದುರಿಸುತ್ತಿದ್ದ ದೈನಂದಿನ ಬದುಕಿನ ಸವಾಲುಗಳನ್ನು ಎದುರಿಸುತ್ತಿದ್ದ ತಾತ್ವಿಕ ಬಿಕ್ಕಟ್ಟನ್ನು ಗ್ರಹಿಸಲು ಪ್ರಯತ್ನಿಸಿದರು. ಇದು ಸಹಜವಾಗಿಯೇ ಅವರ ವಿಸ್ತೃತ ತಿಳುವಳಿಕೆಯನ್ನು ತಿಳಿಸುತ್ತದೆ. ಅವರ ತಿಳುವಳಿಕೆ ಸಾರ್ವತ್ರಿಕ ಮೌಲ್ಯವನ್ನು ಪಡೆದಿದೆ. ಹೀಗಾಗಿ ಅವರನ್ನು ಅಧ್ಯಯನ ಮಾಡುವುದೆಂದರೆ ಜಗತ್ತಿನ ತಾತ್ವಿಕ ಬಿಕ್ಕಟ್ಟು ಮತ್ತು ಮನುಷ್ಯನ ದೈನಂದಿನ ಬದುಕಿನ ಸವಾಲನ್ನು ಕುರಿತು ಅಧ್ಯಯನ ಮಾಡುವುದು.

ಪೊಕೋರವರು ಆಧುನಿಕತೆಯನ್ನು ಪ್ರಶ್ನಿಸಿದರು. ಆಧುನಿಕತೆ ಅಂತಿಮವಾಗಿ ಸಾರ್ವತ್ರಿಕವಾಗುವ ಅಪಾಯವನ್ನು ಅಧ್ಯಯನಗಳ ಮೂಲಕ ತಿಳಿಸಿಕೊಟ್ಟರು. ಆಧುನಿಕತೆಯಿಂದ ಹುಟ್ಟುವ ಜ್ಞಾನ, ನಿರೂಪಣೆ ಅದರಿಂದ ಹೊಮ್ಮುವ, ಅಧಿಕಾರ ಅವರ ಕೇಂದ್ರಕಾಳಜಿಯಾಗಿತ್ತು. ಇದನ್ನು ಅರಿಯಲು ಹುಚ್ಚುತನ, ಲೈಂಗಿಕತೆ, ಜ್ಞಾನದ ಬೆಳವಣಿಗೆ, ಔಷಧ ವಿಜ್ಞಾನ, ಮನಃಶಾಸ್ತ್ರ ಮೊದಲಾದವುಗಳ ಜ್ಞಾನ ವ್ಯವಸ್ಥೆಯನ್ನು ಆಧಾರವಾಗಿ ಪರಿವರ್ತನೆಯಾಗಿರುವ ಬಗೆಯನ್ನು ತಮ್ಮ ಕೃತಿಗಳಲ್ಲಿ ಮಂಡಿಸಿದರು. ಆದುದರಿಂದ ಅವರ ತಾತ್ವಿಕ ಕಾಣಿಕೆಗಳನ್ನು ಪ್ರತೀಕೃತಿಯ ಜೊತೆಯಲ್ಲಿಯೇ ಚರ್ಚಿಸುವ ಒತ್ತಾಯಕ್ಕೆ ಒಳಗಾಗಬೇಕಾಗಿರುತ್ತದೆ. ಇದರಿಂದ ಉಂಟಾಗುವ ಮತ್ತೊಂದು ಉಪಯೋಗವೆಂದರೆ ಸಂಕೀರ್ಣ ಮತ್ತು ವಿಸ್ತಾರವಾದ ಅವರ ಚಿಂತನೆಗಳನ್ನು ನಿರ್ದಿಷ್ಟ ಚೌಕಟ್ಟಿನಲ್ಲಿ ತಿಳಿದುಕೊಳ್ಳಬಹುದು.

ಫೊಕೋರವರ ಪುಸ್ತಕ 'ಮ್ಯೂಡ್‌ನೆಸ್ ಅಂಡ್ ಸಿವಿಲೈಜೇಷನ್' ಕೇವಲ ಹುಚ್ಚುತನದ ಚರಿತ್ರೆಯನ್ನು ಮಾತ್ರ ತಿಳಿಸುವುದಿಲ್ಲ. ಅಥವಾ ಮನಃಶಾಸ್ತ್ರೀಯ ದೃಷ್ಟಿಯಿಂದ ಬರೆಯಲ್ಪಟ್ಟಿಲ್ಲ. ಏಕೆಂದರೆ ಆಧುನಿಕ ವಿಜ್ಞಾನದ ತರ್ಕದ ಪ್ರಕಾರ ಹುಚ್ಚುತನ ಎನ್ನಲು ಸ್ಥಿತಿಯು ನಕರಾತ್ಮಕವಾದುದು. ಆದರೆ ಪೊಕೋ ಇದನ್ನು ಪ್ರಶ್ನಿಸುತ್ತಾರೆ. ಅವರು ಹುಚ್ಚುತನವನ್ನೇ ಆಳವಾದ ಅಧ್ಯಯನಕ್ಕೆ ಒಳಪಡಿಸಿದರು. ಹುಚ್ಚುತನವನ್ನು ಯಾವ ಯಾವ ಕಾಲಘಟ್ಟದಲ್ಲಿ ಹೇಗೆ ನಿರೂಪಿಸಲಾಯಿತು. ಎಂಬುದನ್ನು ದಾಖಲಿಸಿದರು. ಅಧ್ಯಯನವು ಮನಃಶಾಸ್ತ್ರ ಮಿತಿಯನ್ನು ತೋಡಿಸಿಕೊಟ್ಟಿತು. ಇವರ ಪ್ರಕಾರ ಹುಚ್ಚುತನ 17ನೇ ಮತ್ತು 18ನೇ ಶತಮಾನದಲ್ಲಿ ಯುರೋಪಿನ ಸಾಮಾಜಿಕ ಆವರಣದಲ್ಲಿ (ಜಗತ್ತಿನಲ್ಲಿ) ಭಿನ್ನವಾಗಿ ಪರಿಗಣಿಸಲ್ಪಟ್ಟಿತು. ಹುಚ್ಚುತನವು ರೀತಿನೀತಿಗಳಿಂದ ರೂಪಿಸಲ್ಪಟ್ಟಿತು. ಎಂದು ಪೊಕೋ ವಿಶ್ಲೇಷಿಸುತ್ತಾರೆ. ನಾಲ್ಕು ಘಟ್ಟಗಳಲ್ಲಿ ಹುಚ್ಚನ್ನು ಕುರಿತು ವಿವಿಧ ಬಗೆಯ ನಿರೂಪಣೆಗಳು ಕಂಡುಬಂದವು. ಮಧ್ಯಯುಗೀನ ಕಾಲದಲ್ಲಿ ಹುಚ್ಚುತನವನ್ನು ದೇವರ ಇಚ್ಛೆ ಜಗತ್ತನ್ನು ಪ್ರಳಯವಾಗುವ ಸೂಚನೆ ಮೊದಲಾಗಿ ಭಾವಿಸಲಾಗುತ್ತಿತ್ತು.

ಪುನರುಜ್ಜೀವನ ಯುಗದಲ್ಲಿ ಅಂದರೆ 15ನೇ ಶತಮಾನದಲ್ಲಿ ಹುಚ್ಚುತನ ಎಂಬುದು ಮುಖ್ಯ ಅಂಶವಾಯಿತು. ತತ್ವಶಾಸ್ತ್ರ, ಸಾಹಿತ್ಯ ಕಲೆಯಲ್ಲಿ ಹುಚ್ಚುತನವನ್ನು ಮನುಷ್ಯನ ಅಸ್ತಿತ್ವದಲ್ಲಿ ಗುರುತಿಸಲಾಯಿತು.

17 ಮತ್ತು 18ನೇ ಶತಮಾನದಲ್ಲಿ ಆಧುನಿಕತೆ ಕಾರ್ಯಕಾರಣ ಸಂಬಂಧದ ಪ್ರವೇಶವಾಗುತ್ತಿದ್ದಂತೆ ಹುಚ್ಚನ್ನು ತರ್ಕಬದ್ಧವಲ್ಲದ್ದು ಸಮಾಜವು ಒಪ್ಪಲು ಸಾಧ್ಯವಿಲ್ಲದ ನಡವಳಿಕೆ ಎಂದು ಪರಿಗಣಿಸಲಾಗಿತ್ತು. ಹುಚ್ಚರನ್ನು ಹುಚ್ಚರೆಂದು ಪರಿಗಣಿಸಲ್ಪಟ್ಟವರನ್ನು ಕಳ್ಳರ ಜೊತೆ ಬಂಧಿಸಿ ಇಡಲಾಗುತ್ತಿತ್ತು. ಆ ಕಾಲದಲ್ಲಿ ಬಡತನ, ಭಿಕ್ಷಾಟನೆ, ಸೋಮಾರಿತನ ಮೊದಲಾದ ಆರ್ಥಿಕ ಅಂಶಗಳು ಹುಚ್ಚುತನಕ್ಕೆ ಕಾರಣವಾಗಿದ್ದವು. ಎಂಬುದನ್ನು ಪೊಕೋ ಗುರ್ತಿಸಿದ್ದಾರೆ. ಫ್ರಾನ್ಸಿನಲ್ಲಿ 17 ಮತ್ತು 18ನೇ ಶತಮಾನದಲ್ಲಿ ಭಿಕ್ಷುಕರನ್ನು ಬಾಣದಿಂದ ಹೊಡೆದು ಸಾಯಿಸಲಾಗುತ್ತಿತ್ತು. ಹುಚ್ಚರನ್ನು ಪ್ರಾಣಿಗಳಂತೆ ಪರಿಗಣಿಸಿ ಕಟ್ಟಿ ಹಾಕಲಾಗುತ್ತಿತ್ತು. 18ನೇ ಶತಮಾನದಲ್ಲಿ ವಿವಿಧ ಮನಃಶಾಸ್ತ್ರಜ್ಞರು ಇದನ್ನು ಗುರುತಿಸಿದರು. ತನ್ನ ಮನಶಾಸ್ತ್ರೀಯ ಭಾಷೆಯಲ್ಲಿ ಹುಚ್ಚನ್ನು ವಿವರಿಸತೊಡಗಿದರು. 'ತಣ್ಣೀರಿನಲ್ಲಿ ಅದ್ದುವುದು, ಸಂಗೀತ ಕೇಳಿಸುವುದು, (ಬಳೆ ಚೂರಿನಿಂದ) ಚುಟಕೆ ಹಾಕುವುದು. ಮೊದಲಾದ ಚಿಕಿತ್ಸೆಗಳನ್ನು ನೀಡಲಾಗುತ್ತಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಹುಚ್ಚನ ಮನಸ್ಸಿನಲ್ಲಿ ಭಯ ಹುಟ್ಟಿಸುವುದರಿಂದ ಅವನನ್ನು ನಿಯಂತ್ರಣದಲ್ಲಿ ಇಡಬಹುದೆಂದು ನಿರೂಪಣೆ ಹುಟ್ಟಿಕೊಂಡಿತು. ಸಿಡ್‌ಮ್ಯಾಂಡ್ ಪ್ರಯಾಣರವರು ಮನಃಶಾಸ್ತ್ರೀಯವಾಗಿ ವಿವರಿಸಿದ ಮೇಲೆ ಹುಚ್ಚುತನಕ್ಕೆ ಹೊಸ ನಿರೂಪಣೆ ಸೇರಿಕೊಮಡಿತು. ಅಂತಿಮವಾಗಿ ಪ್ರತಿ ನಿರೂಪಣೆಯು ಬಂಡವಾಳಶಾಹಿಗಳ ಅಧಿಕಾರದ ಮಾದರಿಯನ್ನು ಹುಚ್ಚರ ಮೇಲೆ ಹೇರುವ ಕ್ರಮವನ್ನು ಪೊಕೋ ವಿವರಿಸುವುದು ಈ ನಿರೂಪಣೆಯಿಂದ ಮ್ಯಾಡ್‌ನೆಸ್ ಮತ್ತು ಸಿವಿಲೈಜೇಷನ್ ಮನೋಚಿಕಿತ್ಸೆಯ ವಿರುದ್ಧ ವಾದಿಸುತ್ತಿದ್ದವರನ್ನು ಆಕರ್ಷಿಸಿತು. ಇದಕ್ಕೆ ಸ್ಪೂರ್ತಿಗೊಂಡ ಲಯಂಗ್ ಮತ್ತು ಡೇವಿಡ್‌ಕೂಪರ್ ಕ್ಯಾಪಿಟಲಿಸಂ ಅಂಡ್___ ಕೃತಿಯನ್ನು ಒಟ್ಟಾರೆಯಾಗಿ ವಿವಿಧ ಕಾಲಘಟ್ಟದಲ್ಲಿ ಸಮಾಜವು ಹುಚ್ಚುತನವನ್ನು ಅಧಿಕಾರದ ಒಂದು ಆಯುಧವಾಗಿ ಬಳಸಿ ಜರನ್ನು ದಮನ ಮಾಡಿದ್ದನ್ನು ಫೊಕೋ ವಿವರಿಸುತ್ತಾರೆ.

## The order of thinks

ಪೊಕೋರವರ ಭಾಷೆಯನ್ನು ಕುರಿತ ಆಸಕ್ತಿಯೂ ಅದರ ವಿವಿಧ ಆಯಾಮಗಳನ್ನು ವಿವರಿಸುವಂತೆ ಮಾಡಿತು. ನಾವು ಜಗತ್ತಿನಲ್ಲಿರುವ ಪ್ರತಿಯೊಂದು ವಿಚಾರವನ್ನು ಭಾಷೆಯ ಮೂಲಕ ವ್ಯಾಖ್ಯಾನಿಸುತ್ತೇವೆ ಎಂದು ಪೊಕೋ ದಿ ಆರ್ಡರ್ ಆಫ್ ಥಿಂಕ್ಸ್ ಆನ್ ಆರ್ಕಾಲಜಿ ಆಫ್ ಹುಮನ್ ಸೈನ್ಸ್ ಎಂದು ಪುಸ್ತಕದಲ್ಲಿ ತಿಳಿಸಿದರು. ಮಾನವನು ಜ್ಞಾನವನ್ನು ಗಳಿಸುವ ವಸ್ತುವಾಗಿ ಪರಿವರ್ತನೆಯಾಗಿರುವುದನ್ನು ಫೊಕೋ ವಿಶ್ಲೇಷಿಸಿದರು. ಈ ವಿಶ್ಲೇಷಣೆಗೆ ಅವರು ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಆಯ್ಕೆ ಮಾಡಿಕೊಂಡರು. ಪಾಶ್ಚಿಮಾತ್ಯ ಸಂಸ್ಕೃತಿಯ 3 ಯಾಂತ್ರಿಕ ಕಾಲಘಟ್ಟಗಳನ್ನು ಗುರುತಿಸಿದರು. ಅವು ಯಾವುವೆಂದರೆ 1) ಪುನರುಜ್ಜೀವನ 2) ಆಧುನಿಕ ಪೂರ್ವಯುಗ 3) ಆಧುನಿಕೋತ್ತರ ಯುಗ ಎಂಬುದಾಗಿ ವಿಂಗಡಿಸಿಕೊಂಡರು. ಪ್ರತಿ ಕಾಲಘಟ್ಟದಲ್ಲಿಯೇ ಜ್ಞಾನವನ್ನು ಭಾಷೆಯ ಮೂಲಕ ಸಂಘಟಿಸಿದ ಬಗೆಯನ್ನು ಚರ್ಚಿಸಿದರು. ಇದನ್ನು ಅಧ್ಯಯನ ಮಾಡುವುದರ ಮೂಲಕ ಸಂಸ್ಕೃತಿಯ ಭೂತ ವರ್ತಮಾನದ ಸಂಕೇತಗಳನ್ನು ಪತ್ತೆಹಚ್ಚಲು ಪ್ರಯತ್ನಿಸಿದರು. ಈ ಸಂದರ್ಭದಲ್ಲಿ ಆರ್ಕಾಲಜಿ ಎಂಬ ಪದವನ್ನು ಬಳಸಿದರು. ಆರ್ಕ್ಯಾಲಜಿ ಎಂದರೆ ಪುರಾತತ್ವ ಶಾಸ್ತ್ರ ಆದರೆ ಪೊಕೋರವರು ಅದನ್ನು ಮತ್ತಷ್ಟು ವಿಸ್ತಾರವಾದ ಅರ್ಥದಲ್ಲಿ ಬಳಸಿದರು. ಜ್ಞಾನದ ವಿವಿಧ ಮಜಲುಗಳನ್ನು ಉತ್ಕಲನ ಮಾಡಿ ಸುಪ್ತವಾಗಿ ಸಂಘಟಿಸಲ್ಪಟ್ಟಿರುವ ಪ್ರಜ್ಞೆಯ ಅಥವಾ ಜ್ಞಾನದ ಮಜಲುಗಳನ್ನು ಪರೀಕ್ಷಿಸುವುದಾಗಿತ್ತು. ಉದಾ : ವೈದ್ಯವಿಜ್ಞಾನದ ಜ್ಞಾನ ಮತ್ತು ಅದರ ಆಚರಣೆಯಲ್ಲಿರುವ ವಿವಿಧ ಹಂತಗಳನ್ನು ಅರ್ಥೈಸುವುದು. ಅದೇ ಸಂದರ್ಭದಲ್ಲಿ ಎಪಿಸ್ಟಿನ್ ಎಂಬ ಪದವನ್ನು ಪ್ಲಕೋ ಬಳಸಿದರು. ಆದರೆ ತನ್ನನ್ನು ತಾನೇ ಒಂದುಜ್ಞಾನವಾಗಿ ಸಂಘಟಿಸಿಕೊಳ್ಳುವ ಜಾಲ. ಹೀಗೆ ಭಾಷೆಯು ಯಾವ

ಯಾವ ಕಾಲದಲ್ಲಿ ಸಂಕೇತಗಳ ಮೂಲಕ ತನ್ನನ್ನು ತಾನು ಸಂಘಟಿಸುತ್ತದೆ ಎಂದು ಪೋಕೋ ತಿಳಿಸಿಕೊಡುತ್ತಾರೆ.

ಫೊಕೋರವರು ಭಾಷೆಯು ಪ್ರಾಣಿಗಳನ್ನು ಪ್ರಬೇದಗಳನ್ನಾಗಿ ವರ್ಗೀಕರಿಸಿತು. ಕೆಲವು ಪ್ರಾಣಿಗಳನ್ನು ವೈದ್ಯವಿಜ್ಞಾನದ ಪ್ರಯೋಗಗಳಿಗೆ ಒಡ್ಡಬಹುದೆಂದು ತಿಳಿಸಿತು. ಭಾಷೆಯ ನಿರೂಪಣೆಯ ಪ್ರಕಾರ ಜ್ಞಾನ ವ್ಯವಸ್ಥೆಯು ನಿರ್ಧರಿಸಲ್ಪಡುತ್ತದೆ ಎಂದಾಯಿತು. ಸಾರಾಂಶದಲ್ಲಿ ಹೇಳುವುದಾದರೆ ಭಾಷೆಯು ತನ್ನಷ್ಟಕ್ಕೆ ತಾನೇ ಯಾವುದೇ ವಿಚಾರವನ್ನು ಸಂಘಟಿಸುವ ಪ್ರತಿನಿಧಿಸುವ ಪರಮಾಧಿಕಾರವನ್ನು ಹೊಂದಿರುವುದಿಲ್ಲ. ಅದು ಹೀಗಾಗಲೇ ಸಂಘಟಿತವಾಗಿರುವ ಜ್ಞಾನವನ್ನು ತಲುಪಿಸುವ ಮಾರ್ಗವಾಗಿಯಷ್ಟೇ ಕೆಲಸ ಮಾಡುತ್ತದೆ. ಆದುದರಿಂದ ಭಾಷೆಯನ್ನು ಹೀಗೆ ಬಳಸಬೇಕೆಂಬ ಪ್ರಶ್ನೆಯು ಹಾಗೆಯೇ ಉಳಿಯುತ್ತದೆ. ಇದೇ ಸೂತ್ರವು ತರ್ಕಬದ್ಧವೆಂದು ಹೇಳಿಕೊಳ್ಳಲಾಗುವ ಸಮಾಜವಿಜ್ಞಾನಗಳಿಗೂ ಅನ್ವಯಿಸುತ್ತದೆ. ಏಕೆಂದರೆ ಈ ಸಮಾಜ ವಿಜ್ಞಾನಗಳು ಕೂಡ ಭಾಷೆಯಿಂದಲೇ ಸಂಘಟಿಸಲ್ಪಟ್ಟಿವೆ. ಮನಃಶಾಸ್ತ್ರ ಸಮಾಜಶಾಸ್ತ್ರ ಸಂಸ್ಕೃತಿ ಚರಿತ್ರೆ ಮೊದಲಾದವು ಭಾಷೆಯ ಮೂಲಕ ಜ್ಞಾನವನ್ನು ಸಂಘಟಿಸಿವೆ. ಈ ಸಂಘಟಿತ ಜ್ಞಾನವು ಅನುಭವ ಜನ್ಯ ಆಧಾರಿತವಾದುದು ಅದು ಆ ಮೂಲದಿಂದಲೇ ಪ್ರತಿನಿಧಿಸಲ್ಪಡುತ್ತದೆ. ಹಾಗೆ ಪ್ರತಿನಿಧಿಸಲ್ಪಡುವ ಜ್ಞಾನವು ಅಧಿಕಾರದ ರೂಪವನ್ನು ಪಡೆಯುವ ಸಾಧ್ಯತೆ ಇದೆ. ಈ ಮೂಲಕ ಫೋಕೋ ಬಂಡವಾಳಶಹಿಯೂ ಜ್ಞಾನವನ್ನು ಸಂಘಟಿಸುವ ವಿಧಾನವನ್ನು ಪರೋಕ್ಷವಾಗಿ ಪೊಕೋ ವಿವರಿಸಿದರು.

ಪೊಕೋರವರು ತಮ್ಮ ಡಿಸಿಪ್ಲಿನ್ ಅಂಡ್ ಪರಿಕಪ್ ದರ್ಬತ್ ಆಫ್ ದಿ ಪ್ರಿಜನ್ ಮನುಷ್ಯನ ಮನಸ್ಸು ಮತ್ತು ದೇಹವು ಹೇಗೆ ರಾಜಕೀಯ, ವೈಜ್ಞಾನಿಕ ನ್ಯಾಯಾಧಿಕರಣದ ಅಧಿಕಾರಕ್ಕೆ ಒಳಪಡುತ್ತದೆ ಎಂಬುದನ್ನು ಅನ್ವೇಷಿಸುತ್ತದೆ. ಪೊಕೋರವರ ಪ್ರಕಾರ ಯಾವುದೇ ಅಧಿಕಾರದ ಸಂಬಂಧವು ತಕ್ಷಣವೇ ಮನುಷ್ಯನ ದೇಹದ ಮೇಲೆ ಹತೋಟಿಯನ್ನು ಪಡೆಯುತ್ತದೆ. ಅದರ ಮೇಲೆ ಬಂಡವಾಳ ಹೂಡಲಾಗುತ್ತದೆ. ದೇಹವನ್ನು ಪಳಗಿಸಲಾಗುತ್ತದೆ ತರಬೇತಿ ನೀಡಲಾಗುತ್ತದೆ. ಗುರಿಯನ್ನು ಮುಟ್ಟಲು ಪ್ರೇರೇಪಿಸಲಾಗುತ್ತದೆ. ಇದನ್ನು ಅವರು ಒಭಿಡಿಅಖಿಥಿಭಿ ಎಂದು ಕರೆಯಲಾಗುತ್ತದೆ. ಅಂದರೆ ಸೂಕ್ಷ್ಮವಾಗಿ ಪ್ರತಿಯೊಂದು ದೇಹದ ಮೇಲೆ ಅಧಿಕಾರವು ಚಲಾಯಿಸಲ್ಪಡುವ ಬಗೆಯನ್ನು ಪೊಕೋ ಅನ್ವೇಷಿಸುತ್ತಾರೆ. ಉದಾ : ಅವರು ಸಾ॥ ಸಂಸ್ಥೆಗಳಾದ ಜೈಲು, ಫ್ಯಾಕ್ಟರಿ, ಆಸ್ಪತ್ರೆ, ಶಾಲೆ ಮೊದಲಾದವುಗಳನ್ನು ಜೈಲುಗಳೆಂದು ಪರಿಗಣಿಸುತ್ತಾರೆ. ಇಲ್ಲಿ ಮನುಷ್ಯನನ್ನು ಶಿಸ್ತಿಗೆ ಒಳಪಡಿಸಿ ಶಿಕ್ಷಿಸಲಾಗುತ್ತದೆ. ದೇಹವನ್ನು ಶಿಸ್ತಿಗೆ ಒಳಪಡಿಸುವಾಗ ಯಂತ್ರದಂತೆ ಪರಿಗಣಿಸಲಾಗುತ್ತದೆ. ಉದಾ : ಸೈನಿಕರು ಇದೇ ರೀತಿಯಾಗಿ ನಡೆಯಲು ಪ್ರಯತ್ನಿಸುತ್ತಾರೆ. ಶಾಲಾ ಮಕ್ಕಳು ಸರಿಯಾಗಿ ಕುಳಿತುಕೊಳ್ಳುವುದು ಬರೆಯುವುದು ಸರಿಯಾದ ವೇಳಾಪಟ್ಟಿಯನ್ನು ಅನುಸರಿಸುವುದು ಮೊದಲಾದ ಶಿಸ್ತಿಗೆ ಒಳಪಟ್ಟು ಅದನ್ನು ಮೀರಿದರೆ ಶಿಕ್ಷೆಗೆ ಒಳಪಡುತ್ತಾರೆ. ಅಂದರೆ ಮಾನವನ ಮನಸ್ಸು ಅಥವಾ ಆತ್ಮಮರೆಯಾಗಿ ನಿರ್ಜೀವ ದೇಹವಾಗಿ ಉಳಿಯುತ್ತಾನೆ. ಈ ದೇಹವನ್ನು ಕಣ್‌ಗಾವಲು ಕಾಯಲಾಗುತ್ತದೆ. ಇದಕ್ಕೆ ಪೊಕೋರವರು ಕಾವಲುಗೊಪ್ಪಕ ಎಂಬ ಕಲ್ಪನೆಯನ್ನು ಬಳಸಿಕೊಂಡಿದ್ದಾರೆ. ಯಾವುದೇ ಕಾರಾಗೃಹದ ಮಧ್ಯಭಾಗದಲ್ಲಿ ಅತಿ ಎತ್ತರವಾದ ಕಾವಲು ಗೋಪುರವಿರುತ್ತದೆ. ಈ ಕಾವಲು ಗೋಪುರದ ಮೂಲಕ ಪ್ರತಿಯೊಬ್ಬರ ಚಲನವಲನದ ಮೇಲೆ ನಿಗಾ ಇಡಲಾಗುತ್ತದೆ. ಇದರ ಮೂಲಕ ಪ್ರತಿಯೊಬ್ಬ ಖೈದಿಯ ಮೇಲೆ ಅಧಿಕಾರ ಚಲಾಯಿಸಲಾಗುತ್ತದೆ. ಹಾಗೆಯೇ ಇಡೀ ಸಮಾಜ ಕಾರಾಗೃಹದಂತೆ ಇದ್ದು ಶಾಲಾ ಕಾಲೇಜುಗಳು, ಆಸ್ಪತ್ರೆಗಳು ಕಾರಾಗೃಹವನ್ನು ಪ್ರತಿನಿಧಿಸುತ್ತವೆ. ಅಂದರೆ ಪ್ರತಿಯೊಬ್ಬರನ್ನು ನಿಯಂತ್ರಿಸಲಾಗುತ್ತದೆ. ಈ ನಿಯಂತ್ರಣಕ್ಕೆ ಜ್ಞಾನವನ್ನು ಬಳಸಿಕೊಳ್ಳಲಾಗುತ್ತದೆ. ಉದಾ: ಅಪರಾಧಿ ಎಂದು ಕರೆಯಲಾಗುವ ವ್ಯಕ್ತಿಯೊಬ್ಬನನ್ನು ಬಂಧಿಸಲಾಗುತ್ತದೆ. ಬಂಧಿಸಿದ ನಂತರ ನ್ಯಾಯಾಲಯಕ್ಕೆ ಕರೆದೊಯ್ಯಲಾಗುತ್ತದೆ. ನ್ಯಾಯಾಲಯದಲ್ಲಿ ಅವನ ಅಪರಾಧಕ್ಕೆ ತಕ್ಕ ಪ್ರಮಾಣದ ಶಿಕ್ಷೆಯನ್ನು ನೀಡುತ್ತಾರೆ. ಇದೆಲ್ಲವನ್ನು ಜ್ಞಾನವನ್ನು ಸಂಘಟಿಸುವುದರ ಮೂಲಕ ನಿರ್ವಹಿಸಲಾಗುತ್ತದೆ. ಬೇರೆ ಬೇರೆ ಹಂತದಲ್ಲಿ ಬೇರೆ ಬೃವಿಯ ರೀತಿಯ ಜ್ಞಾನವು ಕಾರ್ಯನಿರ್ವಹಿಸುತ್ತದೆ. ಹೀಗೆ ಕಾರ್ಯನಿರ್ವಹಿಸುವುದರಿಂದ ಅಧಿಕಾರವಾಗಿ ಪರಿವರ್ತನೆಯಾಗುತ್ತದೆ. ನ್ಯಾಯಾಲಯದ ಕಾನೂನುಗಳು ಜೈಲಿನ ನಿಯಮಗಳು ಇವೆಲ್ಲವೂ ಜ್ಞಾನದ ಈ ಅಧಿಕಾರದ ರೂಪವಾಗಿ ಮಾರ್ಪಡುತ್ತದೆ. ಅಂತಿಮವಾಗಿ ಜ್ಞಾನವೇ ಅಧಿಕಾರವಾಗುತ್ತದೆ. ಈ ಪೊಕೋರವರ ಈ ಕೃತಿಯು ಸುಮಾರು ಅನೇಕ ನೈತಿಕವಾದಿಗಳ ಚಿಂತನೆಯ ಬುಡವನ್ನು ಅಲುಗಾಡಿಸಿತು. ಹಾಗೆಯೇ ಅನೇಕರ ಮೆಚ್ಚುಗೆಗೂ ಪಾತ್ರವಾಯಿತು. ಕೆಲವರಿಗಂತು ಪೊಕೋ ನಮಗೆ ಆಧುನಿಕತೆಯ ಮತ್ತು ಪುನರುಜ್ಜೀವನದ ಆಲೋಚನೆಯಿಂದ ಸ್ವತಂತ್ರಗೊಳಿಸುತ್ತಿದ್ದಾರೆ. ಎಂಬ ಮೆಚ್ಚುಗೆಯನ್ನು ಸೂಚಿಸುತ್ತಿದ್ದರು.

ಪೊಕೋರವರ ಮತ್ತೊಂದು ಪುಸ್ತಕವೆಂದರೆ ಹಿಸ್ಟರಿ ಆಫ್ ಸೆಕ್ಯೂಯಲಿಟಿ ಈ ಪುಸ್ತಕವು 3 ಸಂಪುಟಗಳಲ್ಲಿ ಪ್ರಕಟವಾಯಿತು. ಅವರು ಈ ಕೃತಿಯಲ್ಲಿ ಜನರನ್ನು ಲೈಂಗಿಕವಾಗಿ ಏಕೆ ದಮನ ಮಾಡಲಾಗುತ್ತದೆ ಮತ್ತು ಮುಚ್ಚಿಡಲಾಗುತ್ತದೆ ಆದರೂ ಕೂಡ ಜನ ಸದಾ ಲೈಂಗಿಕತೆಯ ಬಗ್ಗೆ ಏಕೆ ಆಲೋಚಿಸುತ್ತಾರೆ ಎಂಬುದನ್ನು ಅವರು ಅನ್ವೇಷಿಸಿದರು. ಪಾಶ್ಚಿಮಾತ್ಯ ಸಂಸ್ಕೃತಿಯ ವಿವಿಧ ಕಾಲಘಟ್ಟಗಳಲ್ಲಿ ಲೈಂಗಿಕತೆಯು ನೈತಿಕ ಪ್ರಶ್ನೆಯಾಗಿ ಮಾರ್ಪಾಟ್ಟು ಜನಸಂಖ್ಯೆಯನ್ನು ನಿಯಂತ್ರಿಸುವ ಸಾಧನವಾಗಿ ಬೆಳೆದುಬಂದ ಬಗೆಯನ್ನು ಅನಾವರಣ ಮಾಡುತ್ತಾರೆ. ಇದನ್ನು ಅವರು ಬಯೋ ಪಾಲಿಟಿಕ್ಸ್ ಎಂದು ಕರೆಯುತ್ತಾರೆ. ಲೈಂಗಿಕತೆಯನ್ನು ನಿರೂಪಿಸುವಾಗ ಮನಃಶಾಸ್ತ್ರ ಸಮಾಜಶಾಸ್ತ್ರ, ವೈದ್ಯಶಾಸ್ತ್ರಗಳು ಪ್ರಭುತ್ವಕ್ಕೆ ಅನುಕೂಲಿಕವಾದ ವ್ಯಾಖ್ಯಾನವನ್ನು ನೀಡುವುದನ್ನು ಗುರ್ತಿಸುತ್ತಾರೆ. ಕ್ರಿಶ್ಚಿಯನ್ ಧರ್ಮವು ಲೈಂಗಿಕತೆ ಮತ್ತು ಸತ್ಯವನ್ನು ತಳುಕುಹಾಕಿ ಜನರ ಮೇಲೆ ಧಾರ್ಮಿಕ ಅಧಿಕಾರವನ್ನು ಚಲಾಯಿಸುವುದನ್ನು ನಿರೂಪಿಸಿದ್ದಾರೆ. ವಿವಾಹ ಎಂಬುದು ಕೇವಲ ಲೈಂಗಿಕ ಸಂಬಂಧವಾಗಿರದೇ ಅದೊಂದು ಆರ್ಥಿಕ ಸಂಬಂಧವು ಆಗಿರುವುದನ್ನು ತಿಳಿಸುತ್ತಾರೆ.

ಹೀಗೆ ಫೊಕೋ ತಮ್ಮ ಪ್ರತಿ ಕೃತಿಯಲ್ಲಿಯೂ ಅಧಿಕಾರದ ಜ್ಞಾನಕ್ಕಿರುವ ಸಂಬಂಧವನ್ನು ಪರಿಶೀಲಿಸಿದರು. ಜ್ಞಾನವು ಅಧಿಕಾರದ ಮೂಲಕ ಸಂಘಟಿತವಾಗಿ ಜನರನ್ನು ಧಮನಿಸುವ ಸಾಧನವಾಗಿರುವ ಬಗೆಯನ್ನು ತಿಳಿಸಿಕೊಟ್ಟರು. ಪೊಕೋರವರ ಕೃತಿಗಳು ಮತ್ತು ವಿಚಾರಗಳು ಬದುಕಿದ ಕಾಲ ಅನಂತರದಲ್ಲಿ ತೀವ್ರದ ಮೆಚ್ಚುಗೆ ಟೀಕೆಗೆ ಒಳಪಟ್ಟಿದೆ. ಅವರನ್ನು ಅರಾಜಕ ಜಗತ್ತನ್ನು ಸಮರ್ಥಿಸುವ ಅಪರಾಧ ಮತ್ತು ಮುಕ್ತ ಲೈಂಗಿಕತೆಯನ್ನು ಬೆಂಬಲಿಸುವ ತತ್ವಜ್ಞಾನಿ ಎಂದು ಕೆಲವರು ಆರೋಪಿಸುತ್ತಾರೆ. ಅವರನ್ನು ಮೆಚ್ಚುವವರು ಸತ್ಯವನ್ನು ಅಣುಅಣುವಾಗಿ ವಿಶ್ಲೇಷಿಸಿದ ಸಮಾಜವನ್ನು ತಲಸ್ಪರ್ಶಿಯಾಗಿ ಗ್ರಹಿಸಲು ನೆರವಾದ ಗೆಳೆಯ ಎಂದು ಭಾವಿಸುತ್ತಾರೆ.



ಇಂತಹ ಅಪೌಷ್ಟಿಕ ತಾಯಿಯ ಎದೆಯಲ್ಲಿ ಹಾಲು ಬರಲು ಹೇಗೆ ಸಾಧ್ಯ, ಈಗ ಹೇಳಿ "ಅಪೌಷ್ಟಿಕತೆ ಭಾರತ ಬಿಟ್ಟು ತೊಲಗು" ಈ ಘೋಷಣೇಗಾದರೂ ಅರ್ಥವಿದೆಯೇ? ಅಥವಾ ಬಹುಸಂಖ್ಯಾತ ಬಡವರನ್ನು ಮೂರ್ಖರನ್ನಾಗಿಸುವ ತಂತ್ರವಿದೆಯೇ?

# ಅಪೌಷ್ಟಿಕತೆಯೆಂಬ ಮಹಾಮಾರಿಯೂ ಮತ್ತು ಜೀವರಹಿತ, ಅರ್ಥಹೀನ ಘೋಷಣೆಗಳೂ

⌘ ಎಚ್.ಮೋಹನ್ ಕುಮಾರ್

ಇತ್ತೀಚೆಗೆ ನೀವು ಟಿ.ವಿ. ಮತ್ತು ರೇಡಿಯೋಗಳಲ್ಲಿ ಬರುತ್ತಿರುವ ಹಿಂದಿ ಚಿತ್ರ ನಟ-ನಿರ್ಮಾಪಕ ಅಮೀರ್ ಖಾನ್ ಕಾಣಿಸಿಕೊಳ್ಳುವ ಒಂದು ಜಾಹಿರಾತನ್ನು ಗಮನಿಸಿರಬಹುದು. ಭಾರತ ದೇಶದ ಜನತೆಗೆ ಎರಡನೇ ಸ್ವಾತಂತ್ರ್ಯ ಸಮರಕ್ಕೆ ಕರೆಕೊಡುವ ಜಾಹಿರಾತು ಅದು. ಮೊದಲ ಬಾರಿಗೆ ಈ ಜಾಹೀರಾತು ನನ್ನ ಗಮನಕ್ಕೆ ಬಂದಾಗ ಕುತೂಹಲದಿಂದಲೇ ಗಮನಿಸಿದೆ. ಯಾಕೆಂದರೆ ಅಮೀರ್ ಖಾನ್ ಸಾಮಾಜಿಕ ಕಳಕಳಿ ಉಳ್ಳ ನಟ-ನಿರ್ಮಾಪಕ ಎಂದು ಜಾಹಿರಾಗಿರೋದರಿಂದ, ಇದರಲ್ಲೇನೋ ಇರಬೇಕು ಎಂಬ ಸಹಜ ಕುತೂಹಲ. ಈ ಜಾಹೀರಾತಿನಿಂದ ವೇದ್ಯವಾಗುವ ವಿಷಯವೇನೆಂದರೆ, ನಮ್ಮ ದೇಶದ ಪ್ರತಿ ಎರಡು ಮಕ್ಕಳಲ್ಲಿ ಒಂದು ಮಗು ಅಪೌಷ್ಟಿಕತೆಯಿಂದ ನರಳುತ್ತಿದೆ. (ನವಜಾತ ಶಿಶುವಿನಿಂದ ಐದು ವರ್ಷದ ಮಕ್ಕಳು). ಹೀಗೆ ಅಪೌಷ್ಟಿಕತೆಯಿಂದ ನರಳುವ ನಿತ್ರಾಣ ಮಕ್ಕಳು ಬಲಿಷ್ಠ ರಾಷ್ಟ್ರವನ್ನು ಕಟ್ಟಲು ಸಾಧ್ಯವಿಲ್ಲ. ಆದ್ದರಿಂದ ಇದು ದೇಶದ ಅಭಿವೃದ್ಧಿಗೆ ಮಾರಕ. ಈ ಕಾರಣದಿಂದ ಅಪೌಷ್ಟಿಕತೆ ಎನ್ನುವ ಜಾಡ್ಯವನ್ನು ತೊಲಗಿಸಬೇಕು. ಹಾಗಾಗಿ ಎಲ್ಲರೂ ಒಕ್ಕೊರಲಿನಿಂದ ಹೇಳಿ "ಅಪೌಷ್ಟಿಕತೆ ಭಾರತ ಬಿಟ್ಟು ತೊಲಗು".

ನನಗೆ ಅಚ್ಚರಿ ಎನಿಸಿದ್ದೇನೆಂದರೆ ಬ್ರಿಟೀಷರು ಭಾರತವನ್ನು ಆಳುತ್ತಿದ್ದಾಗ, ಅವರಿಂದ ನಮಗೆ ಸ್ವಾತಂತ್ರ್ಯ ಬೇಕಾಗಿತ್ತು. ಅವರ ಆಳ್ವಿಕೆ ಕೊನೆಯಾಗುವುದೆಂದರೆ ಅವರು ದೇಶ ಬಿಟ್ಟು ತೊಲಗಬೇಕು, ಹಾಗಾಗಿ "ಬ್ರಿಟೀಷರೇ ಭಾರತ ಬಿಟ್ಟು ತೊಲಗಿ" ಎನ್ನುವ ಘೋಷಣೆ ಸೂಕ್ತವಾಗಿತ್ತು. ಈ ಘೋಷಣೆಗೆ ಹೆದರಿ ಬ್ರಿಟೀಷರು ಸ್ವಾತಂತ್ರ ಘೋಷಿಸಿದರೋ ಇಲ್ಲವೋ ಅದು ಬೇರೆ ಮಾತು. ಆದರಿಲ್ಲಿ "ಅಪೌಷ್ಟಿಕತೆ ಭಾರತ ಬಿಟ್ಟು ತೊಲಗು" ಎಂದು ಘೋಷಣೆ ಕೂಗಿದರೆ, ತೊಲಗಬೇಕಾದ್ದು ತೊಲಗುವುದೇ? ಅಪೌಷ್ಟಿಕತೆ ದೇಶದ ಶತ್ರು ಎಂಬುದು ನಿಜ. ಆದರೆ ಅದೇನು ಒಂದು ರೋಗಾಣುವೇ? ಆ ರೋಗಾಣು ನಮ್ಮ ಘೋಷಣೆ ಕೇಳಿ ಕಂಬಿ ಕೀಳುವುದೇ? ಅಥವಾ ಆ ರೋಗಾಣು ಕೊಲ್ಲಲು ನಮ್ಮಲ್ಲಿ ಮದ್ದಿಲ್ಲವೇ? ಮದ್ದಿರುವುದೇ ಆದರೆ, ಸದ್ದಿಲ್ಲದೆ ಮದ್ದು ಕೊಡಿ, ರೋಗಾಣು ಸಾಯುತ್ತದೆ, ರೋಗ ತೊಲಗುತ್ತದೆ. ಅದನ್ನು ಬಿಟ್ಟು ಈ ಘೋಷಣೆ ಯಾಕೆ? ಅಪೌಷ್ಟಿಕತೆಯನ್ನು ನಿವಾರಿಸಲು ಸಾರ್ವಜನಿಕರ ಪಾತ್ರವೇನಿದೆ? ಹೀಗೆ ಹತ್ತಾರು ಪ್ರಶ್ನೆಗಳು ತಲೆಯೊಳಗೆ ಸುಳಿದಾಡಿ ಗೊಂದಲವಾಗುತ್ತಿದೆ. ಇದರ ಮರ್ಮ ಭೇದಿಸುವುದು ಸೂಕ್ತ ಎಂದು ಅಧ್ಯಯನಕ್ಕೆ ಕುಳಿತೆ.

ಅಪೌಷ್ಟಿಕತೆ ಎಂದರೆ ದಿನದಲ್ಲಿ ಒಂದೊತ್ತು ಕನಿಷ್ಠ ಒಂದಿಷ್ಟು ಉಪ್ಪು ಹಾಕಿದ ಒಂದು ಹಿಡಿ ಅನ್ನ ಇಲ್ಲದೆ, ತಾಯಿಯ ಎದೆಯಲ್ಲಿ ದಿನಕ್ಕೆ ನಾಲ್ಕು ಔನ್ಸ್‌ನಷ್ಟು ಹಾಲಿಲ್ಲದೆ, ಒಂದು ಟೀ ಕಪ್ಪಿನಷ್ಟು ಹಾಲಿಲ್ಲದೆ, ಒಂದು ಮೊಟ್ಟೆ ಇಲ್ಲದೆ, ಒಂದು ಸ್ಲೈಸ್ ಬ್ರೆಡ್ ಇಲ್ಲದೆ, ಒಂದು ಔನ್ಸ್ ಮಾಂಸವಿಲ್ಲದೆ, ಒಂದಿಷ್ಟು ಸೊಪ್ಪು ಸೆದೆ ಇಲ್ಲದೆ, ಒಂದು ಚೂರು ಪರಂಗಿ ಹಣ್ಣಿಲ್ಲದೆ, ಒಂದು ಸೀಬೇ ಕಾಯಿ ಇಲ್ಲದೆ, ಒಂದು ಬೆರಳು ಗಾತ್ರದ ಮೀನಿಲ್ಲದೆ, ದಿನಕ್ಕೆ ಕೇವಲ ನಾಲ್ಕು ತೊಗರಿ ಬೇಳೆ ಕಾಳು ಮಕ್ಕಳ ಹೊಟ್ಟೆಗೆ ಸೇರದೇ ಉಂಟಾದ ಸ್ಥಿತಿ. ಇದಿಷ್ಟರಲ್ಲಿ ಯಾವುದಾದರೂ ಒಂದು ಸಿಕ್ಕಿದರೂ ಮಕ್ಕಳು ಅಪೌಷ್ಟಿಕತೆಗೆ ತುತ್ತಾಗಲಾರವು. ಇದ್ಯಾವುದೂ ಸಿಗದ ಮಕ್ಕಳು ಮಣ್ಣು-ಮಸಿ, ಕಾಗದ, ಬಳಪ, ಸುಣ್ಣ ಹೀಗೆ ಕೈಗೆ ಸಿಕ್ಕಿದ್ದನ್ನು ತಿಂದು ಹೊಟ್ಟೆ ತುಂಬಾ ಜಂತುಹುಳು, ಲಾಡಿಹುಳು, ತುಂಬಿಕೊಂಡು ಒಂದು ದಿನ ಸದ್ದಿಲ್ಲದೆ ಇಹಲೋಕದ ಯಾತ್ರೆಯನ್ನು ಮುಗಿಸುತ್ತಿವೆ. "ಅಪೌಷ್ಟಿಕತೆ ಭಾರತ ಬಿಟ್ಟು ತೊಲಗು" ಎಂಬ ಘೋಷಣೆ ಹುಟ್ಟುವ ಮೊದಲೇ ಅದೆಷ್ಟೋ ಕೋಟಿ ಮಕ್ಕಳು ಭಾರತದ ನೆಲದಲ್ಲಿ ಮಣ್ಣಾಗಿವೆ. ಇಂದಿಗೂ ಪ್ರತಿ ಘಳಿಗೆಯೂ ಆಗುತ್ತಿದೆ. ಇನ್ನು ಈ ಘೋಷಣೆ ಯಾಕೆ? ಮೈ ಪರಚಿಕೊಳ್ಳೋಣ ಅನಿಸುತ್ತೆ.

ಇದು ಮಾಹಿತಿ ಯುಗ. ನೋಡೋಣವೆಂದು ವೆಬ್‌ಸೈಟ್ ತೆಗೆದೆ. ಪ್ರಪಂಚದ ಬಡರಾಷ್ಟ್ರಗಳಲ್ಲಿ ಅತ್ಯಂತ ಹೆಚ್ಚಿನ ಅಪೌಷ್ಟಿಕತೆ ಇರುವ ರಾಷ್ಟ್ರಗಳು

ಯಾವುದೆಂದು ಹುಡುಕಿದೆ. ನನ್ನ ತಲೆಯೊಳಗೆ ಇಥಿಯೋಪಿಯಾ, ಸೊಮಾಲಿಯಾಗಳೇ ತುಂಬಿಕೊಂಡಿದ್ದವು. ಅಚ್ಚರಿ ಕಾದಿತ್ತು. ಇಂಡಿಯಾದಲ್ಲಿನ ಅಪೌಷ್ಠಿಕತೆ ಶೇಕಡ 42, ಇಥಿಯೋಪಿಯಾ ಶೇಕಡ 32, ಸೊಮಾಲಿಯಾ 33, ಪಾಕಿಸ್ಥಾನ 30, ಚೀನಾ 16, ಆಫ್ಘಾನಿಸ್ತಾನ 30. ಎಷ್ಟೇ ಹುಡುಕಿದರೂ ಅಪೌಷ್ಠಿಕತೆಯಲ್ಲಿ ಇಂಡಿಯಾವನ್ನು ಮೀರಿಸುವ ಒಂದು ರಾಷ್ಟ್ರವೂ ಸಿಗಲಿಲ್ಲ. ಕಳೆದ ವರ್ಷ ಇಂಡಿಯಾದ ಮಕ್ಕಳ ಅಪೌಷ್ಠಿಕತೆ ಕುರಿತು ಒಂದು ಮಾಹಿತಿ ಸಂಗ್ರಹ ಕಾರ್ಯವನ್ನು ಒಂದು ಖಾಸಗೀ ಸಂಸ್ಥೆ ನಡೆಸಿತು. ಅದರ ವರದಿಯನ್ನು ಬಹಿರಂಗಗೊಳಿಸುತ್ತಾ, ಪ್ರಧಾನಮಂತ್ರಿ ಡಾ॥ ಮನಮೋಹನ್ ಸಿಂಗ್ ರವರು, ಶೇಕಡ 42 ರಷ್ಟು ಪ್ರಮಾಣದ ಅಪೌಷ್ಠಿಕತೆ ಇಂಡಿಯಾದಲ್ಲಿರುವುದು ಒಂದು "ರಾಷ್ಟ್ರೀಯ ಅಪಮಾನ" ಎಂದು ನುಡಿದರು. ಅನ್ನದ ಕೊರತೆಯೇ ಅಪೌಷ್ಠಿಕತೆ ಎಂದ ಮೇಲೆ, ನಮ್ಮ ದೇಶದಲ್ಲಿ ಅಕ್ಕಿ ಮತ್ತು ಗೋದಿಯನ್ನು ಸಂಗ್ರಹಿಸಿ, ದಾಸ್ತಾನು ಮಾಡಿ ಸಾರ್ವಜನಿಕ ವಿತರಣೆ ಮೂಲಕ (ನ್ಯಾಯ ಬೆಲೆ ಅಂಗಡಿ) ವಿತರಿಸಲು ಸಾಕಷ್ಟು ದಾಸ್ತಾನಿಲ್ಲವೆ? ಫುಡ್ ಕಾರ್ಪೋರೇಷನ್ ಆಫ್ ಇಂಡಿಯಾದ ಕೇಂದ್ರೀಯ ಗೋದಾಮುಗಳಲ್ಲಿ 01.09.2012 ರ ವರದಿಯಂತೆ ಅಕ್ಕಿ 255.93, ಗೋಧಿ 461.60 ಮಿಲಿಯನ್ ಟನ್ ದಾಸ್ತಾನಿದೆ. ನೆರೆ ರಾಷ್ಟ್ರವಾದ ಆಫ್ಘಾನಿಸ್ಥಾನಕ್ಕೆ 2011 ರಲ್ಲಿ 2.5 ಲಕ್ಷ ಟನ್ ಗೋಧಿಯನ್ನು ನಮ್ಮ ರಾಷ್ಟ್ರ ದಾನ ನೀಡಿದೆ. ಇತ್ತೀಚೆಗೆ ಆಫ್ರಿಕಾ ಖಂಡದ ಯಮನ್ ರಾಷ್ಟ್ರಕ್ಕೆ ಅಷ್ಟು ಪ್ರಮಾಣದ ಗೋಧಿಯನ್ನು ದಾನವಾಗಿ ಕೊಟ್ಟಿದೆ. ವಿಪತ್ತಿನ ಕಾಲಕ್ಕೆ ಅಗತ್ಯವಿರುವ ದಾಸ್ತಾನಿನಲ್ಲಿ ಪ್ರತಿ ವರ್ಷ ಲಕ್ಷ ಲಕ್ಷ ಟನ್ ಅಕ್ಕಿ, ಗೋಧಿಗೆ ಹುಳ ಹುಪ್ಪಟೆ ಹತ್ತಿ ಹಾಳಾದದ್ದನ್ನು ಸಮುದ್ರಕ್ಕೆ ಬಿಸಾಡಲಾಗುತ್ತಿದೆ. ವಿಪತ್ತಿನ ಕಾಲಕ್ಕೆ ಬೇಕಾಗುವ ಗೋಧಿ ಅಕ್ಕಿಯ ಅಧಿಕ ಭಾಗವು ಪಂಜಾಬ್, ಹರಿಯಾಣ, ಮಧ್ಯಪ್ರದೇಶ, ಉತ್ತರ ಪ್ರದೇಶಗಳಿಂದ ಬರುತ್ತದೆ. ರೈತರಿಗೆ ಬೆಂಬಲ ಬೆಲೆ ನೀಡಿ ಇವುಗಳನ್ನು ಸಂಗ್ರಹಿಸಿಡಲಾಗಿದೆ. ಆದರೆ ಪ್ರತಿ ಐದು ವರ್ಷಗಳಿಗೊಮ್ಮೆ ಹುಳ ಹತ್ತಿ ಜೊಳ್ಳಾದ ಅಕ್ಕಿ-ಗೋಧಿಯನ್ನು ಸಮುದ್ರಕ್ಕೆ ಸುರಿಯದೆ ವಿಧಿ ಇಲ್ಲ. ಇದು ತಿಳಿದಿದ್ದರೂ ಸಹ ಭಾರತ ಸರ್ಕಾರ ತನ್ನ ಗೋದಾಮುಗಳಲ್ಲಿನ ಆಹಾರ ಧಾನ್ಯ ಕೆಡುವ ಮುಂಚೆ ನ್ಯಾಯಬೆಲೆ ಅಂಗಡಿಗಳಿಗೆ ಬಿಡುಗಡೆ ಮಾಡಿದರೆ ಕೇವಲ ಆರು ತಿಂಗಳಲ್ಲಿ ಮಕ್ಕಳಲ್ಲಿನ ಅಪೌಷ್ಠಿಕತೆ ಇಲ್ಲವಾಗುತ್ತದೆ. ಆದರೆ ಮಾಡುತ್ತಿರುವುದೇನು. ಕಳೆದ ವರ್ಷಕ್ಕಿಂತ ಈ ವರ್ಷ ಅಕ್ಕಿ, ಗೋಧಿ, ರಾಗಿ ಮತ್ತು ಜೋಳದ ಬೆಲೆ ಶೇಕಡ 100 ರಷ್ಟು ಏರಿದೆ. ಮಾರುಕಟ್ಟೆಯಲ್ಲಿ ಖಾಸಗೀ ವರ್ತಕರು ಆಹಾರ ಧಾನ್ಯವನ್ನು ಅಕ್ರಮವಾಗಿ ದಾಸ್ತಾನಿಟ್ಟು /ಕೃತಕ ಕೊರತೆ ಸೃಷ್ಟಿ ಮಾಡಿ ಬೆಲೆ ಏರಿದೆ ಎಂದು ಪುಕಾರೆಬ್ಬಿಸಿ ಒಂದಕ್ಕೆರಡರಷ್ಟು ಬೆಲೆಗೆ ಮಾರಾಟ ಮಾಡುತ್ತಿವೆ. ದುಡಿದ್ದವರು ಕೊಂಡುಕೊಳ್ಳುತ್ತಾರೆ. ಇಲ್ಲದವರು ಹಸಿವಿನಿಂದ ಸಾಯುತ್ತಾರೆ. ಇಂತಹ ಸ್ಥಿತಿಯ ಮೊದಲ ಬಲಿಪಶುಗಳು ಮಕ್ಕಳು ಎಂಬ ಸತ್ಯ ನಮ್ಮ ಕರುಳು ಹಿಂಡುತ್ತದೆ.

ಕೇಂದ್ರ ಸರ್ಕಾರದ ಆಹಾರ ಗೋದಾಮುಗಳಲ್ಲಿರುವ ಧಾನ್ಯದಲ್ಲಿ ಒಂದೆರಡು ಲಕ್ಷ ಟನ್ ಆಹಾರ ಧಾನ್ಯವನ್ನು ಪಿ.ಡಿ.ಎಸ್. ನಲ್ಲಿ ವಿತರಿಸಿದರಷ್ಟೇ ಸಾಕು ಆಹಾರಧಾನ್ಯದ ಬೆಲೆಯನ್ನು ನಿಯಂತ್ರಕ್ಕೆ ತರಬಹುದು. ಇದರ ಅರಿವು ಕೇಂದ್ರ ಸರ್ಕಾರಕ್ಕೆ ಇಲ್ಲ ಎಂದರೆ ನಾವು ಮುಠ್ಠಾಳರಾಗುತ್ತೇವೆ, ಖಂಡಿತ ಇದೆ, ಆದರೆ ಇವರ ಉದ್ದೇಶ ಸಮರ್ಥವಾಗಬೇಕು ಅಷ್ಟೆ. ವರ್ತಕರು ದಿಢೀರ್ ಶ್ರೀಮಂತರಾಗಲು ಸರ್ಕಾರಕ್ಕೆ ಕಾಣಿಕೆ ಸಲ್ಲಿಸಿ, ಪಿ.ಡಿ.ಎಸ್. ಮೂಲಕ ಹೆಚ್ಚಿನ ಆಹಾರ ಧಾನ್ಯ ಬಿಡುಗಡೆ ಗೊಳ್ಳದಂತೆ ಮಾಡುತ್ತಾರೆ. ಒಂದೆರಡು ದಿನಗಳಲ್ಲಿ ಆಹಾರಧಾನ್ಯದ ಕೊರತೆ ಸೃಷ್ಟಿ ಮಾಡಿ ದಿಢೀರ್ ಬೆಲೆ ಏರಿಸಿ ತಮ್ಮ ಅಕ್ರಮ ದಾಸ್ತಾನಿನಿಂದ ಧಾನ್ಯವನ್ನು ಮಾರಾಟಕ್ಕೆ ಬಿಡುತ್ತಾರೆ. ನಿನ್ನೆ ಲಕ್ಷಾಧಿಪತಿಯಾಗಿದ್ದವನು ಇಂದು ಕೋಟ್ಯಾಧಿಪತಿ ಆಗುತ್ತಾನೆ. ನೀವೂ ಕೋಟ್ಯಾಧಿಪತಿಯಾಗಲು ಟಿ.ವಿ.ಗಳಲ್ಲಿ "ಕೌನ್ ಬನೇಗಾ ಕರೋಡ್‌ಪತಿ" "ಕನ್ನಡದ ಕೋಟ್ಯಾಧಿಪತಿ" ಕಾರ್ಯಕ್ರಮಗಳನ್ನು ಬಿತ್ತರಿಸಿ, ನೀವೂ ಕೋಟ್ಯಾಧಿಪತಿ ಆಗುವ ಕಸರತ್ತು ಮಾಡುವಂತೆ ಪ್ರೇರೇಪಿಸುತ್ತಾರೆ. ತಾವು ಮಾತ್ರ ತಣ್ಣಗೆ ಸಿರಿವಂತರಾಗುತ್ತಲೇ ಇರುತ್ತಾರೆ.

ಹೀಗೆ ಸಿರಿವಂತರಾಗಲು ಹೊರಟ ಭಾರತೀಯರು ಪ್ರಪಂಚದ 100 ಜನ ಅತ್ಯಂತ ಸಿರಿವಂತರ ಪಟ್ಟಿಯಲ್ಲಿ ಇಂದು ಒಂದಷ್ಟು ಜನ ಕಾಣಸಿಗುತ್ತಾರೆ. ಇದನ್ನೇ ನಮ್ಮ ರಾಷ್ಟ್ರ ನಾಯಕರು ಅಭಿವೃದ್ಧಿ ಎಂದೂ ಕರೆಯುತ್ತಾರೆ. ದೇಶದ ಆರ್ಥಿಕ ಅಭಿವೃದ್ಧಿ ಶೇಕಡ 9 ರಷ್ಟಾಗಬೇಕಿತ್ತು. ಆದರೆ ಈ ವರ್ಷ ಕೇವಲ ಶೇಕಡ 8 ರಷ್ಟಾಗಿದೆ. ಮುಂದಿನ ವರ್ಷವಾದರೂ ಗುರಿ ಮುಟ್ಟುವ ಆಶಯ ಇದೆ ಎಂದು ದೇಶದ ಪ್ರಧಾನಿ ಮಾಧ್ಯಮಗಳಿಗೆ ಹೇಳುತ್ತಾರೆ. ನಾವು ಬೆಪ್ಪುತಕ್ಕಡಿಗಳಂತೆ ಸುದ್ದಿ ನೋಡಿಕೊಂಡು, ಓದಿಕೊಂಡು ತಣ್ಣಗಾಗುತ್ತೇವೆ.

ದಯವಿಟ್ಟು ಗಮನಿಸಿ, ಒಂದೆರಡು ವರ್ಷಗಳ ಹಿಂದೆ ಹಣ್ಣು ತರಕಾರಿಗಳು, ಕೇಜಿಯೊಂದಕ್ಕೆ 20 ರಿಂದ 30 ರೂಪಾಯಿಗೆ ಸಿಗುತ್ತಿತ್ತು. ಆಗ ಇಂದಿನಷ್ಟು ಹಣ್ಣು ತರಕಾರಿ ಅಂಗಡಿಗಳೂ ಇರಲಿಲ್ಲ. ಆದರೀಗ ಕೇಜಿಯೊಂದಕ್ಕೆ 50 ರಿಂದ 150 ರೂಪಾಯಿ ಆಗಿದೆ. ಬೀದಿ-ಬೀದಿಗಳಲ್ಲಿ ಹಣ್ಣು-ತರಕಾರಿ ಸಿಗುತ್ತದೆ. ಹಾಗಾದರೆ ನಮ್ಮ ರೈತರು ಯಥೇಚ್ಛವಾಗಿ ಬೆಳೆದಿದ್ದಾರೆಯೇ? ಖಂಡಿತಾ ಇಲ್ಲ! ಇವೆಲ್ಲಾ ಹೊರದೇಶಗಳಿಂದ ಬಂದವು. ಹೊರದೇಶದ ಸರಕು ಕನಿಷ್ಠ ಬೆಲೆಗೆ ಸಿಗುವುದುಂಟೆ? ಭಾರತದ ಗ್ರಾಮಾಂತರ ಪ್ರದೇಶದ ಜನ ಕೃಷಿಯನ್ನು ನಂಬಿ ಬದುಕುತ್ತಿದ್ದವರು ಮಳೆ ಇಲ್ಲದೆ, ಅಂತರ್ಜಲ ಬತ್ತಿ ಹೋಗಿ, ರಸಗೊಬ್ಬರ, ಕೀಟನಾಶಕ ಕೊಳ್ಳಲಾಗದೆ, ಸರ್ಕಾರದ ಸಹಕಾರ ಇಲ್ಲದೆ ಕೃಷಿಯನ್ನು ತ್ಯಜಿಸುತ್ತಿದ್ದಾರೆ. ಕೃಷಿ ಕಾರ್ಮಿಕ ನಗರಗಳಿಗೆ ವಲಸೆ ಹೋಗುತ್ತಿದ್ದಾನೆ. ಧೈರ್ಯವಿಲ್ಲದವ ಅಲ್ಲೇ ಸಾಯುತ್ತಾನೆ. ಅನ್ನಕ್ಕೂ ಗಂಜಿಗೂ ಗತಿ ಇಲ್ಲದೇ ಮಕ್ಕಳು ಸೊರಗುತ್ತವೆ. ಕಳೆದ ಅಕ್ಟೋಬರ್ ತಿಂಗಳಲ್ಲಿ ಡಾ॥ ಬಿನಾಯಕ್‌ಸೇನ್ ಬೆಂಗಳೂರಿಗೆ ಬಂದಿದ್ದರು. ಅವರು ಇಲ್ಲಿ ಮಾತನಾಡುತ್ತಾ ಒಬ್ಬ ಆರೋಗ್ಯವಂತ/ಪುಷ್ಠಿಕರ ಯುವಕ/ಯುವತಿಯ "ಬಾಡಿ ಮಾಸ್ ಇಂಡೆಕ್ಸ್" (ಃಒಐ) 18.5 ಇರಬೇಕು. ಆದರೆ ಇಂಡಿಯಾದ ಶೇಕಡ 36 ರಷ್ಟು ಯುವಕ/ಯುವತಿಯರಿಗೆ ಬಿ.ಎಂ.ಐ. 18.5 ಕ್ಕಿಂತ ಕಡಿಮೆ ಇದೆ. ನೀವಿನ್ನೂ ಮಕ್ಕಳ ಅಪೌಷ್ಠಿಕತೆಯ ಬಗ್ಗೆ ಮಾತನ್ನಾಡುತ್ತಿದ್ದೀರಿ. ಆದರೆ ಶೇಕಡ 36 ರಷ್ಟು ಯುವ ಸಮುದಾಯ (ವಯಸ್ಸು 18 ರಿಂದ 50) ಅಪೌಷ್ಠಿಕತೆಯಿಂದ ನರಳುತ್ತಿದೆ ಎಂದು ನುಡಿದರು. ಇಂತಹ ಅಪೌಷ್ಠಿಕ ತಾಯಿಯ ಎದೆಯಲ್ಲಿ ಹಾಲು ಬರಲು ಹೇಗೆ ಸಾಧ್ಯ, ಈಗ ಹೇಳಿ "ಅಪೌಷ್ಠಿಕತೆ ಭಾರತ ಬಿಟ್ಟು ತೊಲಗು" ಈ ಘೋಷಣೆಗಾದರೂ ಅರ್ಥವಿದೆಯೇ? ಅಥವಾ ಬಹುಸಂಖ್ಯಾತ ಬಡವರನ್ನು ಮೂರ್ಖರನ್ನಾಗಿಸುವ ತಂತ್ರವಿದೆಯೇ?

ಅಧಿಕಾರಕ್ಕೆ ಹತ್ತಿರವಾಗಿರುವವರನ್ನು ಸಿರಿವಂತರನ್ನಾಗಿಸಿ ಸಾಮಾನ್ಯ ಮತದಾರನ ದುಡಿಯುವ, ಉತ್ಪಾದಿಸುವ, ಕೊಳ್ಳುವ ಶಕ್ತಿಯನ್ನು ಕಸಿದುಕೊಂಡು ಸದ್ದಿಲ್ಲದೆ ರಕ್ತಹೀರುತ್ತಿರುವ ಮಾರುಕಟ್ಟೆ ಆರ್ಥಿಕ ವ್ಯವಸ್ಥೆಯಲ್ಲಿ ಜಾಹಿರಾತು ನೀಡಿ ಲಕ್ಷಾಂತರ ಹಣ ಮಾಡಿಕೊಳ್ಳುತ್ತಿರುವ ಅಮೀರ್ ಖಾನ್ "ನಿನ್ನ ಸಿರಿವಂತಿಕೆಯಲ್ಲಿ ನಮ್ಮ ಅಪೌಷ್ಠಿಕತೆ ಇದೆ, ನಮ್ಮ ಅಸಹಾಯಕತೆಯಿಂದ ನಿನಗೆ ಬೇಡಿಕೆ ಇದೆ" ಎಂದು ಕೂಗಿ ಹೇಳಿ.



# ಕಲಾಗ್ರಾಮದಲ್ಲಿ ಮದುಮಗಳು

ಃ ರುದ್ರೇಶ್ ಬಿ. ಅದರಂಗಿ

2010ರಲ್ಲಿ ಮೈಸೂರಿನ ರಂಗಾಯಣದಲ್ಲಿ ಪ್ರದರ್ಶಿಸಲಾದ 'ಮಲೆಗಳಲ್ಲಿ ಮದುಮಗಳು' 9 ಗಂಟೆಗಳ ಅಹೋರಾತ್ರಿ ರಂಗರೂಪ ಬೆಂಗಳೂರಿಗರಿಗೆ–ಸಾಹಿತ್ಯಾಸಕ್ತರಿಗೆ ಮತ್ತೊಮ್ಮೆ ನೋಡುವ ಅವಕಾಶವಾಯಿತು. ಬೆಂಗಳೂರಿನ ಕಲಾಗ್ರಾಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ಮಾಣ ಮಾಡಿದ 'ಮಲೆಗಳಲ್ಲಿ ಮದುಮಗಳು' ನಾಟಕ 2013ರ ಏಪ್ರಿಲ್ 18 ರಿಂದ ಜೂನ್ 3ರವರೆಗೆ 25 ಪ್ರದರ್ಶನಗಳನ್ನು ಕಂಡಿತು. ಮೈಸೂರಿನ ರಂಗಾಯಣದಲ್ಲಿ ಪ್ರಯೋಗಗೊಂಡ ನಾಟಕವನ್ನು ನಿರ್ದೇಶಿಸಿದ ಸಿ. ಬಸವಲಿಂಗಯ್ಯ ಅವರೇ ಇಲ್ಲಿಯೂ ನಿರ್ದೇಶಿಸಿದ್ದರು.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ರಂಗರೂಪದಲ್ಲಿ ಪ್ರದರ್ಶಿಸಬೇಕೆಂಬ ಆಲೋಚನೆ ಬಂದ ಮೇಲೆ ಬಸವಲಿಂಗಯ್ಯನವರು ಕೆ.ವೈ. ನಾರಾಯಣಸ್ವಾಮಿ ಅವರು ರಂಗಾಯಣದ ಕೃಷ್ಣಪ್ರಸಾದ್, ಬೆಂಗಳೂರಿನ ಪ್ರೊ. ಶಿವರಾಮಯ್ಯ ಹಾಗೂ ಡಾ. ಎಂ. ಬೈರೇಗೌಡ ಅವರನ್ನು ಮೈಸೂರಿಗೆ ಕರೆಸಿಕೊಂಡು ರಂಗರೂಪ ಪಠ್ಯದ ಬಗೆಗೆ ಚರ್ಚಿಸಿ ನಾಲ್ಕು ಭಾಗಗಳನ್ನಾಗಿ ಆಯ್ದುಕೊಂಡು ರಂಗಪಠ್ಯ ನಿರ್ಮಾಣದಲ್ಲಿ ತೊಡಗಿದರು. (ಇದು ನನ್ನೊಬ್ಬನಿಂದ ಆಗುವ ಕೆಲಸವಲ್ಲ ಅನಿಸಿತು. ಆಗ ಶಿವರಾಮಯ್ಯ ಬೈರೇಗೌಡ, ಕೃಷ್ಣಪ್ರಸಾದ್ ಜೊತೆಗೆ ಸೇರಿಕೊಂಡು ವರ್ಕ್‌ಶಾಪ್ ರೀತಿ ಕೆಲಸ ಮಾಡಿದೆವು. –ಕೆ.ವೈ.ಎನ್., ಯಾರು ಮುಖ್ಯರಲ್ಲ, ಪು. 23) ಈ ಸಂದರ್ಭದಲ್ಲಿ ಪರಸ್ಪರ ಚರ್ಚೆಯಾಗಿ ಅಂತಿಮವಾಗಿ ರಂಗಪಠ್ಯ ಸಿದ್ಧವಾಯಿತು. ಡಾ. ಎಂ. ಬೈರೇಗೌಡ ಅವರು ನಾಟಕಕ್ಕೆ ಬೇಕಾದ ಕೆಲವು ಹಾಡುಗಳನ್ನೂ ಸೇರಿಸಿದರು. (ಸುರುಡು ಮುನ್ನೂರು ಕೋಟಿ ದೇವದಂಡು ನಡುದೈತೆ... –ಡಾ. ಎಂ. ಬೈರೇಗೌಡ, ಸೋರೇಬುರುಡೆ, ಪು. 3) ಜಾನಪದ ವಿದ್ವಾಂಸರಾದ ಇವರು ಸಹಜವಾಗಿಯೇ ಅರ್ಜುನ ಜೋಗಿ, ಯಳವರು ಮುಂತಾದವರ ಪಾತ್ರಗಳಲ್ಲಿ ಇವರ ಶೈಲಿಯನ್ನು ಗಮನಿಸಬಹುದಾಗಿದೆ. ಪ್ರೊ. ಶಿವರಾಮಯ್ಯ ಅವರು ನಾಟಕವನ್ನು ರಂಗರೂಪಕ್ಕೆ ತರುವ ಸಂದರ್ಭದಲ್ಲಿ ಕೆ.ವೈ.ಎನ್. ಅವರ "ಬಾ, ಹುಲಿಕಲ್ ನೆತ್ತಿಗೆ!" ಆಹ್ವಾನಕ್ಕೆ ಓಗೊಟ್ಟು ಸಂಭಾಷಣೆಯ ರಚನೆಯಲ್ಲಿ ಶ್ರಮಿಸಿದರು.

ಮದುಮಗಳು ನಾಟಕದಲ್ಲಿ ಉಂಗುರವನ್ನು ಒಂದು ಪ್ರತಿಮೆಯನ್ನಾಗಿ ಬಳಸಿಕೊಂಡು ಹೆಣೆದಿರುವ ತಂತ್ರ ಮನೋಜ್ಞವಾಗಿದೆ. ಕೃಷ್ಣಪಂಥದವರು ಬಂದು ಉಂಗುರವನ್ನು ಅರ್ಜುನ ಜೋಗಿಗಳಿಗೆ ನೀಡುವುದರೊಂದಿಗೆ ಬಿಚ್ಚಿಕೊಳ್ಳುವ ನಾಟಕದ ಕಥಾವಸ್ತುವು ಮುಂದೆ ಸುಡುಗಾಡು ಸಿದ್ಧರು, ಹೆಳವರು, ಕೊರವಂಜಿಗಳು, ಹಾತಿಕಲಂಜರು ನಾಟಕದ ಕಥೆಯನ್ನು ಮುಂದುವರೆಸುತ್ತಾರೆ. ಹೀಗಾಗಿ ಮದುಮಗಳು ನಾಟಕದಲ್ಲಿ ಜಾನಪದದ ಆಯಾಮವೊಂದು ಲಭ್ಯವಾಗಿ ಕಾದಂಬರಿಯ ಮೂಲ ಆಶಯಕ್ಕೆ ಚ್ಯುತಿಬಾರದೆ ರಂಗರೂಪಕ್ಕೆ ಪೂರಕವಾಗಿ ಬಂದಿರುವುದು ನಾಟಕದ ಪ್ಲಸ್ ಪಾಯಿಂಟ್.

ಮೈಸೂರಿನ ರಂಗಾಯಣದಲ್ಲಿ ಪ್ರದರ್ಶನಗೊಂಡ ಸಂದರ್ಭದಲ್ಲಿ ಕರ್ನಾಟಕವನ್ನೊಳಗೊಂಡಂತೆ ನೆರೆಯ ರಾಜ್ಯದ ರಂಗಾಸಕ್ತರನ್ನು ಮದುಮಗಳು ಆಕರ್ಷಿಸಿತು. ನಾಟಕವನ್ನು ನೋಡುವ ಉತ್ಸಾಹ, ಪ್ರತಿ ದೃಶ್ಯವನ್ನು ನೋಡಿ ಆನಂದಿಸಿ, ಅನುಭವಿಸಿದ ಪ್ರೇಕ್ಷಕರು ಒಂದೆಡೆಯಾದರೆ, ಆ ನಾಟಕವನ್ನು ನೋಡಲಾಗಲಿಲ್ಲವಲ್ಲ ಎಂದು ಕೊರಗಿದವರೂ ಉಂಟು. ಅನುಭವಿ ರಂಗಾಯಣದ ಕಲಾವಿದರನ್ನೊಳಗೊಂಡು ಇತರ ಅತಿಥಿ ಕಲಾವಿದರನ್ನು ಒಟ್ಟುಗೂಡಿಸಿ ಒಟ್ಟು ಸುಮಾರು 70 ಕಲಾವಿದರು ಅಭಿನಯಿಸಿದರು. ರಂಗಾಣಯದ ಅನುಭವಿ ಕಲಾವಿದರೊಂದಿಗೆ ಸ್ವಾಮಿ–ಐತಾ, ಅಕ್ಷತಾ–ಪೀಂಚಲು, ದಾಕ್ಷಾಯಣಿ ಎಂ.–ತಿಮ್ಮಿ, ಸಲ್ಮಾ–ಚಿನ್ನಮ್ಮ, ಅನಿಲ್–ಹುಲಿಯ ಮೊದಲಾದ ಯುವಕಲಾವಿದರು ಪ್ರತಿಸ್ಪರ್ಧೆ ಒಡ್ಡಿದವರಂತೆ ಅಭಿನಯಿಸಿದರು. ಹೀಗಾಗಿ ಮೈಸೂರಿನ ರಂಗಾಯಣದಲ್ಲಿ ಪ್ರದರ್ಶನಗೊಂಡ ನಾಟಕವು ರಂಗಭೂಮಿಯಲ್ಲಿ ಒಂದು ಅವಿಸ್ಮರಣೀಯ ಪ್ರದರ್ಶನವಾಯಿತು. ನಾಟಕದ ಬಗೆಗೆ ನಾಡಿನಾದ್ಯಂತ ಕೆಲವು ಗಂಭೀರವಾದ ಚರ್ಚೆಯಾಯಿತು. ಅದರಲ್ಲಿ ಮುಖ್ಯವಾಗಿ ಮುಸ್ಲಿಮರ ಬಗೆಗೆ ಕೀಳಾಗಿ ಚಿತ್ರಿಸಲಾಗಿದೆ, ಕ್ರಿಶ್ಚಿಯನ್ ಮತಾಂತರದ ಬಗ್ಗೆ ಉತ್ಪ್ರೇಕ್ಷೆಯಿಂದ ಚಿತ್ರಿಸಲಾಗಿದೆ ಎಂಬ ಆಕ್ಷೇಪಣೆಗಳಲ್ಲದೆ, ಕಿ.ರಂ. ನಾಗರಾಜ ಅವರು ಕುವೆಂಪು ಅವರವೇ ಅಷ್ಟೊಂದು ಪದ್ಯಗಳಿರುವಾಗ ಮದುಮಗಳು ರಂಗರೂಪಕ್ಕೆ ಹೊಸದಾಗಿ ಪದ್ಯಗಳನ್ನು ಬರೆದದ್ದು ಸರಿಯೇ? ಎಂದು ಪ್ರಶ್ನಿಸಿದರು. ಸಂವಾದವಷ್ಟೇ ಅಲ್ಲದೆ ಈ ಸಂದರ್ಭದಲ್ಲಿ ಎಂ. ಬೈರೇಗೌಡ ಅವರು 'ಯಾರೂ ಮುಖ್ಯರಲ್ಲ...', ಗಣೇಶ ಅಮೀನಗಡ ಅವರು 'ಮೈಸೂರು ಮದುಮಗಳು' ಕೃತಿಗಳನ್ನು ಸಂಪಾದಿಸಿದರಲ್ಲದೆ, ಸಂಸ ಸುರೇಶ್ ಅವರು ಸಂಸ ಪತ್ರಿಕೆಯ 'ಮದುಮಗಳು ವಿಶೇಷಾಂಕ'ವನ್ನು ಪ್ರಕಟಿಸಿದರು. ನಾಡಿನೆಲ್ಲೆಡೆ ಪತ್ರಿಕೆಗಳಲ್ಲಿ ನಾಟಕದ ಬಗೆಗೆ ಚರ್ಚೆಯೂ ಆಯಿತು. ರಂಗಾಯಣದವರು ನಾಟಕವನ್ನು ಡಿವಿಡಿ ರೂಪದಲ್ಲಿಯೂ ಹೊರತಂದರು. ಈ ಬಗೆಗೂ ಕೆಲವು ಆಕ್ಷೇಪಣೆಗಳು ವ್ಯಕ್ತವಾದವು.

ಇದಾದ ಎರಡು ವರ್ಷಗಳ ಮೇಲೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಾಯೋಜಕತ್ವದಲ್ಲಿ ಸಿ. ಬಸವಲಿಂಗಯ್ಯನವರು ಬೆಂಗಳೂರಿನ ಜ್ಞಾನಭಾರತಿ ಆವರಣದಲ್ಲಿರುವ ಕಲಾಗ್ರಾಮದಲ್ಲಿ 'ಮಲೆಗಳಲ್ಲಿ ಮದುಮಗಳು' ನಾಟಕವನ್ನು ಮತ್ತೊಮ್ಮೆ ರಂಗರೂಪಕ್ಕೆ ತರುವ ಪ್ರಯತ್ನ ಮಾಡಿದರು.

ಮೈಸೂರಿನಲ್ಲಿ ಅಭಿನಯಿಸಿದ ಅತಿಥಿ ಕಲಾವಿದರನ್ನು ಸೇರಿಸಿಕೊಂಡು ಪುನಃ ಹೊಸ ಕಲಾವಿದರನ್ನು ಒಟ್ಟುಗೂಡಿಸಿ ಒಟ್ಟು ಎಪ್ಪತ್ತು ಕಲಾವಿದರ ತಂಡದೊಂದಿಗೆ ನಾಟಕದ ತಾಲೀಮನ್ನು ಪ್ರಾರಂಭಿಸಿದರು. ಜ್ಞಾನಭಾರತಿಯ ಆವರಣದಲ್ಲಿ ಇರುವ ವಿಶಾಲವಾದ ಕಲಾಗ್ರಾಮವನ್ನು ನಾಟಕಕ್ಕೆ ಪೂರಕವಾಗಿ



ನಾಲ್ಕು ರಂಗಗಳನ್ನಾಗಿ ವಿನ್ಯಾಸ ಮಾಡಲಾಯಿತು. ಶಶಿಧರ್ ಅಡಪ ಅವರು ಬೆಂಗಳೂರಿನ ಪ್ರದರ್ಶನಕ್ಕೆ ವಿನ್ಯಾಸ ಮಾಡಿದ್ದರು. ಅವರ ವಿನ್ಯಾಸ ಅವರಿಗೆ ಪ್ರಿಯವಾಗಬೇಕು. ಮೊದಲಿಗೆ ಕೆರೆಯ ರಂಗ ಹಾಗೆಯೇ ಕಚ್ಚಾ ರಂಗವಾಗಿತ್ತು. ಕೆರೆಯ ಕಟ್ಟೆಯ ಮಧ್ಯೆ ಅಲ್ಲಲ್ಲಿ ಅಡಿಕೆ ಮರಗಳನ್ನು ಕತ್ತರಿಸಿ ನೆಡಲಾಗಿತ್ತು. ಅವೆಲ್ಲವು ಸಾಕವ್ವನ ಜೋಪಡಿಯಂತೆ ವಿಕಾರವಾಗಿ ಒಣಗಿ ನಿಂತಿದ್ದವು. ಮೊದಲ ಪ್ರದರ್ಶನದಿಂದ ಕೊನೆಯ ಪ್ರದರ್ಶನದವರೆಗೂ ಅದೇ ಸ್ಥಿತಿ ಅವುಗಳಿಗೆ. ಇನ್ನು ಮೊದಲ ಪ್ರದರ್ಶನದಲ್ಲಿ ಕೆರೆಯಲ್ಲಿ ವರತೆಯಂತೆ ಒಂದಿಷ್ಟು ಬಗ್ಗಡದ ನೀರಿದ್ದರೆ ಕೊನೆಯ ಪ್ರದರ್ಶನದ ವೇಳೆಗಾಗಲೆ ಉತ್ತಮ ಮಳೆಯಾಗಿ ಕೆರೆಯಲ್ಲಿ ಸಾಕಷ್ಟು ನೀರು ತುಂಬಿ ಪ್ರದರ್ಶನಕ್ಕೆ ಕಷ್ಟವೆನಿಸುವಂತಿತ್ತು. ನಾಟಕದಲ್ಲಿ 60 ಡಿಗ್ರಿಯಿಂದ 180 ಡಿಗ್ರಿಯವರೆಗೆ ವಿಸ್ತಾರ ಎಂದು ಹೇಳಲಾಗಿತ್ತು. ಹಾಗೆಂದು ದೂರದಲ್ಲಿದ್ದ ಕೆರೆಯ ಏರಿಯನ್ನೆಲ್ಲ ಬಳಸಿಕೊಂಡಿದ್ದರಿಂದ ನಾಟಕಕ್ಕೆ ನಿರ್ದಿಷ್ಟವಾದ ವ್ಯಾಪ್ತಿ-ಕ್ಷೇತ್ರ ಅಲ್ಲಿರಲಿಲ್ಲ. ಇನ್ನುಳಿದಂತೆ ಸರ್ವೆ ಮರದ ಕಂಬಗಳಿಂದ ಅಟ್ಟಣಿಗೆಯನ್ನು ನಿರ್ಮಿಸಲಾಗಿತ್ತು. ಎರಡನೆಯ ಬಯಲು ರಂಗವಂತು ಅಸ್ಥಿಪಂಜರದಂತಿತ್ತು. ಒಣಗಿದ ಮರಗಳ ತುಂಡಿನಂತಿದ್ದ ಕಂಬಗಳು ತಮ್ಮ ಆಕಾರವನ್ನು ಕಳೆದುಕೊಂಡಿದ್ದವು. ಆಶ್ಚರ್ಯವೆಂದರೆ ಇದೇ ರಂಗದಲ್ಲಿ ನಾಟಕದ ಬಹಳ ಮುಖ್ಯವಾದ ದೃಶ್ಯವಾದ ಹುಲಿಕಲ್‌ನೆತ್ತಿ ಪ್ರದರ್ಶನವಾಗಿದ್ದು. ಮೂರನೆಯ ಬಿದಿರು ರಂಗ ಇರುವುದರಲ್ಲಿ ಉತ್ತಮವಾಗಿತ್ತು. ಇರುವ ಸ್ಥಳವನ್ನು ವಿಸ್ತರಿಸಲಾಗಿತ್ತು. ಅಂತಕ್ಕಶೆಟ್ಟಿಯ ಹೋಟೆಲ್, ಕ್ರಿಶ್ಚಿಯನ್ ಮಿಷನ್ ಸ್ಕೂಲ್, ಬಾವಿ, ಗೋಸಾಯಿ ದೃಶ್ಯಗಳು ನಾಟಕಕ್ಕೆ ಪೂರಕವಾಗಿ ಮೂಡಿಬಂದಿದ್ದವು. ನಾಲ್ಕನೆಯ ಹೊಂಗೆ ರಂಗದಲ್ಲಿ ಪೀಂಚಲು ಐತರ ಮನೆ, ವೆಂಕಟಪ್ಪ ನಾಯಕನ ಮನೆಗಳನ್ನು ನಿರ್ಮಿಸಲಾಗಿತ್ತು. ನಾಟಕದ ಕೊನೆಯ ಭಾಗವಾದ ತುಂಗಾನದಿಯ ದೃಶ್ಯವನ್ನು ಪೇಲವವಾಗಿ ವಿನ್ಯಾಸ ಮಾಡಲಾಗಿತ್ತು.

ನಾಟಕಕ್ಕೆ ಸುಮಾರು 40 ಹಾಡುಗಳನ್ನು ಬಳಸಿಕೊಳ್ಳಲಾಗಿತ್ತು. ಸಂಗೀತ ನಿರ್ದೇಶನ ಹಂಸಲೇಖ ಅವರದು. ಅವರಿಗೆ ರಂಗಭೂಮಿಗೂ ಸಿನಿಮಾಗೂ ಅಂತಹ ವ್ಯತ್ಯಾಸವೇ ಗೊತ್ತಿದ್ದಂತಿಲ್ಲ. ಹಾಗಾಗಿ ಸಿನಿಮಾಗಳಿಗೆ ಬಳಕೆಯಾಗುವ ಲಘು ಸಂಗೀತವನ್ನೇ ಇಲ್ಲಿನ ಹಾಡುಗಳಿಗೆ ಸಂಯೋಜನೆ ಮಾಡಿದ್ದರು. ಆದರೆ ಅದೃಷ್ಟಕ್ಕೆ ರಂಗಾಯಣದ ಚೀನಿ ಮಾಸ್ತರ್ ಸಂಗೀತ ನಿರ್ವಹಣೆ ಮಾಡಿದ್ದರಿಂದ ಹಾಡುಗಳ ಹೊರತಾಗಿ ಹಿನ್ನೆಲೆ ಸಂಗೀತ ರಂಗಸಂಗೀತವಾಗಿ ಮೂಡಿಬಂದಿತು. ಇನ್ನೊಂದು ವಿಚಿತ್ರವೆಂದರೆ ಮುದ್ರಿತ ಸಿ.ಡಿಯನ್ನು ನಾಟಕದಲ್ಲಿ ಬಳಕೆ ಮಾಡಿಕೊಂಡಿದ್ದು. ಆದರೆ ಕೆಲವು ಹಾಡುಗಳನ್ನಾದರು ಕಲಾವಿದರು ನೇರವಾಗಿ ಹಾಡಿದರೆಂಬುದು ಸಮಾಧಾನಕರ ಸಂಗತಿ. ಹಂಸಲೇಖ ಅವರು ಕೂಡಾ ಇದೇ ಸಂದರ್ಭದಲ್ಲಿ ಹಾಡಿನ ಸಿ.ಡಿಯನ್ನು ಹೊರತಂದಿದ್ದಾರೆ. ಅದು ಎಷ್ಟು ಪೇಲವವಾಗಿದೆ ಎಂದರೆ ಯಾರಾದರು ರಂಗಸಂಗೀತದ ಬಗ್ಗೆ ಆಸಕ್ತಿಯಿದ್ದವರು ಅದನ್ನು ಕೇಳಿದರೆ ಎಲ್ಲವನ್ನು ಮರೆಯಬೇಕಾಗುತ್ತದೆ. ನಾಟಕದಲ್ಲಿ ಸ್ವಾಮಿ, ಅಕ್ಷತಾ, ಶ್ರೀಕಂಠ, ಕೃಷ್ಣ ಚೈತನ್ಯ ಮುಂತಾದವರು ಹಿನ್ನೆಲೆಯಾಗಿ ಹಾಡಿ ರಂಗಸಂಗೀತಕ್ಕೆ ಜೀವ ತುಂಬಿದ್ದಾರೆ. ಆ ಹಾಡುಗಳು ನಾಟಕದ ಪ್ರಸಿದ್ಧಿಯ ಮುಖ್ಯ ಕಾರಣಗಳಲ್ಲಿ ಒಂದಾಗಿವೆ.

ಮೊದಲ ಪ್ರದರ್ಶನದಲ್ಲಿ ಪರೇಶ್‌ಕುಮಾರ್ ಬೆಳಕಿನ ಮೂಲಕ ಎಷ್ಟು ತೊಂದರೆ ಕೊಡಬಹುದೋ ಅಷ್ಟನ್ನೂ ನಾಟಕಕ್ಕೆ ಕೊಟ್ಟರು. ಇಲ್ಲ ಇನ್ನು ಸಹಿಸಲು ಸಾಧ್ಯವಿಲ್ಲ ಎಂದಮೇಲೆ ರವಿಮೋಹನ್ ಅವರು ಬೆಳಕಿನ ನಿರ್ವಹಣೆ ಮಾಡಿದರಾದರೂ ಪರಿಣಾಮಕಾರಿಯಾಗಿರಲಿಲ್ಲ. ಬೆಂಗಳೂರಿನಲ್ಲಿ ಪ್ರದರ್ಶನಗೊಂಡ ನಾಟಕವನ್ನು ನಾವೇನು ರಂಗಾಯಣದ ಕನ್ನಡಕವನ್ನಾಕಿಕೊಂಡು ನೋಡಬೇಕಿಲ್ಲ. ಹಾಗೆಂದು ನಿರಾಕರಿಸಲೂ ಸಾಧ್ಯವಿಲ್ಲ. ರಂಗಾಯಣ ಕಲಾವಿದರ ಅನುಭವ, ಅಚ್ಚುಕಟ್ಟುತನ, ಪಾತ್ರಕ್ಕೆ ಜೀವತುಂಬಿ ಪಾತ್ರವೇ ತಾವಾಗುವುದು ಪ್ರಶಂಸನೀಯವಾದುವು. ಮೈಸೂರಿನ ಪ್ರದರ್ಶನದಲ್ಲಿ ಅಭಿನಯಿಸಿದ ಸ್ವಾಮಿ, ಅನಿಲ್‌ಕುಮಾರ್, ಅಕ್ಷತಾ, ರೂಪ ಮೊದಲಾದವರು ಇಲ್ಲಿಯೂ ಅಭಿನಯಿಸಿದ್ದರಿಂದ ಹೊಸ ಕಲಾವಿದರ ಕೆಲವು ಕೊರತೆಗಳನ್ನು ಮರೆಮಾಚಿತು. ಆದರೆ ಬಹಳ ಮುಖ್ಯವಾಗಿ ಚರ್ಚಿಸಲೇಬೇಕಾದ ಸಂಗತಿಯೆಂದರೆ ನಾಟಕದ ಮುಖ್ಯ ಪಾತ್ರ ಗುತ್ತಿಯನ್ನು ಕೃಷ್ಣಕುಮಾರ್ ನಾರ್ಣಕಜೆ ಅಭಿನಯಿಸಿದ ರೀತಿ ನಿಜಕ್ಕೂ ಅದ್ಭುತವಾದುದು. ಈ ಪಾತ್ರವನ್ನು ಬೆಂಗಳೂರಿನಲ್ಲಿ ವಿಕ್ರಮ್ ಜಿ.ಟಿ. ಹಾಗೂ ಮಂಜುನಾಥ್ ಅವರು ಅಭಿನಯಿಸಿದರಾದರೂ ಗುತ್ತಿ ಪಾತ್ರದಲ್ಲಿ ತಾವಾಗಲು ಸಾಧ್ಯವೇ ಆಗಲಿಲ್ಲ. ಮೈಸೂರಿನಲ್ಲಿ ಅಭಿನಯಿಸದೆ ಬೆಂಗಳೂರಿನಲ್ಲಿ ಅಭಿನಯಿಸಿದ ಹೊಸ ಕಲಾವಿದರಲ್ಲಿ ಸುಬ್ಬಣ್ಣ ಹೆಗಡೆ, ಜಕ್ಕಿಣಿ, ಮಂಜಾ ಭಟ್ಟ ಪಾತ್ರವನ್ನು ನಿರ್ವಹಿಸಿದ ರಾಜೇಶ್ ಕುಂದರ್, ವನದೇವತೆ, ಕೊರವಂಜಿ, ಚಿನ್ನಮ್ಮ ಪಾತ್ರವನ್ನು ಅಭಿನಯಿಸಿದ ಸಲ್ಮಾ ಎ. ಹಾಗೂ ಇನ್ನಿತರ ಕೆಲವರ ಅಭಿನಯ ನಿಜಕ್ಕೂ ಪ್ರಶಂಸನೀಯವಾದುದು. ಆದರೂ ಬಸವಲಿಂಗಯ್ಯನವರು ಅನಂತ ಐಗಳ ಪಾತ್ರವನ್ನು ನಿರ್ವಹಿಸಿದ ವಿನಯ್, ಕಣ್ಣಾ ಪಂಡಿತ ಪಾತ್ರವನ್ನು ನಿರ್ವಹಿಸಿದ ಚೌಡೇಶ್‌ಮೂರ್ತಿ, ಅಂತಕ್ಕಶೆಟ್ಟಿ ಪಾತ್ರವನ್ನು ನಿರ್ವಹಿಸಿದ ಸುಮಾ ಕಣವಿ ಮೊದಲಾದ ಕಲಾವಿದರನ್ನು ತಿದ್ದುವ ಗೊಡವೆಗೆ ಹೋಗಿಲ್ಲ. ಅಷ್ಟೇ ಅಲ್ಲ, ಕೆಲವರ ಸಂಭಾಷಣೆ ಪಾತ್ರಕ್ಕೆ ಪೂರಕವಾಗಿರಲಿಲ್ಲ. ಇವುಗಳ ಕಡೆಗೂ ನಿರ್ದೇಶಕರು ಗಮನಹರಿಸಬೇಕಿತ್ತು.

ಬೆಂಗಳೂರಿನ ಮದುಮಗಳು ಪ್ರದರ್ಶನದ ನಂತರ ಇದೇ ನಾಟಕವನ್ನು ಕುಪ್ಪಳ್ಳಿಯಲ್ಲಿ ನಿರ್ಮಿಸಬೇಕೆಂಬ ಅಭಿಪ್ರಾಯಗಳೂ ಕೇಳಿಬಂದಿವೆ. ಈ ಸಂದರ್ಭದಲ್ಲಿ ಒಂದು ನಾಟಕ ಮತ್ತೆ ಮತ್ತೆ ಮರುನಿರ್ಮಾಣ – ಪ್ರಯೋಗ ಎಷ್ಟು ಸಮಂಜಸ? ಕುವೆಂಪು ಅವರ ಒಂದು ಕಥೆಯನ್ನೊ ಅಥವಾ ಇನ್ನಿತರ ಕನ್ನಡದ ಯಾವುದೇ ಮಹತ್ವದ ಕಥೆ–ಕಾದಂಬರಿಯನ್ನೊ ನಿರ್ಮಾಣ ಮಾಡಿದರೆ ಅದು ಹೆಚ್ಚು ಉಪಯುಕ್ತವಾಗುವುದಿಲ್ಲವೆ? ಅಂತೆಯೇ ಈ ನಾಟಕ ಮುಗಿದ ಮೇಲೆ ಮುಂದೇನು ಎನ್ನುವ ಪ್ರಶ್ನೆ ಹಲವು ಕಲಾವಿದರನ್ನು ಕಾಡುತ್ತಿದೆ. ರಂಗಾಯಣ ಈಗಾಗಲೇ ನಾಡಿನ ಬೇರೆ ಬೇರೆ ಕಡೆ ಘಟಕಗಳು ಸ್ಥಾಪನೆಯಾದ ಸಂದರ್ಭದಲ್ಲಿ ಇಂತಹ ಕಲಾವಿದರನ್ನು ಬಳಸಿಕೊಳ್ಳಲಿ. ಅಂತೆಯೇ ಇಲ್ಲಿ ತರಬೇತಿಗೊಂಡ ಕಲಾವಿದರಿಗೆ ಧಾರಾವಾಹಿ, ಸಿನಿಮಾಗಳಲ್ಲಿ ವಿಫುಲವಾದ ಅವಕಾಶ ಸಿಗಲಿ. ಆಗ ಅವರ ಬದುಕು ಭದ್ರವಾಗಿ ರಂಗಭೂಮಿಗೆ ಏನಾದರು ಕೊಡುಗೆ ಕೊಡಬಲ್ಲರು.

ಶಬ್ದವು ಮಾರಿದೇವತೆಗಾಗಿ ಭಕ್ತರು ಅಗ್ನಿಪ್ರವೇಶ ಮಾಡುವುದನ್ನು ಸೂಚಿಸುತ್ತದೆಂದು ಸಂಶೋಧಕರಾದ ಡಾ॥ ಎಂ.ಎಂ. ಕಲಬುರ್ಗಿ ಅಭಿಪ್ರಾಯಪಟ್ಟಿದ್ದಾರೆ. ಮೊದಲಿಗೆ ಕಲಬುರ್ಗಿಯವರು ಉರಿಯ ಉಯ್ಯಾಲೆ ಆಚರಣೆಯನ್ನು ಕುರಿತು ಈ ಆಚರಣೆ ಇಂದು ಜರುಗುತ್ತಿರುವ ಸ್ಥಳವಾಗಲೀ, ಇದರ ಸ್ವರೂಪವಾಗಲೀ ನಮಗೆ ತಿಳಿದುಬಂದಿಲ್ಲ. ಬಹುಶಃ ನೆಲದ ಮೇಲೆ ಉರಿಯನ್ನುಂಟು ಮಾಡಿ, ಮರಕ್ಕೆ ಕಟ್ಟಿದ ಜೋಕಾಲಿಯಿಂದ ಆ ಉರಿಯಲ್ಲಿ ಜೀಕಿ ಹೋಗುವ ಸಂಪ್ರದಾಯವಿರಬೇಕೆಂದು ಊಹಿಸುವ ಜೊತೆಗೆ ಮಂಡ್ಯ ಜಿಲ್ಲೆಯ ಕೃಷ್ಣರಾಜ ಪೇಟೆ ತಾಲ್ಲೂಕಿನ ತೋಣಚಿ ಗ್ರಾಮದ ಶಾಸನದಲ್ಲಿ 'ಉರಿಯ ಉಯ್ಯಲೆ' ಎಂಬ ಉಲ್ಲೇಖವಿರುವುದನ್ನು ತೋರಿಸಿಕೊಟ್ಟರು. ಆ ಬಳಿಕ 'ಉರಿಯ ಉಯ್ಯಲೆ' ಆಚರಣೆಗೆ ಸಂಬಂಧಿಸಿ ಹೆಚ್ಚಿನ ಶಾಸನಾಭ್ಯಾಸ ಮತ್ತು ಕ್ಷೇತ್ರಕಾರ್ಯ ನಡೆಸಿದ ಕಲಬುರ್ಗಿಯವರು, ಸೂರ್ಯಗ್ರಹಣ ಸಂದರ್ಭದಲ್ಲಿ ಸೂರ್ಯನ ಭಕ್ತರು ಸೂರ್ಯನಿಗಾಗಿ ಅಗ್ನಿಪ್ರವೇಶ ಮಾಡಿದ ವಿಷಯಗಳನ್ನೊಳಗೊಂಡ ಹಾನಗಲ್ಲ ತಾಲ್ಲೂಕಿನ ಶಿವಳ್ಳಿ ಶಾಸನ (ಕ್ರಿ.ಶ. 1141) ಬಾಳೂರು ಶಾಸನ (1130) ಹಾಗೂ ರೋಣ ತಾಲ್ಲೂಕಿನ ಕೌಜಗೇರಿಯ ಶಾಸನ ಚಿತ್ರ ಮುಂತಾದ ಆಕರಗಳ ಮಾಹಿತಿಗಳನ್ನು ಆಧರಿಸಿ 'ಉರಿಯ ಉಯ್ಯಲೆ' ಆಚರಣೆ ಕುರಿತು ಒಂದು ಖಚಿತ ತೀರ್ಮಾನಕ್ಕೆ ಬರುತ್ತಾರೆ. ಧಾರ್ಮಿಕ ಆತ್ಮಬಲಿ ಪ್ರಸಂಗದಲ್ಲಿ ಬೆಂಕಿಗೆ ಬೀಳಬೇಕಾದವರು ಉಯ್ಯಾಲೆಯ ಮೂಲಕ ಜೀಕುತ್ತಿದ್ದರೆಂದು ತಿಳಿದುಬರುತ್ತದೆ. ಹೀಗಾಗಿ ಜನ್ನ ಹೇಳುವ 'ಉರಿಯ ಉಯ್ಯಲೆ' ಎನ್ನುವುದು ಉಯ್ಯಲೆಯ ಮೂಲಕ ಉರಿಯಲ್ಲಿ ಜೀಕಿ ಪಾರಾಗುವುದನ್ನಲ್ಲ, ಉರಿಯ ಮೂಲಕ ಜೀಕಿ ಬೆಂಕಿಯಲ್ಲಿ ಬೀಳುವುದನ್ನು ಸೂಚಿಸುವುದೆಂದು ಈಗ ಹೇಳಬಹುದಾಗಿದೆ. ಕೌಜಗೇರಿ ಶಾಸನ ಸೂರ್ಯನಿಗಾಗಿ ಅಗ್ನಿ ಪ್ರವೇಶ ಮಾಡುವುದನ್ನು ಸೂಚಿಸಿದರೆ, ಯಶೋಧರ ಚರಿತೆ ಮಾರಿ ದೇವತೆಗಾಗಿ ಅಗ್ನಿ ಪ್ರವೇಶ ಮಾಡುವುದು ಸೂಚಿಸುತ್ತದೆ. ಆದರೆ ಎರಡೂ ಸಂದರ್ಭಗಳಲ್ಲಿ ಅಗ್ನಿಪ್ರವೇಶಕ್ಕಾಗಿ 'ಉಯ್ಯಲೆ'ಯನ್ನೆ ಬಳಸುತ್ತಿದ್ದರೆಂದು ಇದರಿಂದ ವ್ಯಕ್ತವಾಗುತ್ತದೆ. ಹೀಗೆ ಸಾಯುವ ಆಚರಣೆಗೆ 'ಉರಿಯ ಉಯ್ಯಲೆ' ಎಂಬ ಪದವನ್ನು ಪಾರಿಭಾಷಿಕವೆಂಬಂತೆ ಬಳಸುತ್ತಿದ್ದರೆಂದು ಸ್ಪಷ್ಟವಾಗುತ್ತದೆ." (ಡಾ.ಎಂ.ಎಂ. ಕಲಬುರ್ಗಿ, ಸಂಸ್ಕೃತಿ–ವಿಕೃತಿ' ಪುಟ:86, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, 2006)

ಇನ್ನು ಜನ್ನ ಹೇಳುವ 'ಮೂದಲೆಯುಲಿ'ಯನ್ನು ಕುರಿತು ಹೇಳುವುದಾದರೆ ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ನಡೆಯುವ ಮಾರಿ ಜಾತ್ರೆ, ದ್ಯಾಮವ್ವನ ಜಾತ್ರೆ, ಮರಿಗೆಮ್ಮ, ಮಲೆಯಮ್ಮ, ಎಲ್ಲಮ್ಮ ಮುಂತಾದ ದೇವರ ಮಹಿಮೆ ಸಾರಲು ಬಂದ ಆಸಾದಿಗಳು, ಪೋತರಾಜರು, ಚೌಡಿಕೆಯವರು ಮುಂತಾದವರು ದೇವರ ಮುಂದೆ ಚೌಡಿಕೆ ನುಡಿಸುತ್ತಾ ಅಥವಾ ಹಲಗೆ ಬಾರಿಸುತ್ತಾ ಚಿಂದುಲು ಕುಣಿದುಕೊಂಡು ದೇವರನ್ನು ನೆರೆದ ಭಕ್ತರನ್ನೂ ಮೇಲ್ಜಾತಿವಂದಿಗರನ್ನು ಅಶ್ಲೀಲ ಶಬ್ದಗಳಿಂದ ಹೀನಮಾನ ಬೈಯುತ್ತಾರೆ. ಅಶ್ಲೀಲ ಬೈಗುಳಗಳನ್ನು ಹಾಡುಗಳ ರೂಪದಲ್ಲಿ ಸಾಭಿನಯವಾಗಿ ಹಾಡುತ್ತಾರೆ. ಇದರಿಂದ ದೇವತೆಗಳು ಸಂಪ್ರೀತವಾಗಿ ಭಕ್ತರಿಗೆ ಸುಖ–ಸಮೃದ್ಧಿಗಳನ್ನು ಕರುಣಿಸುತ್ತಾರೆಂದು ನಂಬುತ್ತಾರೆ. ಆಸಾದಿ ವೃತ್ತಿಗಾಯಕರು, ದಿಂಸಾಳೆ ಗಾಯಕರು ಬೈಯುವ ಬೈಗುಳಗಳನ್ನು ಸಾವಿರಾರು ಭಕ್ತರು ಕುತೂಹಲದಿಂದ ಕೇಳಿಸಿಕೊಂಡು ಗಾಯಕರಿಗೆ ಕಾಣಿಕೆಗಳನ್ನು ಅರ್ಪಿಸುತ್ತಾರೆ. ಬೈಯುವುದಕ್ಕಿಂತಲೂ ತೀರಾ ಅನಾಗರೀಕವೆನ್ನಿಸುವ ಚಪ್ಪಲಿಸೇವೆ ವಿಧಾನದಿಂದಲೂ ದೇವತೆಗಳನ್ನು ಆರಾಧಿಸುವುದನ್ನು ಕಾಣುತ್ತೇವೆ. ಇಂತಹ ಪೂಜಾ ವಿಧಾನದಿಂದಲೇ 'ಸಮಗಾರದೇವರಿಗೆ ಮಚ್ಚಿಪೆಟ್ಟು' ಎಂಬ ಗಾದೆ ಮಾತು ಹುಟ್ಟಿಕೊಂಡಿದೆ. ಡಾ. ಎಂ.ಎಂ. ಕಲಬುರ್ಗಿಯವರು "ಚಪ್ಪಲಿಯಿಂದ ಹೊಡೆಸಿಕೊಳ್ಳುವ ದೇವತೆಗಳು ಮೂಲತಃ ವ್ಯಕ್ತಿಗಳಾಗಿದ್ದು, ತಮ್ಮ ತಮ್ಮ ಸಮಾಜಬಾಹಿರ ದುಷ್ಪ್ರವರ್ತನೆಯಿಂದಾಗಿ ಜನರ ಕ್ರೋಧಕ್ಕೆ ಗುರಿಯಾಗಿರಬೇಕು. ಜನತೆ ಅವರನ್ನು ಕೊಂದು 'ದುಷ್ಟರಿಗೆ ಶಿಕ್ಷೆ' ಎಂಬ ಸಂದೇಶವನ್ನು ಲೋಕಕ್ಕೆ ಸಾರುವ ರೀತಿಯಲ್ಲಿ ಅವರ ಹೆಸರಿನಲ್ಲಿ ಕಲ್ಲನ್ನೋ, ವಿಗ್ರಹವನ್ನೋ ನೆಟ್ಟು ಬೈಯ್ಯುವ, ಒದೆಯುವ, ಚಪ್ಪಲಿಯಿಂದ ಹೊಡೆಯುವ ಕ್ರಿಯೆಗಳನ್ನು ರೂಢಿಸಿರಬೇಕು. ಬರಬರುತ್ತ ಅವರ ದುಷ್ಪಘಟನೆಗಳು ಜನರ ನೆನಪಿನಿಂದ ಜಾರಿಹೋಗಿ ಬಯ್ಯುವ, ಒದೆಯುವ, ಚಪ್ಪಲಿಯಿಂದ ಹೊಡೆಯುವ ಕ್ರಿಯೆಗಳನ್ನು ಮಾತ್ರ ಪೂಜೆಯ ಒಂದು ಭಾಗವೆಂದು ಅವರು ಭ್ರಮಿಸಿಕೊಂಡು, ನಿಂದೆಯ ಸ್ಥಾನದಲ್ಲಿ ಭಕ್ತಿಯನ್ನು ಬೆಳೆಸಿಕೊಂಡಂತಿದೆ". *** (ಡಾ.ಎಂ.ಎಂ. ಕಲಬುರ್ಗಿ, ಸಂಸ್ಕೃತಿ–ವಿಕೃತಿ' ಪುಟ:97, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, 2006)

ದೇವರಿಗೆ ಚಪ್ಪಲಿಗಳನ್ನು ಅರ್ಪಿಸಿ ಆರಾಧಿಸುವ ಪೂಜಾ ವಿಧಾನವನ್ನು ಮೈಲಾರಲಿಂಗನ ಪರಂಪರೆಯಲ್ಲಿಯೂ ಸಹ ನೋಡುತ್ತೇವೆ. ಚರ್ಮವನ್ನು ಹದಗೊಳಿಸಿ ಚಮ್ಮಾಳಿಗೆ ಹೊಲಿದು ಕೊಡುವ ಕುಶಲಕರ್ಮಿಗಳಾದ ಮಾದಿಗರು ಪರಂಪರಾನುಗತವಾಗಿ ಕುಳವಾಡಿಕೆಯ ಪ್ರಕಾರ ಮೈಲಾರಲಿಂಗನಿಗೆ ಪ್ರತಿವರ್ಷ ಕಾರಣಿಕದ ಸಂದರ್ಭದಲ್ಲಿ ಒಂದು ಜೊತೆ ಚರ್ಮದ ಮೆಟ್ಟುಗಳನ್ನು ಅರ್ಪಿಸುತ್ತಿದ್ದಾರೆ. ವಿಶ್ವಬ್ರಹ್ಮನ ತಾಯಿಯಾದ ಕಾಳಿಕಾ ಮಾತೆಯ ಮಾದಿಗರು ಚರ್ಮ ಹದಗೊಳಿಸಲು ಬಳಸುವ ಗಲ್ಲೆಬಾನಿ(ಕಾಳಿಮಂತು)ಯ ಪವಿತ್ರ ಕರಿಜಲದಲ್ಲಿ ಹುಟ್ಟಿದವಳು. 12 ನೇ ಶತಮಾನದಲ್ಲಿ ಹರಳಯ್ಯನ ಗಲ್ಲೆಬಾನಿಯ ಜಲ ಸೋಕಿ ಬ್ರಾಹ್ಮಣರ ಮಧುವರಸನ ಮೈನವೆ ನಿವಾರಣೆಯಾಗುತ್ತದೆ. ಹರಳಯ್ಯ ಮತ್ತು ಕಲ್ಯಾನಮ್ಮನವರು ತಮ್ಮ ತೊಡೆ ತೊಗಲು ಸುಲಿದು ಹೊಲೆದುಕೊಟ್ಟ ಉರಿಚಮ್ಮಾಳಿಗೆ(ಕೆರ)ಗಳನ್ನು ಬಸವಣ್ಣನು ತಲೆ ಮೇಲೆ ಹೊತ್ತು ಪೂಜಿಸುತ್ತಾನೆ. ಮೆಟ್ಟು ಹೊಲೆಯುವ ಸೃಜನಶೀಲ ಕೌಶಲ್ಯದ ಮಾದಿಗರು ಒಂದು ಜೊತೆ ಚಿತ್ತಾರದ ಚಪ್ಪಲಿಗಳನ್ನು ಹೊಲಿದು ಮೈಲಾರಲಿಂಗನಿಗೆ ಅರ್ಪಿಸಿ ತಮ್ಮ ಸೇವೆಯನ್ನು ನೆರವೇರಿಸುತ್ತಾರೆ. ಅವುಗಳನ್ನು ಮೈಲಾರ ಲಿಂಗನು ಮೆಟ್ಟಿ ನಡೆದಾಡುತ್ತಾನೆಂದು ಅವರು ನಂಬುತ್ತಾರೆ. ಕಷ್ಟ ಕಾರ್ಪಣ್ಯಗಳಲ್ಲಿ ಸಿಲುಕಿ ನೊಂದ ಜನ, ಶುಭ ಫಲಗಳನ್ನು ಬೇಡಿ ಹರಕೆ ಹೊತ್ತ ಭಕ್ತರು ಕಾರಣಿಕದ ದಿವಸ ಈ ಮೆಟ್ಟುಗಳನ್ನು ಭಕ್ತಿ ಭಾವಗಳಿಂದ ನಮಸ್ಕರಿಸಿ ಎರಡೂ ಕೈಗಳಿಂದ ಮೇಲೆತ್ತಿ ಕಣ್ಣುಗಳಿಗೆ ಸ್ಪರ್ಶಿಸಿಕೊಳ್ಳುತ್ತಾರೆ. ಮೆಟ್ಟುಗಳನ್ನು ಎತ್ತಿ ನೋಡಿದಾಗ ಹಗುರವಾಗಿದ್ದರೆ ಅವರ ಕೆಲಸಗಳು ಹೂವಿನ ಸರ ಎತ್ತಿದಷ್ಟು ಹಗುರವಾಗಿ ನಡೆಯುತ್ತವೆಂದೂ, ಇಲ್ಲದಿದ್ದರೆ ಕಷ್ಟ ನಷ್ಟ ಅನುಭವಿಸಬೇಕಾಗುತ್ತದೆಂದೂ ನಂಬುತ್ತಾರೆ.

ದೇವರನ್ನು ಮತ್ತು ಭಕ್ತರನ್ನೂ ಅಶ್ಲೀಲ ಬೈಗುಳಗಳಿಂದ ಬೈಯುವುದಾಗಲಿ, ಉಗುಳುವುದಾಗಲಿ, ಅಥವಾ ಮೂದಲಿಸುವುದಾಗಲಿ ಮಾರಿ ಜಾತ್ರೆಯ ಆಚರಣಾ ವಿಧಿಯಾಗಿ ಇಂದಿಗೂ ಜಾರಿಯಲ್ಲಿದೆ. ಜನ್ನ ಕವಿಯ ಕಾಲದಲ್ಲಿಯೂ ಸಹ ಮಾರಿ ಜಾತ್ರೆಯ ಅಂಗವಾಗಿ 'ಮೂದಲಿಕೆಯ ಉಲಿ' ಎಂಬ ಆಚರಣೆ ಇತ್ತೆಂದು ಯಶೋಧರ ಚರಿತೆಯ ಪದ್ಯದಿಂದ ತಿಳಿದುಬರುತ್ತದೆ. ಈ ಹೀಗಳಿಯುವಿಕೆಯು ಕೇವಲ ಭಾಷೆಗೆ ಸಂಬಂಧಪಟ್ಟ ಕ್ರಿಯೆಯಾಗಿರದೆ ದೇವತೆಯ ಮುಂದೆ ದೇವರನ್ನು ಮತ್ತು ಭಕ್ತರನ್ನು ಉದ್ದೇಶಿಸಿ ಮಂಡಿತವಾಗುತ್ತಿದ್ದ ಅಶ್ಲೀಲ ಶಬ್ದಗಳು ಸಾಮಾಜಿಕ ಅನ್ಯಾಯದ ನೆಲೆಗಳ ವಿಶ್ಲೇಷಣೆಯೂ ಆಗಿರುತ್ತದೆ. ದೇವರನ್ನು ಮತ್ತು ಭಕ್ತರನ್ನು ಅವಾಚ್ಯವಾಗಿ ನಿಂದಿಸುವುದು ಪುರೋಹಿತರ ಮಂತ್ರ ನೈವೇದ್ಯಗಳ ಪೂಜಾಕ್ರಮದ ವಿರುದ್ಧ ಆದಿಮ ಸಮುದಾಯಗಳ ದಂಗೆಕೋರ ಪೂಜಾವಿಧಿಯ ಪ್ರತಿಷ್ಠಾಪನೆಯೂ ಆಗಿರುತ್ತದೆ. ಜನ್ನನ ಕಾವ್ಯದಲ್ಲಿ ಬರುವ ಮಾರಿ ದೇವತೆಗೆ ನರಬಲಿಯ ಜೊತೆಗೆ ಪಶುಬಲಿಯನ್ನು ನೀಡಲಾಗುತ್ತದೆ. ಇಂದಿಗೂ ನರಬಲಿಯನ್ನೇ ಸಂಕೇತಿಸುವ ಮಾರಿ ಕೋಣದ ಬಲಿಯನ್ನು ಮಾರಿ ಜಾತ್ರೆಗಳಲ್ಲಿ ಆಚರಣೆಯಲ್ಲಿರುವುದನ್ನು ನೋಡುತ್ತೇವೆ. ಆದರಿಂದ ಜನ್ನನು ಹೇಳುವ 'ಸಿರದ ಗಾಳ', 'ಉರಿಯ ಉಯ್ಯಲೆ' ಮತ್ತು 'ಮೂದಲೆಯ ಉಲಿ' ಈ ಮೂರು ವಿಧದ ಜನಪದ ಆಚರಣಾವಿಧಿಗಳು ಆದಿಜಾಂಬವರು ಇಂದಿಗೂ ಚಾಲ್ತಿಯಲ್ಲಿಟ್ಟಿರುವ ಜಾನಪದ ಕ್ರಿಯೆಗಳೇ ಆಗಿವೆ.

## ಈ ತೆಪ್ಪದ ದೀಪ ಸಾಲು...



## ಹೌದು ಅವರೇ..

ಅದನ್ನೆಲ್ಲಾ ತಿನ್ನಬಾರದು
ಎನ್ನುತಿದ್ದವರು ಈಗ
ಏನೇನನ್ನೋ ತಿನ್ನುತ್ತಿದ್ದಾರೆ..

ನೆಲದ ಕಣ್ಣಿಗೆ ಪೊರೆ ಬರಿಸಿ
ಹೆಜ್ಜೆಗಳ ವಿಂಗಡಿಸಿ ಗೆಜ್ಜೆಗಳ ಕದ್ದೋರು
ಕದ್ದ ಗೆಜ್ಜೆಗಳನೆಲ್ಲಾ ಫಜ್ಲ ಮಹಮದ್ದನಿಗೆ
ಮೂರು ಕಾಸಿಗೆ ಮಾರಿ ಬುಕ್ಕುಗಳ
ಬರೆದೋರು

ಯುಗದ ಹಾದಿಯ ತುಂಬಾ
ಮುಳ್ಳುಗಳ ನೆಟ್ಟು
ಕಾಲ ನೆತ್ತರಿನಲ್ಲಿ
ಮುಕ್ಕೋಟಿ ದೇವರ ಚಿತ್ರಗಳ
ಬಿಡಿಸಿದೋರು
ಬದುಕು ಬದುಕುಗಳ ಉಂಡು
ಬೆಳ್ಳಗೆ ನಕ್ಕೋರು

ಗಾಂಧೀ ಮಾತ್ಮನ ಹೊತ್ತು
ಪೇಟೆಗಳ ಅಲೆದು ಬಾಡು ತಿನ್ನುವ
ಬಾಯಿಗಳ ಕಟ್ಟಿದೋರು ..
ಅಹಿಂಸೆಯ ನೆಪದಲ್ಲೇ
ಮಾನಭಂಗವ ಮಾಡಿ 'ಎಲ್ಲ
ಒಂದೇ' ಎಂದು
ಬೊಗಳೆ ಬಿಟ್ಟೋರು ..

ಬಿಳಿಬಟ್ಟೆ ಉಟ್ಟೋರು
ಕೆಂಪನ್ನೂ ಬಿಡದೋರು
ಹಸಿರು ಕ್ರಾಂತಿಯೆಂದು
ಕಳೆಗಿಡವ ನೆಟ್ಟೋರು..

ಹೌದು ಅವರೇ..
ಈಗ ಇಲ್ಲೇ ನಮ್ಮ ಅಂಗಡಿಯೆದುರು
ನಿಂತು
ಮಿಕ್ಕ ಮೂಳೆಗಳ ಆಯ್ದು ಮೂಟೆ
ಕಟ್ಟುತಾವರೆ..

ನಾವು ಅವರ ವರಸೆ ಕಂಡು ನಗ್ತಾ..
ಬಿದ್ದಿದ್ದೀವಿ....

–ಹುಲಿಕುಂಟೆ ಮೂರ್ತಿ

ಆದಿಮ ಲಿವಿಂಗ್ ಟೈಮ್ಸ್

ಇದು ನಮ್ಮ ಸಂಪರ್ಕ ವಿಳಾಸ...
ಆದಿಮ ಲಿವಿಂಗ್ ಟೈಮ್ಸ್
ನಂ.1007, ಸಿದ್ಧಾರ್ಥ ಲೇಔಟ್, ಚನ್ನಸಂದ್ರ ರೋಡ್,
ಕಾಡುಗೋಡಿ. ಬೆಂಗಳೂರು–67. 9945208735
ಪತ್ರಿಕೆಗೆ ಸಂಬಂಧಿಸಿದ ಲೇಖನಗಳನ್ನು

ಈ ವಿಳಾಸಕ್ಕೆ ಕಳುಹಿಸಿ
email: laxmipathicg@gmail.com
shripad.budi@gmail.com
arunodayagc@gmail.com
Ph: 9945321970, 9880453799

Book Post

Editor, Publisher, Printer : Kotiganahalli Ramaiah, Address:1007, Sidhartha layout, channasandra Raod, Kadugodi.
Bangalore-67. Phone No : 9972193392, email: adimalivingschool@gmail.com, www.adimalivingtimes.blogspot.com